ಶ್ರೀ ಡಿ.ಬಿ. ಇನಾಂದಾರ್: ಕೌನ್ಸಿಲ್‌ಗೆ ಕೂಡ ಹೋಗಬೇಕಾಗಿದೆ. ಇದರ ಉದ್ದೇಶ ಏನೆಂದರೆ, ಅಥಾರಿಟಿ ಕ್ರಿಯೇಟ್ ಮಾಡುವುದು ಅಷ್ಟೆ. ಅಕ್ವಿಸಿಷನ್ ಇಲ್ಲ, ಬೇರೆ ಇಲ್ಲ. ಸರ್ಕಾರದಿಂದ ಕಾಮನ್ ಫೆಸಿಲಿಟೀಸ್ ಮಾಡಬೇಕೆಂದು ಇದೆ.

ಶ್ರೀ ಎಸ್. ಸುರೇಶ್ ಕುಮಾರ್: ನನ್ನ ಪಾಯಿಂಟ್ ಆಫ್ ಆರ್ಡರ್‌ಗೆ ರೂಲಿಂಗ್ ಕೊಡುತ್ತೀರಾ?

ಅಧ್ಯಕ್ಷರು: ಮ್ಯಾಚ್ಯುಯಲ್ ಅಂಡರ್‌ಸ್ಟಾಂಡಿಂಗ್ ನೀವು ಒಪ್ಪಿಕೊಂಡಿದ್ದರಿಂದ ನಾನು ಹೇಳಿದೆ.

ಶ್ರೀ ಡಿ.ಬಿ. ಇನಾಂದಾರ್: ಮಾನ್ಯ ಸುರೇಶ್ ಕುಮಾರ್‌ರವರು ದಯವಿಟ್ಟು ಇದರ ಬಗ್ಗೆ ಸ್ವಲ್ಪ ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್: ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ, ನಮ್ಮ ಜೊತೆ ದಯವಿಟ್ಟು ಸಹಕರಿಸಲಿ. ಇದು ಹೊಸ ಬಿಲ್. ಮತ್ತು ಬಹಳ ವ್ಯಾಪ್ತಿ ಇರುವ ಬಿಲ್.

ಅಧ್ಯಕ್ಷರು: ನಾಳೆ ಮೊದಲು ನಿಮ್ಮ ಬಿಲ್ ಪಾಸ್ ಮಾಡಿ ನಂತರ ಬೇರೆ ಬಿಸ್‌ನಸ್ ತೆಗೆದುಕೊಳ್ಳೋಣ. Nothing to worry.

ಶ್ರೀ ಎಸ್. ಸುರೇಶ್ ಕುಮಾರ್: ನಾಳೆ ಮುಖ್ಯ ಮಂತ್ರಿಗಳಿಗೆ ಕೇಳಿಕೊಂಡು ಸದನ ನಾಡಿದ್ದು ಬೇಕಾದರೆ ಮುಂದಕ್ಕೆ ಹಾಕೋಣ.

ಅಧ್ಯಕ್ಷರು: ಅದು ಆಗದೇ ಇರುವ ಕೆಲಸ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ನಾಳೆ ಬೆಳಿಗ್ಗೆ ಚರ್ಚೆಗೆ ತೆಗೆದುಕೊಂಡು ನಾಳೆ ಮಧ್ಯಾಹ್ನ ಆದರೂ ಮಾಡಿ.

9. ವಿತ್ತೀಯ ಕಾರ್ಯಕಲಾಪಗಳು

†ಶ್ರೀ ಬಿ. ಸೋಮಶೇಖರ್ (ಮಳವಳ್ಳಿ): 2003–04ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆ (ಮುಂದು) ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ಈ ಬಜೆಟ್‌ನಲ್ಲಿ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯಮಂತ್ರಿಗಳು ಪ್ರತಿ ತಾಲ್ಲೂಕಿನಲ್ಲಿ ಗ್ರಾಮೀಣ ಪ್ರತಿಭಾವಂತ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ವ್ಯವಸ್ಥೆ ಕಲ್ಪಿಸಿ ಅವರಿಗೆ ಅವಕಾಶಗಳ ಹೆಬ್ಬಾಗಿಲು ತೆರೆಯಲು ನಾನು ರಾಜ್ಯದ 27 ಜಿಲ್ಲೆಗಳಲ್ಲಿಯೂ ಒಂದೊಂದು ಕುವೆಂಪು ಶತಮಾನೋತ್ಸವ ಮಾದರಿ ಕನ್ನಡ ಶಾಲೆ ತೆರೆಯುತ್ತೇನೆಂದು ಹೇಳಿದ್ದಾರೆ. ಅದರಲ್ಲಿ ಇನ್ನೊಂದು ವಿಚಾರವೇನು ಹೇಳಿದ್ದಾರೆಂದರೆ These schools with State of the art infrastructure, laboratories and computers will be promoted through pubic-private partnerships and would provide a platform to rural children to access a modern, secular and scientific Education and prepare them to become global citizens. ಇದಲ್ಲದೇ ಪ್ರಾಥಮಿಕ ಶಿಕ್ಷಣದಲ್ಲಿ ಆಂಗ್ಲ ಮಾಧ್ಯಮ ಶಿಕ್ಷಣದ ಬಗ್ಗೆ ಮಾನ್ಯ ಸಚಿವರು ಏನು ಹೇಳಿದ್ದಾರೆಂದರೆ ಐದನೇ ತರಗತಿಯಿಂದ ಇಂಗ್ಲೀಷ್ ಮಾಧ್ಯಮದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಮಕ್ಕಳು ಓದತಕ್ಕಂಥದ್ದರ ಬಗ್ಗೆ ಹೇಳಿದ್ದಾರೆ. ಈಗ ತಮಿಳುನಾಡು ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಈಗ ಆಗುತ್ತಿರುವ ಬದಲಾವಣೆಯ ಹಿನ್ನಲೆಯಲ್ಲಿ ಮತ್ತು ಜಾಗತೀಕರಣದ ಹಿನ್ನಲೆಯಲ್ಲಿ ಗ್ರಾಮೀಣ ಪ್ರದೇಶದ ಮಕ್ಕಳು ಈ ವಿಶ್ವದ ಚಟುವಟಿಕೆಗಳಲ್ಲಿ ವಂಚಿತರಾಗಬಾರದು ಎಂದು ತಿಳಿದು ಮೊದಲನೆಯ ತರಗತಿಯಿಂದಲೇ ಇಂಗ್ಲೀಷ್ ಮಾಧ್ಯಮದಲ್ಲಿ ಶಿಕ್ಷಣವನ್ನು ಮಾಡಬೇಕೆನ್ನುವ ನಿಯಮವನ್ನು ತಂದಿದ್ದಾರೆ. ರಾಮಚಂದ್ರಪ್ಪನವರು ಒಂದು ವರದಿಯನ್ನು ಕೊಟ್ಟು ಮೂರನೇ ತರಗತಿಯಿಂದಲೇ ಇಂಗ್ಲೀಷ್

(†ಈ ಚಿಹ್ನೆ ಮಾನ್ಯ ಸದಸ್ಯ ಟಿಪ್ಪಣೆ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ)

ಮಾಧ್ಯಮದಲ್ಲಿ ಮಕ್ಕಳಿಗೆ ಶಿಕ್ಷಣವನ್ನು ಕೊಡಬಹುದು ಎಂದು ಹೇಳಿದ್ದಾರೆ. ಈ ಮಂತ್ರಿಗಳು 5ನೇ ವರ್ಷದಿಂದ ಎಂದು ಹಿಂದೆ ಏನು ಇದೆ ಅದನ್ನೇ ಇಟ್ಟುಕೊಂಡಿದ್ದಾರೆ. ಯಾವ ಬದಲಾವಣೆಯನ್ನು ಮಾಡಲಿಲ್ಲ. ನಾನು ಕೇಳುತ್ತೇನೆ. ಈ ಇಂಗ್ಲೀಷ್ ಮೀಡಿಯಂನನ್ನು ಮೊದಲನೆಯ ತರಗತಿಯಿಂದಲೇ ಪ್ರಾರಂಭ ಮಾಡದೆ How can we expect these children to become global citizens? if they cannot learn English from the childwood how can they be empowered to know the world activities in view of the globalisation, privatisation and technique innovations? ಅಂಥದ್ದರಲ್ಲಿ ಈ ಸರ್ಕಾರ ಅದರ ಬಗ್ಗೆ ಸ್ಪಷ್ಟವಾದಂಥ ನಿಲುವನ್ನು ತೆಗೆದುಕೊಳ್ಳಬೇಕು. ಅದರ ಬಗ್ಗೆ ಮಾನ್ಯ ಪ್ರೊಫೆಸರ್ ಚಂದ್ರಶೇಖರ್‌ರವರು ಏನನ್ನೂ ಹೇಳಲಿಲ್ಲ. ಇನ್ನು ಶಿಕ್ಷಕರ ನೇಮಕಾತಿ, ವರ್ಗಾವಣೆಯಲ್ಲಿ ಒಂದು ದೊಡ್ಡ ದಂಧೆಯೇ ಆಗಿದೆ. ನಮ್ಮ ಸರ್ಕಾರವಿದ್ದಾಗ ಕೌನ್ಸಲಿಂಗ್ ಎಂದು ಮಾಡಿ ಯಾವುದೇ ಒಂದು ಹಸ್ತಕ್ಷೇಪವಿಲ್ಲದೆ ಶಿಕ್ಷಕರ ವರ್ಗಾವಣೆ ಆಗುತ್ತಿತ್ತು. ಆದರೆ ಇವೊತ್ತು ಏನಾಗಿದೆಯೆಂದರೆ ಬೆಂಗಳೂರಿನಲ್ಲಿ 50 ವೆಕೆನ್ಸೀಸ್ ಇದ್ದರೆ 500 ಶಿಕ್ಷಕರನ್ನು ನೀವು ತುಂಬಿದ್ದೀರಿ. ಆ ಶಿಕ್ಷಕರಿಗೋಸ್ಕರ ಇಡೀ ಸೆಕ್ಷನ್‌ಗಳನ್ನೇ ವರ್ಗಾವಣೆ ಮಾಡುವುದು. ಬೆಂಗಳೂರಿಗೆ. ಅಂದರೆ ಗ್ರಾಮೀಣ ಪ್ರದೇಶದಲ್ಲಿ ಓದುತ್ತಿರುವ ಮಕ್ಕಳಿಗೆ ಶಿಕ್ಷಕರೇ ಇಲ್ಲ. ದೂರದ ಗ್ರಾಮಗಳಿಗೆ ಯಾರೂ ಸಹ ಶಿಕ್ಷಕರು ಸಿಗುತ್ತಿಲ್ಲ. ಹಾರ್‍ನಳ್ಳಿ ರಾಮಸ್ವಾಮಿಯವರ ಆಡಳಿತ ಸುಧಾರಣಾ ವರದಿಯಲ್ಲಿ ಇದನ್ನೇ ಹೇಳಿದ್ದಾರೆಯೇ ಎಂಬ ಬಗ್ಗೆ ನಾನು ಕೇಳಬಯಸುತ್ತೇನೆ. ಇನ್ನು ನಮ್ಮ ಮುಖ್ಯಮಂತ್ರಿಗಳು ಗ್ರಾಮೀಣ ಪ್ರದೇಶದಲ್ಲಿ ಮೂಲಭೂತ ಸೌಲಭ್ಯಗಳನ್ನು ಉನ್ನತಪಡಿಸಲು ಮತ್ತು ರೈತರ ಸಮಸ್ಯೆಗಳನ್ನು ಪರಿಹಾರ ಮಾಡಲು ಕೆಲವು ಪ್ಯಾಕೇಜ್‌ಗಳನ್ನು ಘೋಷಣೆ ಮಾಡಿದರು. ಅದು ಬಳ್ಳಾರಿ ಪ್ಯಾಕೇಜ್ ಇರಬಹುದು, ಉತ್ತರ ಕರ್ನಾಟಕದ ಪ್ಯಾಕೇಜ್ ಇರಬಹುದು, ಮಂಡ್ಯ ಪ್ಯಾಕೇಜ್ ಇರಬಹುದು ಹೀಗೆ ಅನೇಕ ಪ್ಯಾಕೇಜ್‌ಗಳನ್ನು ಘೋಷಣೆ ಮಾಡಿದರು. ಅದರಲ್ಲಿ ಯಾವ ಯಾವ ಪ್ಯಾಕೇಜ್‌ಗಳಲ್ಲಿ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಿದ್ದಾರೆ, ಯಾವ ಹಂತದಲ್ಲಿದೆ ಯಾವ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ ಎಂದು ಕೇಳಿದರೆ ಅದು ಕೇವಲ ಪ್ಯಾಕೇಜ್‌ಗಳಿಗಾಗಿಯೇ ಉಳಿದಿವೆ. ಒಂದು ಉದಾಹರಣೆ ಕೊಡುವುದಾದರೆ ಕಳೆದ ವರ್ಷದ ಬಜೆಟ್‌ನಲ್ಲಿ ರಸ್ತೆಗಳನ್ನು ನಿರ್ಮಾಣ ಮಾಡುವ 'ನಮ್ಮ ಹೊಲ ನಮ್ಮ ರಸ್ತೆ' ಎನ್ನುವ ಯೋಜನೆಯನ್ನು ಹೇಳಿದ್ದರು. ಅದು ಹಾಗೆಯೇ ಇದೆಯೇ ಹೊರತು ಒಂದು ರೂಪಾಯಿಯನ್ನು ಇದಕ್ಕೆ ಕೊಟ್ಟಿಲ್ಲ. ಅಂದರೆ ಈ ಯೋಜನೆಯಲ್ಲಿ ಹೊಲಗಳಿಗೆ ಹೋಗತಕ್ಕಂಥ ಕಡೆ ರಸ್ತೆಗಳನ್ನು ನಿರ್ಮಾಣ ಮಾಡುವುದು ಇತ್ತು. ಉದ್ದೇಶ ಒಳ್ಳೆಯದಿತ್ತು. ಆದರೆ ಈ ಯೋಜನೆಯೇ ಮೇಲೆ ಬರಲೇ ಇಲ್ಲ. ನಮ್ಮ ಮಂಡ್ಯ ಜಿಲ್ಲೆಗೆ 300 ಕೋಟಿ ರೂಪಾಯಿಗಳ ಒಂದು ಪ್ಯಾಕೇಜ್‌ನ್ನು ಕೊಟ್ಟು ಎಲ್ಲರ ಕೆಂಗಣ್ಣಿಗೆ ನಮ್ಮನ್ನು ಗುರಿ ಮಾಡಿದರು. 300 ಕೋಟಿ ರೂಪಾಯಿಗಳ ಪ್ಯಾಕೇಜ್‌ನ್ನು ಮಂಡ್ಯಕ್ಕೆ ಕೊಟ್ಟಿದ್ದಾರೆ, ಇದರಲ್ಲಿ ಒಂದು ವರ್ಷಕ್ಕೆ 100 ಕೋಟಿ ರೂಪಾಯಿಗಳಂತೆ ಕೊಡುತ್ತಾರೆ ಎಂದು ಎಲ್ಲರ ಕೆಂಗಣ್ಣಿಗೆ ನಾವು ಗುರಿಯಾದೆವು. ಎಲ್ಲರೂ ಟೀಕೆ ಮಾಡಿ ಮುಖ್ಯಮಂತ್ರಿಗಳು ತಮ್ಮ ಜಿಲ್ಲೆಗೆ ಪ್ಯಾಕೇಜ್ ಮಾಡಿಕೊಂಡಿದ್ದಾರೆ ಎಂದರು. ಆದರೆ ನಾನು ಟೀಕೆ ಮಾಡದೇ ಸುಮ್ಮನಿದ್ದೆ. ಏಕೆಂದರೆ ನಮ್ಮ ಜಿಲ್ಲೆಗೆ ಪ್ಯಾಕೇಜ್ ಬರುತ್ತಿದೆಯೆಂದು. ಏಕೆಂದರೆ ಇದರಿಂದ ಸ್ವಲ್ಪ ಅನುಕೂಲ ನಮ್ಮ ಜಿಲ್ಲೆಗೆ ಆಗಬಹುದೇನೋ ಎಂದು ನಾನು ವಿರೋಧ ಪಕ್ಷದಲ್ಲಿದ್ದರೂ ಇದರ ಬಗ್ಗೆ ಟೀಕೆ ಮಾಡಲಿಲ್ಲ. ಆದರೆ ಇಲ್ಲಿಯವರೆವಿಗೂ ಈ ಹೊಸ ಪ್ಯಾಕೇಜ್‌ನಡಿಯಲ್ಲಿ ಒಂದು ರೂಪಾಯಿಯೂ ಬಿಡುಗಡೆ ಆಗಿಲ್ಲ. ಮಂಡ್ಯದಲ್ಲಿ ಫಸ್ಟ್ ಫೇಸ್‌ನಲ್ಲಿ ಇನ್ನೂ ಒಂದು ರೂಪಾಯಿಯನ್ನೂ ಬಿಡುಗಡೆ ಮಾಡಿಲ್ಲ. ಇವೊತ್ತಿಗೆ ಮೂರು ಫೇಸ್ ಆಗಿಬಿಟ್ಟಿರಬೇಕಾಗಿತ್ತು. ಈ ರೀತಿ ಸುಮ್ಮನೆ 300 ಕೋಟಿ ರೂಪಾಯಿ ಪ್ಯಾಕೇಜ್ ಎಂದು ಹೇಳಿ ನಮ್ಮನ್ನು ಟೀಕೆಗೊಳಪಡಿಸಿದರು.

ಶ್ರೀ ಎಸ್.ಎಸ್. ಪಾಟೀಲ್: ಇದರಲ್ಲಿ ನಿಮ್ಮದೂ ಸ್ವಾರ್ಥ ಇತ್ತು. ಅದಕ್ಕೆ ಟೀಕೆ ಮಾಡಲಿಲ್ಲವೇನು?

ಶ್ರೀ ಬಿ. ಸೋಮಶೇಖರ್: ನಮ್ಮ ತಾಲ್ಲೂಕು ಕೂಡ ಅಭಿವೃದ್ಧಿಯಾಗುತ್ತದೆಂದರೆ ಒಳ್ಳೆಯದಲ್ಲವೇ? ಅದಕ್ಕೋಸ್ಕರ ನಾನು ಟೀಕೆ ಮಾಡಲಿಲ್ಲ. ಅದೂ ಅಲ್ಲದೇ ಅವರು ಏನು ಹೇಳಿದ್ದರೆಂದರೆ ಈ ವರ್ಷ ಪ್ರಥಮವಾಗಿ ಪ್ರಾಯೋಗಿಕವಾಗಿ ಒಂದು ಜಿಲ್ಲೆಯನ್ನು ತೆಗೆದುಕೊಂಡು ಮುಂದಿನ ವರ್ಷ ಇದನ್ನು ಎಲ್ಲಾ ಜಿಲ್ಲೆಗಳಿಗೆ ವಿಸ್ತರಿಸುತ್ತೇವೆ ಎಂದು ಹೇಳಿದ್ದರು. ಅದನ್ನು ಕೇಳಿ ನಾವು ಬಹಳ ಸಂತೋಷಪಟ್ಟೆವು ಈ ಯೋಜನೆ ಆಗಲಿ ಪರವಾಗಿಲ್ಲವೆಂದು. ಆದರೆ ಮಂಡ್ಯ ಜಿಲ್ಲೆಗೇ ಇನ್ನೂ ಮೊದಲನೆಯ ಫೇಸ್‌ನಲ್ಲಿಯೇ ಒಂದು ರೂಪಾಯಿ ಹಣ ಬಿಡುಗಡೆ ಮಾಡಲಿಲ್ಲ. ಎಲ್ಲಾ ಗುತ್ತಿಗೆದಾರರು ಇವೊತ್ತು ಅರ್ಧಂಬರ್ಧಕ್ಕೆ ಕೆಲಸವನ್ನು ನಿಲ್ಲಿಸಿ ಮೊದಲನೆಯ ಫೇಸ್ ವರ್ಕ್‌ಗಳೇ ಇನ್ನೂ ಕಂಪ್ಲೀಟ್ ಮಾಡಲಿಲ್ಲ. ಈಗಾಗಲೇ ಎರಡನೆಯ ಫೇಸ್ ವರ್ಕ್ ಆಗಬೇಕಾಗಿತ್ತು ಮತ್ತು ಮೂರನೆಯ ಫೇಸ್ ವರ್ಕ್‌ನ್ನು ಮಾರ್ಚ್‌ನಿಂದ ಈ ವರ್ಷ ತೆಗೆದುಕೊಳ್ಳಬೇಕಾಗಿತ್ತು. ಆದರೆ ಅದು ಹಾಗೆಯೇ ನಿಂತಿದೆ. ಮತ್ತೆ ಪ್ರಧಾನಮಂತ್ರಿಗಳು ರೋಜ್‌ಗಾರ್ ಯೋಜನೆ ಎಂದು ಕೇಂದ್ರದವರು ಪ್ರಾರಂಭ ಮಾಡಿದರು. ಅದೇ ರೀತಿಯಲ್ಲಿ ಮುಖ್ಯಮಂತ್ರಿಗಳ ರೋಜ್‌ಗಾರ್ ಯೋಜನೆ ಎಂದು ರಾಜ್ಯ ಸರ್ಕಾರದವರೂ ಪ್ರಾರಂಭ ಮಾಡಿದರು. ನಾನೇನು ತಿಳಿದುಕೊಂಡೆ ಎಂದರೆ ಪರವಾಗಿಲ್ಲ ಮುಖ್ಯಮಂತ್ರಿಗಳೂ ಕೂಡ ಸ್ವಲ್ಪ ಹಣವನ್ನು ಬಿಡುಗಡೆ ಮಾಡಬಹುದೇನೋ, ಪ್ರಧಾನ ಮಂತ್ರಿಗಳ ರೋಜ್‌ಗಾರ್ ಯೋಜನೆಯಡಿ ಗ್ರಾಮೀಣ ಇಲಾಖೆಯಿಂದ ಸ್ವಲ್ಪ ಹಣ ಬರಲಿ, ಅದೇ ರೀತಿಯಲ್ಲಿ ಮುಖ್ಯಮಂತ್ರಿಗಳ ನಿಧಿಯಿಂದಲೂ ಹಣ ಬರಬಹುದೇನೋ, ಇದರಿಂದ ರಸ್ತೆಗಳ ಅಭಿವೃದ್ಧಿ ಮಾಡಬಹುದು ಎಂದು ನಾನು ತಿಳಿದುಕೊಂಡಿದ್ದೆ. ಈ ವರ್ಷ ಘೋಷಣೆಯನ್ನೂ ಮಾಡಿ 1 ಕೋಟಿ 25 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆಂದೂ ಕೂಡ ಹೇಳಿದರು. ಇದಕ್ಕೆ ಸಂಬಂಧಪಟ್ಟಂತೆ ನಾವು ಪಟ್ಟಿಯನ್ನೂ ಕೂಡ ಮಾಡಿಸಿ ಯೋಜನೆಗಳನ್ನು ತಯಾರು ಮಾಡಿದೆವು. ಆದರೆ ಒಂದು ಬಾರಿ ಏನು ಹೇಳಿದರೆಂದರೆ ಎರಡೂ ವರ್ಷಗಳದ್ದನ್ನೂ ಒಟ್ಟಿಗೆ ಪಟ್ಟಿ ಕೊಡಿ ಎಂದು ಹೇಳಿದರು. ನಾವೆಲ್ಲರೂ ಬಹಳ ಆಸೆಯಿಂದ ಎರಡು ವರ್ಷಗಳದ್ದನ್ನೂ ಪಟ್ಟಿ ಕೊಟ್ಟೆವು. ಎಲ್ಲರೂ ಕಾಯುತ್ತಿದ್ದಾರೆ. ಆದರೆ ಕೊನೆಯಲ್ಲಿ ಕೇವಲ 20 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆ, ಒಂದು ತಾಲ್ಲೂಕಿಗೆ 20 ಲಕ್ಷ ರೂಪಾಯಿಗಳು ಎಂದರು. ಅದನ್ನು ಒಂದು ತಾಲ್ಲೂಕಿಗೆ 20 ಲಕ್ಷ ರೂಪಾಯಿಗಳನ್ನು ಬರ ಪರಿಹಾರದಲ್ಲಿಯೇ ನಾವು ತೆಗೆದುಕೊಳ್ಳಬಹುದಿತ್ತು. ಈ ಮಟ್ಟಿಗೆ ಬಂದಿದೆ ನೋಡಿ.

ಅಧ್ಯಕ್ಷರು: ಹಾಗೇನಿಲ್ಲ. ಮುಂದೆ ಮಾಡುತ್ತಾರೆ ಬಿಡಿ ಮಂತ್ರಿಗಳು.

ಶ್ರೀ ಬಿ. ಸೋಮಶೇಖರ್: ಎಲ್ಲಿ ಮಾಡುತ್ತಾರೆ? ನಾಳೆ ಡಿಸಾಲ್ವ್ ಮಾಡುತ್ತಿದ್ದೀರಿ. ಇನ್ಯಾವಾಗ ಮಾಡುವುದು?

ಅಧ್ಯಕ್ಷರು: ಮಾರ್ಚ್, ಏಪ್ರಿಲ್‌ನಲ್ಲಿ ಯಾವಾಗಲಾದರೂ ಮಾಡಬಹುದು.

ಶ್ರೀ ಕಾಗೋಡು ತಿಮ್ಮಪ್ಪ: ಮೊದಲು ಕೊಟ್ಟಿರುವ 20 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಯುಟಿಲೈಸೇಶನ್ ಸರ್ಟಿಫಿಕೇಟ್ ಕಳುಹಿಸಿದರೆ ಬರುತ್ತದೆ.

ಶ್ರೀ ಕೆ. ಜಯಪ್ರಕಾಶ್: ಅಧ್ಯಕ್ಷರು ಒಂದು ಅಭಿಪ್ರಾಯವನ್ನು ಕೊಟ್ಟರು. ಮಾರ್ಚ್, ಏಪ್ರಿಲ್‌ವರೆಗೆ ಹಾಗಾದರೆ ಚುನಾವಣೆ ಆಗುವುದಿಲ್ಲವೆ? ಏಕೆಂದರೆ ಅಷ್ಟರೊಳಗೆ ಚುನಾವಣೆ ಡಿಕ್ಲೇರ್ ಆದರೆ ಹಣ ಕೊಡುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು: ಚುನಾವಣೆ ಬಗ್ಗೆ ಎಲೆಕ್ಷನ್ ಕಮಿಶನ್‌ರವರು ಹೇಳಬೇಕು. ನಾನು ಹೇಳುವುದಕ್ಕೆ ಆ ಹಕ್ಕಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ತಾವೇ ಹೇಳಿದಿರಿ ಮಾರ್ಚ್ ಎಂಡ್‌ವರೆಗೂ ಹಣ ಕೊಡಬಹುದು ಎಂದು.

ಅಧ್ಯಕ್ಷರು: ಅಲ್ಲಿಯವರೆಗೂ ಟೈಂ ಇದೆ ನಿಮಗೆ ಕೊಡುವುದಕ್ಕೆ ಎಂದು ಹೇಳಿದೆಯಷ್ಟೆ. ಏಕೆಂದರೆ ಕೇರ್ ಟೇಕರ್ ಗೌವರ್ನಮೆಂಟ್ ಇದ್ದೇ ಇರುತ್ತದಲ್ಲಾ ಸ್ವಾಮಿ.

ಶ್ರೀ ಬಿ. ಸೋಮಶೇಖರ್: ಕೇರ್ ಟೇಕರ್ ಗೌವರ್ನ್‌ಮೆಂಟ್ ಎಂದು ಹೇಳಿ ಅವರು ಏನು ಕೊಟ್ಟರೂ ನಾವು ಗುದ್ದಲಿ ಪೂಜೆಯನ್ನು ಕೂಡ ಮಾಡುವುದಕ್ಕೆ ಬರುವುದಿಲ್ಲ. ಏನು ಪ್ರಾರಂಭ ಮಾಡಿದ್ದೇವೆ ಎಂದು ನಾವು ಹೇಳಿಕೊಳ್ಳುವಂತಿಲ್ಲ. ಪೂರ್ಣ ಪ್ರಮಾಣದ ಅಧಿಕಾರದ ಸರ್ಕಾರವಿರುವಾಗಲೇ ಇವರು ಹಣವನ್ನು ಕೊಡದೇ ಇರತಕ್ಕಂಥವರು ಕೇರ್ ಟೇಕರ್ ಗೌವರ್ನಮೆಂಟ್‌ನಲ್ಲಿ ಇವರು ಏನು ಕೊಡುತ್ತಾರೆಯೇ? ಅಧಿಕಾರಿಗಳು ನಿಮ್ಮ ಮಾತನ್ನು ಕೇಳುತ್ತಾರೆಯೇ? ಇದರ ಬಗ್ಗೆ ಹೇಳಿ. ಈಗಾಗಲೇ ಅಧಿಕಾರಿಗಳ ಮನಸ್ಸಿನಲ್ಲಿ ಈ ಸರ್ಕಾರದ ಅವಧಿ ಮುಗಿಯುತ್ತಿದೆ. ಆದ್ದರಿಂದ ಯಾರೂ ಏನೂ ಕೇಳಬೇಕಾಗಿಲ್ಲವೆನ್ನುವ ರೀತಿಯಲ್ಲಿದ್ದಾರೆ. ಆದ್ದರಿಂದ ಎಲ್ಲಿ ಅವರು ನಮ್ಮ ಮಾತನ್ನು ಕೇಳುತ್ತಾರೆ ಎನ್ನುವುದು ಒಂದು ಪ್ರಶ್ನೆ. ಈ ಸರ್ಕಾರ ಇಷ್ಟೆಲ್ಲಾ ಯೋಜನೆಗಳನ್ನು ಘೋಷಣೆಯನ್ನು ಮಾಡಿ ಒಂದು ರೂಪಾಯಿಯನ್ನು ಕೊಡದೇ ಇದ್ದರೂ ಈ ವರ್ಷದಲ್ಲಿ ಕೂಡ ಕೆಲವು ಯೋಜನೆಗಳನ್ನು ಘೋಷಣೆ ಮಾಡಿದ್ದಾರೆ. ಅದು ಯಾವುದೆಂದರೆ ಹೊಸ ಹೊಸ ಸಂಸ್ಥೆಗಳು ಎಂದು ಕರ್ನಾಟಕ ಕೃಷಿ ಅಭಿವೃದ್ಧಿ ನಿಗಮ, ಕರ್ನಾಟಕ ಸಣ್ಣ ನೀರಾವರಿ ನಿಗಮ, ಪಶ್ಚಿಮವಾಹಿನಿ ನೀರಾವರಿ ನಿಗಮ, ರೈತ ಸಂಜೀವಿನಿ, ಶ್ರಮಶಕ್ತಿ, ರಾಜೀವ್‌ಗಾಂಧಿ ಕ್ರೀಡಾ ಮತ್ತು ಸಂಸ್ಕೃತಿ, ಗ್ರಾಮ ವಿದ್ಯುತ್ ಪೂರೈಕೆ ಪ್ರತಿನಿಧಿ ನಿಗಮವೆಂದು ಬೇಲೂರಿನಲ್ಲಿ ಘೋಷಣೆಯನ್ನು ಮಾಡಿರುವುದು. ಕಳೆದ ವರ್ಷವೇ ಫುಡ್ ಕರ್ನಾಟಕದ ಬಗ್ಗೆ ಹೇಳಿದ್ದೀರಿ. ನಾವು ಆವಾಗಲೇ ಏನು ಹೇಳಿದ್ದೆವೆಂದರೆ ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಶನ್ ಎಂದು ಇರತಕ್ಕಂಥ ಸಂಸ್ಥೆಯೇ ಇರುವಾಗ ನೀವು ಫುಡ್ ಕರ್ನಾಟಕ ಎಂದು ಒಂದು ಸಂಸ್ಥೆಯನ್ನು ಮಾಡುತ್ತಿದ್ದೀರಿ ಎಂದು ಹೇಳಿದ್ದೆವು. ಈಗ ಇದರ ಜೊತೆಗೆ ಇನ್ನೊಂದು ಕರ್ನಾಟಕ ಕೃಷಿ ಅಭಿವೃದ್ಧಿ ನಿಗಮ ಎಂದು ಮಾಡುತ್ತಿದ್ದೀರಿ. ಇದನ್ನು ನೀವು ಹೊಸದಾಗಿ ಸೃಷ್ಟಿ ಮಾಡುತ್ತಿದ್ದೀರಿ. ಇದರ ಉದ್ದೇಶವೇನು? ಇದರೊಳಗಡೆಯೇ ನೀವು ಮಾಡಬಹುದಿತ್ತು. ಇದಲ್ಲದೇ ಕರ್ನಾಟಕ ಸಣ್ಣ ನೀರಾವರಿ ನಿಗಮವೆಂದು ಮಾಡುತ್ತಿದ್ದೀರಿ. ಇವೊತ್ತು ಈಗಾಗಲೇ ಒಂದು ಕಡೆ ಕೆ.ಬಿ.ಜೆ.ಎನ್.ಎಲ್. ಇದೆ. ಕರ್ನಾಟಕ ನೀರಾವರಿ ನಿಗಮ ಇದೆ. ಕಾವೇರಿ ನೀರಾವರಿ ನಿಗಮ ಎಂದೂ ಕೂಡ ತಾವು ಮಾಡಿದಿರಿ. ಇದಲ್ಲದೇ ಈಗ ಕರ್ನಾಟಕ ಸಣ್ಣ ನೀರಾವರಿ ನಿಗಮ ಮಾಡಲು ಹೊರಟಿದ್ದೀರಿ. ಈಗ ಇರತಕ್ಕಂಥ ನೀರಾವರಿ ನಿಗಮಗಳಿಗೇ ಇದನ್ನು ಹಸ್ತಾಂತರ ಮಾಡಿ. ಕಾವೇರಿ

ನೀರಾವರಿ ನಿಗಮಕ್ಕೋ ಅಥವಾ ಕರ್ನಾಟಕ ನೀರಾವರಿ ನಿಗಮಕ್ಕೋ ಹಸ್ತಾಂತರ ಮಾಡಿಕೊಳ್ಳಬಹುದಾಗಿತ್ತು. ಇದನ್ನು ಕೇವಲ ನೀವು ಘೋಷಣೆ ಮಾಡಿ ಮಾಡಿ ಸಾರ್ವಜನಿಕರಿಗೆ, ಚುನಾವಣೆ ಸಂದರ್ಭದಲ್ಲಿ...

ಅಧ್ಯಕ್ಷರು: ಸೋಮಶೇಖರ್, ಆರು ಗಂಟೆಗೆ ಟೀ ಪಾರ್ಟಿಗೆ ಹೋಗಬೇಕು. ನಿಮ್ಮ ಪಾರ್ಟಿಯವರು 2 ಗಂಟೆ 10 ನಿಮಿಷ ಮಾತನಾಡಿದ್ದಾರೆ.

ಶ್ರೀ ಬಿ. ಸೋಮಶೇಖರ್: ಮಧ್ಯದಲ್ಲಿ ಒಂದು ಗಂಟೆ ಇಂಟರ್‌ಫಿಯರ್ ಮಾಡಿದರು.

ಅಧ್ಯಕ್ಷರು: ಇಂಟರ್‌ಫಿಯರ್ ಮಾಡದ ಹಾಗೆ ಮಾತನಾಡಬಹುದಾಗಿತ್ತು. ಮಾತನಾಡುವವರು ಇನ್ನೂ ಬಹಳ ಜನ ಇದ್ದಾರೆ.

ಶ್ರೀ ಬಿ. ಸೋಮಶೇಖರ್: ಈಗ ಇಂತಹ ಒಂದು ಸನ್ನಿವೇಶದಲ್ಲಿ ಹೊಸ ಹೊಸದಾಗಿ ಯೋಜನೆಗಳನ್ನು ನೀವು ಘೋಷಣೆ ಮಾಡಿ ಹಿಂದೆ ಇರುವ ಯೋಜನೆಗಳಿಗೆ ಹಣವನ್ನು ಬಿಡುಗಡೆ ಮಾಡದೆ ಜನರಿಗೆ ಕಣ್ಣಿಗೆ ಮಣ್ಣೆರೆಚುವಂತಹ ಕೆಲಸವನ್ನು ಮಾಡಿದಿರಿ. ಮತ್ತು ಈ ಸಾಮಾಜಿಕ ವಲಯದಲ್ಲಿ ಇವತ್ತು ಹಿಂದೆ ನಮ್ಮ ಮಾನ್ಯ ಕಾಗೋಡು ತಿಮ್ಮಪ್ಪನವರು ಸೋಷಿಯಲ್ ವೆಲ್‌ಫೇರ್ ಮಂತ್ರಿಗಳಾಗಿದ್ದರು. ಪ್ರತಿವರ್ಷದ ಬಜೆಟ್‌ನಲ್ಲಿ ಮಂಡಿಸಿರತಕ್ಕಂಥ ಹಾಗೂ ಖರ್ಚಾಗಿರತಕ್ಕಂಥ ಹಣ ನೋಡಿದರೆ ಇದುವರೆಗೂ 40 ಪರ್ಸಂಟ್ ಕಡಿತವಾಗಿದೆ. ಬಜೆಟ್‌ನಲ್ಲಿ ನೀವು ಕೊಟ್ಟಿರುವಂತಹ ಹಣವನ್ನು ಬಿಡುಗಡೆ ಮಾಡಿಲ್ಲ. ಹೊಸ ಹೊಸದಾಗಿ ಸಾಲ ತಂದಿರುವುದನ್ನು ಬೇರೆ ಬೇರೆ ಜನರಲ್ ಸ್ಕೀಮ್‌ಗಳಿಗೆ ಕೊಟ್ಟಿದ್ದೀರಿ. ಆದರೆ ಈ ವರ್ಗದ ಜನರಿಗೆ ಸಂಪೂರ್ಣವಾಗಿ ಇವತ್ತು ಅನ್ಯಾಯ ಮಾಡಿದ್ದೀರಿ. ಒಟ್ಟಿನಲ್ಲಿ ಈ ಸರ್ಕಾರದಲ್ಲಿ ಯಾವುದರಲ್ಲಿ ಸಾಧನೆಯಾಗಿದೆ ಎಂದು ನೋಡಿದರೆ ವಾಸ್ತವಿಕವಾಗಿ ಒಂದು ಯೋಜನೆಯಲ್ಲೂ, ಒಂದು ರಂಗದಲ್ಲೂ ಸಹ ಇವತ್ತು ಅಭಿವೃದ್ಧಿಯಾಗಿಲ್ಲ. ಅದರ ಬದಲಿಗೆ ನೀವೇನು ಪ್ರತಿವರ್ಷ ಆಯವ್ಯಯವನ್ನು ಮಂಡಿಸಿದ್ದೀರಿ, ಎಷ್ಟು ನಿರೀಕ್ಷಣೆ ಮಾಡಿದ್ದೀರಿ ಸ್ವೀಕೃತವನ್ನು ಅದಕ್ಕೆ ನಿಂತುಕೊಂಡಿಲ್ಲ. ಮತ್ತು ಎಷ್ಟುಹಣ ಖರ್ಚು ಮಾಡಿದ್ದೀರಿ ಅದು ರೆವಿನ್ಯೂ ರೆಸಿಟ್‌ಗೂ ಹಾಗೂ ಎಕ್ಸ್‌ಪೆಂಡಿಚರ್‌ಗೂ ಅಜಗಜಾಂತರ ವ್ಯತ್ಯಾಸವನ್ನು ನಾವು ಪ್ರತಿವರ್ಷ ಕಾಣುತ್ತಿದ್ದೇವೆ. ಇವತ್ತು ಸಾಲ ಗಗನಕ್ಕೆ ಏರಿದೆ. ಶೇಕಡ 15 ರಷ್ಟು ಮಾತ್ರ ಇವತ್ತು ಅಭಿವೃದ್ಧಿಗೆ ಇರತಕ್ಕಂಥ ಹಣ ಇನ್ನು ಮಿಕ್ಕ ಎಲ್ಲಾ ಹಣವನ್ನು ನೀವು ಸಾಲ ಹಾಗೂ ಬಡ್ಡಿ ಕಟ್ಟುವುದಕ್ಕೆ ಖರ್ಚು ಮಾಡಿದ್ದೀರಿ. ಕೇಂದ್ರದಿಂದ ನೀವು ತಂದಿರತಕ್ಕಂಥ ಸಾಲ ಪ್ರತಿ ವರ್ಷ ಏನು ಬರುತ್ತಿದೆ. ಒಂದು ವರ್ಷ ಬಂದಿದ್ದು ಅಲ್ಲಲ್ಲೇ ಬುಕ್ ಅಡ್ಜಸ್ಟ್‌ಮೆಂಟ್‌ಗೆ ಆಗುತ್ತಿದೆ. ಅದನ್ನು ತಂದು ಒಂದು ಪರ್ಸಂಟ್ ಹಣವನ್ನು ಅಭಿವೃದ್ಧಿ ಕೆಲಸ, ಅಸೆಟ್ ಸೃಷ್ಟಿ ಮಾಡುವುದಕ್ಕೆ ಯಾವುದೇ ಪ್ರಯತ್ನ ಮಾಡಿಲ್ಲ. ಅದರ ಜೊತೆಗೆ ಇವತ್ತು ಸಂಪೂರ್ಣವಾಗಿ ರಾಜ್ಯ ಸರ್ಕಾರ ಎಲ್ಲಾ ಸಾಮಾಜಿಕ ವಲಯ ಕಾನೂನು ಸುವ್ಯವಸ್ಥೆ, ಆರ್ಥಿಕ ರಂಗ, ಶೈಕ್ಷಣಿಕ ವಲಯ, ರೈತರ ಪರಿಸ್ಥಿತಿ ಇದೆಲ್ಲಾ ಸಂಪೂರ್ಣವಾಗಿ ಹದಗೆಟ್ಟಿದೆ. ಈ ಬಜೆಟ್‌ನಲ್ಲಿ ಕುಡಿಯುವ ನೀರಿನ ಬಗ್ಗೆ ಏನಾದರೂ ಒಂದು ಆಶ್ವಾಸನೆ ಕೊಡುತ್ತಾರೆ, ಮೂರು ವರ್ಷಗಳಿಂದ ಕುಡಿಯುವ ನೀರು ಇಲ್ಲದೆ ತೊಂದರೆಯಾಗುತ್ತದೆ ಎಂದು ತಿಳಿದುಕೊಂಡಿದ್ದೆ. ಇವತ್ತು ಜಿಲ್ಲಾಪಂಚಾಯತ್‌ಗಳಿಗೆ ಏನು ಹಣ ಬಿಡುಗಡೆ ಮಾಡಿದ್ದೀರಿ ಅದು 15 ಅಥವಾ ಒಂದು ತಿಂಗಳಾದರೂ ಕೂಡ ಇನ್ನು ಬಿಡುಗಡೆಯನ್ನು ಜಿಲ್ಲಾಪಂಚಾಯತ್ ಅಧ್ಯಕ್ಷರು ಮಾಡಿಲ್ಲ. ಕೋಲಾರ

ಬಹಳ ಬರ ಪೀಡಿತ ಜಿಲ್ಲೆ. ಅಲ್ಲಿ ಎರಡು ಕೋಟಿ ರೂಪಾಯಿ ಜಿಲ್ಲಾಪಂಚಾಯತ್ ಅಧ್ಯಕ್ಷರಿಗೆ ಬಿಡುಗಡೆ ಮಾಡಿದರೆ ಅವರು 15 ದಿನಗಳಿಂದ ಒಂದು ರೂಪಾಯಿ ಕೂಡ ಹಣ ಬಿಡುಗಡೆ ಮಾಡಿಲ್ಲ. ಬೋರ್‌ವೆಲ್ ತೆಗೆಸಬೇಕೆಂದರೆ ಏನು ಮಾಡಬೇಕು? ಇವತ್ತು ರೈತರ ಆತ್ಮಹತ್ಯೆ ಬಗ್ಗೆ ಸರಿಯಾದಂತಹ ಸಂಖ್ಯೆ ಇಲ್ಲ. ಅವರಿಗೆ ಇನ್ನೂ ಪರಿಹಾರ ಕೊಟ್ಟಿಲ್ಲ. ಬರ ಪರಿಹಾರದ ಬಗ್ಗೆ ಏನು ಹೇಳಿಲ್ಲ. ಕುಡಿಯುವ ನೀರಿನ ಬಗ್ಗೆ ಏನೂ ಹೇಳಿಲ್ಲ. ಮತ್ತು ಆನ್‌ಲೈನ್ ಲಾಟರಿ ಬಗ್ಗೆ ಇವತ್ತು ನಿಷೇಧ ಮಾಡುವುದಕ್ಕೆ ಎಷ್ಟೇ ಒತ್ತಡವನ್ನು ಮಾಡಿದರೂ ಕೂಡ ಪ್ರಯತ್ನ ಮಾಡಿಲ್ಲ. ಮತ್ತು ಶೈಕ್ಷಣಿಕ ರಂಗ ಇವತ್ತು ಸಂಪೂರ್ಣವಾಗಿ ಹದಗೆಟ್ಟಿದೆ. ಏಕೆಂದರೆ ಟಿ.ಸಿ.ಹೆಚ್., ಬಿ.ಇ.ಡಿ. ಇಂಜಿನಿಯರಿಂಗ್ ಕಾಲೇಜುಗಳು ಮತ್ತು ಡೆಂಟಲ್ ಕಾಲೇಜುಗಳನ್ನು ಶೈಕ್ಷಣಿಕ ಆಧಾರದ ಮೇಲೆ ಮಾಡದೆ ಕೇವಲ ಹಣ ಸಂಗ್ರಹಣೆ ಮಾಡುವಂಥಾದ್ದು ಆಗಿದೆ. ಹಣವನ್ನು ಸಂಗ್ರಹಣೆ ಮಾಡತಕ್ಕಂಥ ಉದ್ದೇಶದಿಂದ ಚುನಾವಣೆ ಹತ್ತಿರ ಬಂದಿರುವಾಗ ಶೈಕ್ಷಣಿಕ ಆಧಾರವನ್ನು ಬಿಟ್ಟು ಇವತ್ತು ನೂರು ಕೋಟಿ ರೂಪಾಯಿ ಅವ್ಯವಹಾರ ಆಗುತ್ತಿರುವುದು ನೋಡಿದ್ದೇನೆ. ಆದುದರಿಂದ ಶಿಕ್ಷಣ ರಂಗ ಹದಗೆಟ್ಟು ಹೋಗಿದೆ. ಸಿ.ಇ.ಟಿ. ವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟಿದೆ ಮತ್ತು ನೈಸರ್ಗಿಕ ಲೂಟಿ, ನಾನು ಮೊದಲೇ ಹೇಳಿದ ಹಾಗೆ ದೇವಸ್ಥಾನ ಕಟ್ಟುತ್ತೇವೆಂದು ಹೇಳಿ ಬೀದಿ ಬೀದಿಯಲ್ಲಿ ಕಲೆಕ್ಷನ್. ಎಲ್ಲಾ ಆಡಳಿತ ಪಕ್ಷದವರು ಮತ್ತು ಬೇರೆ ಬೇರೆಯವರು ದುಡ್ಡು ಲೂಟಿ, ಕ್ರಷಿಂಗ್‌ನಲ್ಲಿ ದುಡ್ಡು ಲೂಟಿ, ಗಣಿ ಕೈಗಾರಿಕೆಯಲ್ಲಿ ದುಡ್ಡು ಲೂಟಿ. ಹೀಗೆ ಒಂದಲ್ಲ ಒಂದು ರೀತಿಯಲ್ಲಿ ಈ ಸರ್ಕಾರ ನಾಲ್ಕೂವರೆ ವರ್ಷಗಳಲ್ಲಿ ಯಾವುದೆ ರಂಗದಲ್ಲೂ ತೃಪ್ತಿಕರವಾಗಿ ಕೆಲಸ ಮಾಡಿಲ್ಲ. ಮಾಡಿರತಕ್ಕಂಥಾದ್ದು, ಹೆಸರು ಗಳಿಸಿರುವುದು ದೊಡ್ಡ ಪ್ರಚಾರದಲ್ಲಿ ಮಾತ್ರ. ಪ್ರಚಾರವನ್ನು ದೊಡ್ಡ ದೊಡ್ಡ ಪತ್ರಿಕೆಗಳಲ್ಲಿ ದೊಡ್ಡ ದೊಡ್ಡ ಅಡ್ವರ್‌ಟೈಸ್‌ಮೆಂಟ್ ಕೊಟ್ಟು ಪ್ರಚಾರಕ್ಕೆ ಹೆಚ್ಚು ಹಣವನ್ನು ಖರ್ಚು ಮಾಡಿ ಜನರನ್ನು ಇವತ್ತು ಮೋಸ ಮಾಡಿರುವಂತಹ ಬಜೆಟ್ ಆಗಿದೆ, ಈ ಬಜೆಟ್ ಸಂಪೂರ್ಣವಾಗಿ ಸತ್ಯಕ್ಕೆ ದೂರವಾಗಿರತಕ್ಕಂಥಾದ್ದು, ಸುಳ್ಳು ಘೋಷಣೆ ಮಾಡಿರುವುದು ಎಂದು ಹೇಳಿ, ಇದನ್ನು ವಿರೋಧ ಮಾಡುತ್ತಾ, ಮಾನ್ಯ ಅಧ್ಯಕ್ಷರೆ, ತಾವು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಈಗ ಮಾನ್ಯ ಸಿಂಧ್ಯರವರು ಮಾತನಾಡಿ.

ಶ್ರೀ ಸಿ. **ಚೆನ್ನಿಗಪ್ಪ:** ಮಾನ್ಯ ಅಧ್ಯಕ್ಷರೆ, ಮಾನ್ಯ ಚಲುವರಾಯ ಸ್ವಾಮಿಯವರು ಮಾತನಾಡುತ್ತಾರೆ.

†**ಶ್ರೀ ಎನ್. ಚಲುವರಾಯಸ್ವಾಮಿ (ನಾಗಮಂಗಲ):** ಮಾನ್ಯ ಅಧ್ಯಕ್ಷರೆ, 2004–05ರ ಆಯವ್ಯಯದ ಮೇಲೆ ಚರ್ಚೆಗೆ ಅವಕಾಶವನ್ನು ಕೊಟ್ಟಿದ್ದೀರಿ. ಈಗಾಗಲೇ ವಿರೋಧ ಪಕ್ಷದ ನಾಯಕರು ಸಾಕಷ್ಟು ಇದರ ಬಗ್ಗೆ ಬೆಳಕನ್ನು ಚೆಲ್ಲಿದ್ದಾರೆ. ನಾವು ಮೊದಲೇ ಆ ಭಾಷಣವನ್ನು ನೋಡಿ ಓದುತ್ತಿದ್ದ ಹಾಗೆ ನಮಗೆಲ್ಲರೂ ನಿದ್ದೆ ಬರುತ್ತಿತ್ತು. ಸಾಕಷ್ಟು ಜನ ನಿದ್ದೆ ಮಾಡುತ್ತಿದ್ದರು. ಬಹುತೇಕ ಎಲ್ಲಾ ಸರ್ಕಾರಗಳು ಚುನಾವಣೆ ದೃಷ್ಟಿ ಇಟ್ಟುಕೊಂಡು ಬಜೆಟ್ ಮಾಡತಕ್ಕಂಥದ್ದು ಸಹಜವಾಗಿರುತ್ತದೆ. ಆದರೆ ಇಷ್ಟೊಂದು ದಿವಾಳಿ ಬಜೆಟ್ ಆಗಿರುವುದನ್ನು ಎಲ್ಲ ನೋಡಿಲ್ಲವೆಂದು ಅಂದುಕೊಂಡಿದ್ದೇನೆ. ಕಳೆದ ಐದು ವರ್ಷದ ಬಜೆಟ್‌ನಲ್ಲಿ ಇದು ಕೊನೆಯ ಬಜೆಟ್ ಭಾಷಣವನ್ನು ನೋಡಿದರೆ ಇದು ತುಂಬಾ ಸರ್ಕಾರದ ದಿವಾಳಿಯನ್ನು ಎತ್ತಿ ತೋರಿಸುತ್ತದೆ. ಇಲ್ಲಿಯವರೆಗೆ

(†ಈ ಚಿಹ್ನೆ ಮಾನ್ಯ ಸದಸ್ಯ ಟಿಪ್ಪಣೆ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ)

ಹೇಳಿಕೊಂಡು ಬಂದಂತಹ ಒಂದು, ಎರಡು, ಮೂರು ಮತ್ತು ನಾಲ್ಕು ಬಜೆಟ್‌ನಲ್ಲಿ ಬಹುಶಃ ನೂರಕ್ಕೆ 40 ಪರ್ಸೆಂಟ್ ಅಚೀವ್ ಮಾಡಿದರೆ ಅದು ದೊಡ್ಡ ಸಾಧನೆ ಎಂದು ಹೇಳಬಹುದು. ಆಶ್ರಯ ಯೋಜನೆಯಲ್ಲಿ ಹತ್ತು ಲಕ್ಷ ಮನೆಗಳನ್ನು ಕಟ್ಟುತ್ತೇವೆಂದು ಹೇಳಿದರು. ಅದರ ಬಗ್ಗೆ ತಾವು ಉತ್ತರ ಕೊಡುವಾಗ ಹೇಳಿದರೆ ಬಹಳ ಸಂತೋಷ ಎಂದುಕೊಂಡಿದ್ದೇನೆ. ಅದು ಆರು ಲಕ್ಷಕ್ಕೂ ರೀಚ್ ಆಗಿಲ್ಲ. ಹತ್ತು ಲಕ್ಷ ಮನೆಗಳನ್ನು ಕಟ್ಟಿ ತೀರುತ್ತೇವೆಂದು ಕಳೆದ ಬಜೆಟ್ ಅಧಿವೇಶನದಲ್ಲಿ ಅಥವಾ ಯಾವುದೋ ಒಂದು ಸಂದರ್ಭದಲ್ಲಿ ಟೇಬಲ್ ತಟ್ಟಿ ಸರ್ಕಾರದವರು ಹೇಳಿರುವುದನ್ನು ನಾವು ನೋಡಿದ್ದೇವೆ. ಆದರೆ ಅದರ ಪ್ರಮಾಣ ಆರು ಲಕ್ಷಕ್ಕೂ ತಲುಪಿಲ್ಲ, ಇದರ ಹೊಣೆಯನ್ನು ಯಾರು ಹೊರುತ್ತಾರೆ? ಏಕೆಂದರೆ ಒಂದು ಪತ್ರಿಕೆಯಲ್ಲಿ ಹೇಳಿದರೆ, ಅದು ಒಂದು ವರ್ಷ ಅಥವಾ ಆರು ತಿಂಗಳು ಜನರ ಮನಸ್ಸಿನಲ್ಲಿ ಸರ್ಕಾರ ಏನೋ ಮಾಡುತ್ತಾರೆ ಎಂಬ ಆಸೆ ಇರುತ್ತದೆ. ತುಂಬಾ ಚೆನ್ನಾಗಿ ಮಾತನಾಡಿ, ತುಂಬಾ ಚೆನ್ನಾಗಿ ಪತ್ರಿಕೆಯಲ್ಲಿ ಹೇಳಿಕೆ ಕೊಟ್ಟು ಜನರನ್ನು ನಂಬಿಸಿ, ಜನರನ್ನು ನಂಬಿಸುವುದು ಹಾಗೂ ಚುನಾವಣೆಗೆ ಹೋಗುವಂತಹ ಕೆಲಸವನ್ನು ಜವಾಬ್ದಾರಿಯುತ ಸರ್ಕಾರಗಳು ಬಿಡಬೇಕು ಎನ್ನುವುದು ನನ್ನ ಉದ್ದೇಶ. ಮಂಡ್ಯ, ಮದ್ದೂರು ಹಾಗೂ ಬೆಂಗಳೂರು ರಸ್ತೆ ಅನ್ನು ಫೋರ್ ಲೈನ್ಸ್ ಮಾಡುತ್ತೇವೆಂದು ಹೇಳಿದರು. ಒಂದು ವರ್ಷವಾಯಿತು ಅದು ಪ್ರಾರಂಭವಾಗಿಲ್ಲ. ಆದರೆ ಜನರಿಗೆ ಇವರು ಏನೋ ಮಾಡುತ್ತಾರೆ ಎಂದು ಆಸೆ. ಈ ರೀತಿ ಅನೇಕ ಪೊಳ್ಳು ಆಶ್ವಾಸನೆಗಳನ್ನು, ಭರವಸೆಗಳನ್ನು ಹಾಗೂ ಪತ್ರಿಕಾ ಹೇಳಿಕೆಗಳನ್ನು ಕೊಟ್ಟು, ಅದರ ಜೊತೆಯಲ್ಲಿ ಬಜೆಟ್‌ನಲ್ಲಿ ಸಹ ಈ ರೀತಿ ಮಾಡಿರತಕ್ಕಂಥಾದ್ದು ಬಹಳ ಶೋಚನೀಯ. ಇದನ್ನು ನಾವು ಕಟುವಾಗಿ ಖಂಡಿಸುತ್ತೇವೆಂದು ಹೇಳುತ್ತೇನೆ. ಹೇಮಾವತಿ ಕಾವೇರಿ ಅಚ್ಚುಕಟ್ಟಿನಲ್ಲಿ ಬರುವಂತಾದ್ದು, ಮುಖ್ಯವಾಗಿ ನೀರು ಇಲ್ಲದೆ ಇರುವಂತಹ ನಮ್ಮ ಭಾಗದಲ್ಲಿ ಕೊನೇಪಕ್ಷ ಜಾನುವಾರುಗಳಿಗೆ, ಕರೆ ಕಟ್ಟೆಗಳಿಗೆ ನೀರನ್ನು ತುಂಬುವುದಕ್ಕೆ ಬರುತ್ತದೆ ಎಂದು ಆಸೆಯನ್ನು ನಾವು ಇಟ್ಟುಕೊಂಡಿದ್ದೆವು. ಕಳೆದ ನಾಲ್ಕೂವರೆ ವರ್ಷದಲ್ಲಿ ಮಾನ್ಯ ಅಧ್ಯಕ್ಷರೆ, ತಾವು ರಿಪೋರ್ಟ್ ತರಿಸಿಕೊಳ್ಳಬಹುದು ಹೊಸದಾಗಿ ಕಾಮಗಾರಿ ಮಾಡಿ, ಅದಕ್ಕೆ ನಾವು ಇಷ್ಟು ಹಣ ಬಿಡುಗಡೆ ಮಾಡಿದ್ದೇವೆ ಎಂದರೆ ನೀವು ಹೇಳಿದ ಪನಿಶ್‌ಮೆಂಟ್‌ಗೆ ಗುರಿಯಾಗುತ್ತೇನೆ. ಪ್ರಾರಂಭದಲ್ಲಿ ಮೂರು ವರ್ಷದಲ್ಲಿ ಸತತವಾಗಿ ಒಂದು ರೂಪಾಯಿ ಕೆಲಸ ಕೂಡ ಕಾವೇರಿ ಅಚ್ಚುಕಟ್ಟಿನಲ್ಲಿ ಆಗಲಿಲ್ಲ. ಅಲ್ಪಸ್ವಲ್ಪ ಟೆಂಡರ್ ಆಗಿರುವಂತಾದ್ದು, ಗುತ್ತಿಗೆ ವಹಿಸಿಕೊಂಡಿರುವಂತಾದ್ದು ಹಾಗೂ ಚಾಲನೆ ಮಾಡಿರುವಂತಹ ಕೆಲಸಕ್ಕೆ ಬಾಕಿ ಬಿಲ್ಲನ್ನು ಇವತ್ತು ನಿಗಮ ಆದನಂತರ ಅವರು ಕಂಟ್ರಾಕ್ಟರುಗಳಿಗೆ ಕೊಟ್ಟಿದ್ದು. ಅವರೂ ಒಂದೇ ಬಾರಿಗೆ ಬಾಕಿ ಬಿಲ್ ಕೊಟ್ಟರೆ ನಿಗಮದಲ್ಲಿ ಸರಿಹೋಗುವುದಿಲ್ಲ, ಆದುದರಿಂದ ಬಾಕಿ ಬಿಲ್ ನಾವು ಸ್ವಲ್ಪ ಕೊಟು ಆನ್‌ಗೋಯಿಂಗ್ ವರ್ಕ್ಸ್ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಅವರು 300 ಕೋಟಿ ರೂಪಾಯಿ ಬಾಕಿ ಬಿಲ್ ಇದ್ದರೆ ನೂರು ಕೋಟಿ ರೂಪಾಯಿ ಕೊಟ್ಟಿರಬಹುದು. ಅಲ್ಲಿ ಲೆಕ್ಕ ಹಾಕಿಕೊಳ್ಳಿ. ರೈತರಿಗೆ ಮೂಲಭೂತವಾಗಿ ಕೊಡಬೇಕಾದಂತಹ ನೀರಿನ ಸೌಲಭ್ಯದಲ್ಲಿ ಇವತ್ತು ಮೂರ‍್ನಾಲ್ಕು ವರ್ಷದ ಬರಗಾಲದಿಂದ, ಕೊನೇಪಕ್ಷ ಕೆರೆ ಕಟ್ಟೆಗಳನ್ನು ನೀರು ತುಂಬಿಸಿದರೆ ಸಾಕು ಎನ್ನುವಂತಹ ಸನ್ನಿವೇಶ ಇರುವಂತಹ ಸಂದರ್ಭದಲ್ಲಿ ಬಹಳ ಮುಖ್ಯವಾದಂತಹ ಕೆಲಸವನ್ನು ಈ ಸರ್ಕಾರ ಕನಿಷ್ಟವಾಗಿ ಆ ಯೋಜನೆಗಳನ್ನು ಮಾಡುವುದಕ್ಕೆ ಆಗಲಿಲ್ಲವೆಂದರೆ ನಾಲ್ಕೂವರೆ ವರ್ಷದ ಇವರ ಸಾಧನೆ ಏನು ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ.

4.10 ಪಿ.ಎಂ.

ಕಳೆದ ನಮ್ಮ ಸರ್ಕಾರದಲ್ಲಿ ಮಾಡಿದಂತಹ ಕೆಲಸಗಳಿಗೆ ಸಂಪೂರ್ಣವಾಗಿ ಹಣವನ್ನು ಪಾವತಿ ಮಾಡದೇ ಇರುವಂತಹ ಸನ್ನಿವೇಶ ನಮ್ಮ ಮುಂದೆ ಇದೆ. ಕುಡಿಯುವ ನೀರಿನ ವಿಚಾರಕ್ಕೆ ಬಂದರೆ, ಮಂಡ್ಯ ಜಿಲ್ಲಾ ಪಂಚಾಯತ್ ಪರಿಸ್ಥಿತಿ ಬಹುಶಃ ಎಲ್ಲಾ ಜಿಲ್ಲಾ ಪಂಚಾಯತ್‌ಗೂ ಇರಬಹುದೇನೋ ಎಂದುಕೊಂಡಿದ್ದೇನೆ. ಮೊದಲನೇ ಜಿಲ್ಲಾ ಪಂಚಾಯತ್ ಅವಧಿ ಪ್ರಾರಂಭವಾದಾಗ, ಅಲ್ಪಸ್ವಲ್ಪ ಜಿಲ್ಲಾಪಂಚಾಯತ್ ಮೆಂಬರ್‌ಗಳು ಹೊಸ ಕಾಮಗಾರಿಗಳು ಮತ್ತು ಕುಡಿಯುವ ನೀರಿನ ಸ್ಕೀಮ್‌ಗಳನ್ನು ಬಿಟ್ಟರೆ, ನಂತರದ ಬಾಕಿ ಬಿಲ್‌ಗಳನ್ನು ಪಾವತಿ ಮಾಡುವುದಕ್ಕೆ ಆಗಿಲ್ಲ. ಪ್ರತಿ ವರ್ಷ ಪ್ರತಿ ತಿಂಗಳು, ಜಿಲ್ಲಾ ಪಂಚಾಯತ್‌ನ ಬಗ್ಗೆ ನಾನು ಕಳೆದ ವರ್ಷದಲ್ಲಿ ನೋಡಿದ್ದೇನೆ, ನಾನೂ ಸಹ ಜಿಲ್ಲಾ ಪಂಚಾಯತ್‌ನಲ್ಲಿ ಉಪಾಧ್ಯಕ್ಷನಾಗಿ ಕೆಲಸವನ್ನು ಮಾಡಿದ್ದೇನೆ. ಎಷ್ಟೇ ಬಿಲ್‌ಗಳು ಬಂದರೂ ಆ ತಿಂಗಳಲ್ಲೇ ಪಾವತಿಯಾಗುತ್ತಿದ್ದುದನ್ನು ನಾನು ನೋಡಿದ್ದೇನೆ. ನಮಗೆ ಮಂಡ್ಯ ಜಿಲ್ಲಾ ಪಂಚಾಯತ್‌ಗೆ 9 ಕೋಟಿ ರೂ ಬಿಲ್ ರಸ್ತೆಗೆ ಇತ್ತು, ಅದರಲ್ಲಿ 4 ಕೋಟಿ ರೂಪಾಯಿಗಳನ್ನು ಮಾಡಿದ್ದಾರೆ, 5 ಕೋಟಿ ರೂ.ಗಳನ್ನು ಕಡಿತ ಮಾಡಿದ್ದಾರೆ, ಇವತು 4 ಕೋಟಿ ರೂಪಾಯಿಗಳಾದರೂ ಸಹಿತ, ಇವತ್ತು ಜಿಲ್ಲಾ ಪಂಚಾಯತ್‌ನಲ್ಲಿ 5 ಕೋಟಿ ರೂಪಾಯಿಗಳು ಪೆಂಡಿಂಗ್ ಕುಡಿಯುವ ನೀರಿಗೆ ಇದೆ, ರಸ್ತೆಗಳಿಗೆ 4 ಕೋಟಿ ರೂಪಾಯಿಗಳು ಪೆಂಡಿಂಗ್ ಇದೆ, ಇತರೇ 3–4 ಕೋಟಿ ರೂಪಾಯಿಗಳು ಪೆಂಡಿಂಗ್ ಇದೆ, ಒಟ್ಟು 15–20 ಕೋಟಿ ರೂಪಾಯಿಗಳು ಜಿಲ್ಲಾ ಪಂಚಾಯತ್ ವಿಭಾಗದಲ್ಲಿ ಪೆಂಡಿಂಗ್ ಇದೆ. ಕುಡಿಯುವ ನೀರಿನ ಆನ್ ಗೋಯಿಂಗ್ ವರ್ಕ್ಸ್ ಎನ್.ಡಬ್ಲ್ಯೂ.ಎಸ್, ಎಲ್.ಡಬ್ಲ್ಯೂಎಸ್., ಸ್ಕೀಮ್‌ಗಳು ಕಳೆದ ನಾಲ್ಕುವರೆ ವರ್ಷಗಳಲ್ಲಿ ಮೊದಲ ಒಂದೂವರೆ ವರ್ಷವನ್ನು ಬಿಟ್ಟರೆ, ಮೂರು ವರ್ಷಗಳಲ್ಲಿ ಹೊಸ ಸ್ಕೀಮ್ ಅನ್ನು, ಒಂದೇ ಸ್ಕೀಮ್ ಅನ್ನು ಮಂಡ್ಯ ಜಿಲ್ಲೆಯಲ್ಲಿ ಪ್ರಾರಂಭ ಮಾಡುವುದಕ್ಕೆ ಈ ಸರ್ಕಾರದಲ್ಲಿ ಆಗಲಿಲ್ಲ. ಯಾವ ರೀತಿಯಾಗಿ ಕುಡಿಯುವ ನೀರನ್ನು ಈ ಬರಗಾಲದಲ್ಲಿ ಜನರಿಗೆ ಒದಗಿಸುವುದಕ್ಕೆ ಈ ಸರ್ಕಾರ ಪ್ರಯತ್ನವನ್ನು ಮಾಡಿದ್ದಾರೆ, ಈ ಸರ್ಕಾರದ ಸಾಧನೆ ಏನೆಂಬುದನ್ನು, ನಾವು ಗಮನಿಸಬೇಕಾಗುತ್ತದೆ. ಇದರ ಜೊತೆಗೆ ಬಹಳ ಮುಖ್ಯವಾಗಿ ನಾವು ಬೋರ್‌ವೆಲ್‌ಗಳನ್ನು ಹಾಗಬಾರದೆಂದು, ಇದರಿಂದ ಸಾಕಷ್ಟು ವ್ಯತ್ಯಾಸಗಳಾಗಿವೆ ಎಂದು ಇದನ್ನು ಕೊರೆಯುವಂಥಾದ್ದನ್ನು ಕಡಿಮೆ ಮಾಡಬೇಕೆಂದು, ಎಲ್ಲಿ ಕುಡಿಯುವುದಕ್ಕೆ ನೀರಿಲ್ಲ ಅಲ್ಲಿ ತುರ್ತಾಗಿ ಬೇಕಾಗಿದೆ, ಎಂದು ಒಂದು ಸರ್ಕ್ಯೂಲರ್ ಅನ್ನು ಹೊರಡಿಸಿ, ಇವತ್ತು ಜಿಲ್ಲಾ ಪಂಚಾಯತ್‌ನಲ್ಲಿ ಮಾಡಲು ಇಲ್ಲಿ ಜಿಲ್ಲಾಧಿಕಾರಿಗಳು ಒಂದೇ ಬೋರ್‌ವೆಲ್ ಇದ್ದರೂ, ಅಲ್ಲಿ ಕುಡಿಯುವ ನೀರು ಇಲ್ಲದೇ ಮೂರು ದಿವಸಗಳು 10 ಕಿ.ಮೀ. ನಿಂದ ನೀರು ತರಿಸಿದರೂ, ಒಂದು ಬೋರ್‌ವೆಲ್ ಅನ್ನು ಅಲ್ಲಿ ಹಾಕುವುದಿಲ್ಲವೆಂದು ಹೇಳುತ್ತಾರೆ. ಜಿಲ್ಲಾ ಪಂಚಾಯತ್‌ನಲ್ಲಿ ಹಣವಿಲ್ಲವೆಂದು ಹೇಳುತ್ತಾರೆ. ಜಿಲ್ಲಾಧಿಕಾರಿಗಳು ಸಿಆರ್‌ಎಫ್‌ನಲ್ಲಿ ಹಣವಿದ್ದರೂ, ಇವರು ನಮಗೆ ಆದೇಶವಾಗಿದೆ, ಆದುದರಿಂದ ನಾವು ಬೋರ್‌ವೆಲ್‌ಗಳನ್ನು ಕೊರೆಯುವುದಿಲ್ಲವೆಂದು ಹೇಳುತ್ತಾರೆ, ಬೋರ್‌ವೆಲ್ ಇದ್ದರೆ ನಾವು ಪೈಪ್ ಲೈನ್ ಹಾಕಿಕೊಡುತ್ತೇವೆ, ಬೇಕಾದರೆ ಒಂದು ಸಿಸ್ಟಂ ಲೈನ್ ಅನ್ನು ಹಾಕಿ ಕೊಡುತ್ತೇವೆಂದು ಹೇಳುತ್ತಾರೆ. ಈ ಕುಡಿಯುವ ನೀರಿಗೆ ಇನ್ನು ಇನ್ನೆರಡು ತಿಂಗಳುಗಳಲಿ ಅಂದರೆ ಮಾರ್ಚ್, ಏಪ್ರಿಲ್ ತಿಂಗಳಲ್ಲಿ ನಾವು ಯಾರು ಈ ಸಮಸ್ಯೆಯನ್ನು ಎದುರಿಸುವುದಕ್ಕೆ ಆಗುವುದಿಲ್ಲ, ಹಳ್ಳಿಗಳಿಗೆ ಹೋಗುವುದಕ್ಕೆ ಆಗದೇ ಇರುವಂತಹ ಸಮಸ್ಯೆ ನಮ್ಮ ಕಣ್ಣು ಮುಂದೆ ಬರುತ್ತದೆ, ಇಷ್ಟೊಂದು ದಿವಾಳಿಯನ್ನು ಹೊಂದಿರುವಂತಹ ಸರ್ಕಾರವಾಗಿದೆ. ನಾವು ಬೆಳಿಗ್ಗೆ ಎದ್ದು ಪತ್ರಿಕೆಗಳನ್ನು ನೋಡಿದರೆ ನಾವು 150 ಕೋಟಿ ರೂ.ಗಳನ್ನು ರಿಲೀಜ್ ಮಾಡಿದ್ದೇವೆ, 300 ಕೋಟಿ ರೂ.ಗಳನ್ನು ಮಾಡಿದ್ದೇವೆ, 10 ಕೋಟಿ ರೂ.ಗಳನ್ನು ರಿಲೀಜ್ ಮಾಡಿದ್ದೇವೆ, ಕುಡಿಯುವ

ನೀರಿಗೆ ಕೊಟ್ಟಿದ್ದೇವೆ, ಎಂದು ಇಷ್ಟೊಂದು ಸುಳ್ಳನ್ನು ಹೇಳುವಂಥಾದ್ದು, ಗೌರವನಾ? ಈ ಸರ್ಕಾರಕ್ಕೆ ಶೋಭೆಯನ್ನು ತರುತ್ತದೆಯೇ ಎಂಬುದನ್ನು ತಾವು ಯೋಚನೆ ಮಾಡಬೇಕು. ಇನ್ನು ಮಂಡ್ಯ ಜಿಲ್ಲೆಗೆ 2001–2002ರಲ್ಲಿ ಕೊಟ್ಟಂತಹ ಪ್ಯಾಕೇಜ್, ಕೊಟ್ಟಿರುವಂಥಾದ್ದು ನೋಡಿ ನಾವೆಲ್ಲರೂ ಖುಷಿ ಪಟ್ಟೆವು, ಮಾನ್ಯ ಮುಖ್ಯಮಂತ್ರಿಯವರು ಏನು 300 ಕೋಟಿ ರೂಪಾಯಿಗಳನ್ನು ರಸ್ತೆಗೆ ಕೊಡುತ್ತಿದ್ದಾರೆ, ಮಂಡ್ಯದಲ್ಲಿ ರಸ್ತೆಗಳು ಯಾವುದೂ ಬಾಕಿ ಇರುವುದಿಲ್ಲ, ಎಲ್ಲವೂ ಮುಗಿಯುತ್ತದೆ, ಈ ನಾಲ್ಕುವರೆ, ಐದು ವರ್ಷಗಳಲ್ಲಿ ಎಂದು ನಾವು ಖುಷಿ ಪಟ್ಟೆವು, ಹೌದು, ನಮ್ಮ ಮುಖ್ಯಮಂತ್ರಿಯವರು ಬಹಳ ದಿವಸಗಳಿಂದ ಹಿಂದುಳಿದ್ದಂತಹ ರಸ್ತೆಗಳನ್ನು ದೊಡ್ಡ ಮನಸ್ಸು ಮಾಡಿ, ನಮ್ಮ ಜಿಲ್ಲೆಯಲ್ಲಿ ಮಾಡುತ್ತಿದ್ದಾರೆಂದು ಖುಷಿ ಪಟ್ಟೆವು. ಇವತ್ತು ಮೊದಲನೇ ಹಂತ, ಎರಡನೆ ಹಂತ ಮೂರನೆ ಹಂತ, ಎಂದು ಮಾಡಿ, ಈಗ 2001–2002, 2002–2003, 2003–2004, ಎಂದು ಮೂರನೇ ಬಜೆಟ್ ಆಗಿದೆ, ಒಟ್ಟು ಐದು ಬಡ್ಜೆಟ್ ಆಗಿದ್ದು, 300 ಕೋಟಿ ರೂ.ಗಳಲ್ಲಿ 100 ಕೋಟಿ ರೂ.ಗಳ ಟೆಂಡರ್ ಅನ್ನು ಕರೆದು, 7 ಕೋಟಿ ರೂ.ಗಳು ಬಿಡುಗಡೆ ಆಗಿದೆ, ಇನ್ನೂ 93 ಕೋಟಿ ರೂಪಾಯಿಗಳನ್ನು ಮೊದಲನೆ ಹಂತದಲ್ಲಿ ಬಾಕಿ ಇದೆ, ಇನ್ನೂ ಬಾಕಿ ಇನ್ನೂರು ಕೋಟಿ ರೂಪಾಯಿಗಳ ಎಸ್ಟಿಮೇಟ್ ಡಿವಿಜನ್ ಆಫೀಸ್‌ನಲ್ಲಿ ಇದೆಯೋ, ಎಸ್.ಇ, ಆಫೀಸ್‌ನಲ್ಲಿ ಇದೆಯೋ, ಅಥವಾ ಚೀಫ್ ಇಂಜಿನಿಯರ್ ಆಫೀಸ್‌ನಲ್ಲಿ ಇದೆಯೋ, ಗೊತ್ತಿಲ್ಲ, ಈ ರೀತಿಯ ವ್ಯವಸ್ಥೆ ಇದೆ, ಈ ಒಂದೇ ಸಾಕ್ಷಿ, ಈ ಸರ್ಕಾರ ಆರ್ಥಿಕವಾಗಿ ದಿವಾಳಿಯಾಗಿದೆ ಎಂದು ಹೇಳುವುದಕ್ಕೆ, ಮತ್ತೊಂದು ಸಾಕ್ಷಿ ಬೇಕಾಗಿಲ್ಲ, ಇದು ಮಾನ್ಯ ಮುಖ್ಯಮಂತ್ರಿಯವರ ಜಿಲ್ಲೆ, ಇವರು ಕೊಟ್ಟಂತಹ ಪ್ಯಾಕೇಜ್ ಅನ್ನು ಕೊಟ್ಟಿರುವಂತಹದ್ದು ಮುಖ್ಯಮಂತ್ರಿಯಾಗಿ ಮುಗಿಸುವುದಕ್ಕೆ ಆಗಿಲ್ಲ, ಅರ್ಧವೂ ಅಲ್ಲ, ಕಾಲು ಭಾಗವೂ ಅವಧಿಯಲ್ಲಿ ಮಾಡಿಲ್ಲ. ಈಗ ಮಾಡಿರುವಂತಹ ಕಂಟ್ರಾಕ್ಟ್ ನೂರು ಕೋಟಿ ರೂಪಾಯಿಗಳನ್ನು ಸಹ ಕೊಡದೇ ಇರುವಂತಹ ಸ್ಥಿತಿ ಇದೆ. ಇನ್ನು ಬಳ್ಳಾರಿ ಪ್ಯಾಕೇಜ್, ಬೆಳಗಾಂ ಪ್ಯಾಕೇಜ್, ಇವೆಲ್ಲವನ್ನೂ ನೋಡುವುದಕ್ಕೆ ಸಾಧ್ಯವಿಲ್ಲ, ಏಕೆಂದರೆ ಅವರ ಸ್ವಂತ ತವರು ಜಿಲ್ಲೆಯಲ್ಲೇ ಅವರು ಕೊಟ್ಟಂತಹ ಮಾತನ್ನು ಉಳಿಸಿಕೊಳ್ಳುವುದಕ್ಕೆ ಆಗಿಲ್ಲ, ಇನ್ನು ಬೇರೆ ವಿಚಾರಕ್ಕೆ ನಾವು ಹೋಗುವುದಕ್ಕೆ ಸಾಧ್ಯವೇ ಎಂಬುದನ್ನು ನಾವು ಯೋಚನೆ ಮಾಡಬೇಕು. ಇನ್ನು ನನ್ನ ಜಿಲ್ಲೆಯ ಒಳಗೆ ಬೀದರ್–ಶ್ರೀರಂಗಪಟ್ಟಣಕ್ಕೆ ಒಂದು ರಸ್ತೆ ಹೋಗುತ್ತದೆ, ಅದು ಒಂದು ದೊಡ್ಡ ಹಗರಣ, ಇಲ್ಲಿ ನಾವು ವರ್ಲ್ಡ್ ಬ್ಯಾಂಕ್‌ನಿಂದ ಹಣವನ್ನು ತಂದು, ಅದು ಸಾಲ, ಈ ಸರ್ಕಾರದ ಒಂದು ದೊಡ್ಡ ಸಾಧನೆಯೆಂದರೆ, ನಮ್ಮ 57 ವರ್ಷಗಳ ಸ್ವಾತಂತ್ರ್ಯ ಪಡೆದು, ಸರ್ಕಾರ ನಡೆಸಿದಂತಹ ಯಾವ ಸರ್ಕಾರವು ತಮ್ಮ ಅವಧಿಯಲ್ಲಿ ಇಷ್ಟು ದೊಡ್ಡ ಮೊತ್ತದ ಸಾಲವನ್ನು ತಂದಿಲ್ಲ, ಅಷ್ಟು ಸಾಲವನ್ನು ತಂದಿರುವಂತಹ ಈ ಸರ್ಕಾರಕ್ಕೆ ಅದು ಒಂದು ಹೆಗ್ಗಳಿಕೆ, ಇದು ಒಂದು ಸಾಧನೆ ಎಂದು ನಾವು ಒಪ್ಪಬಹುದು. ಮುಂದೆ ಬರುವಂತಹ ಸರ್ಕಾರ ಬರೀ ಸಾಲವನ್ನು ತೀರಿಸುವುದೇ ಆಗುತ್ತದೆ, ಯಾವುದೇ ಕೆಲಸಗಳನ್ನು ಮಾಡುವುದಕ್ಕೆ ಆಗುವುದಿಲ್ಲ, ಅಷ್ಟೊಂದು ಸಾಲವನ್ನು ತಂದಿದ್ದಾರೆ. ವರ್ಲ್ಡ್ ಬ್ಯಾಂಕ್‌ನಿಂದ ಮಾಡಿರುವಂತಹ ರಸ್ತೆ ಈ ಶ್ರೀರಂಗಪಟ್ಟಣ ಮತ್ತು ಬೀದರ್ ಜಿಲ್ಲೆಯದು, ನಾವು ಮತ್ತು ಬೀದರ್‌ನಿಂದ ಬರುವಂತಹ ಎರಡು, ಮೂರು ಶಾಸಕರೆಲ್ಲಾ ಸೇರಿ ಒತ್ತಡ ತಂದು ಶ್ರೀರಂಗಪಟ್ಟಣದಿಂದಲೂ ಪ್ರಾರಂಭ ಮಾಡಬೇಕೆಂದು ಹೇಳಿದೆವು. ಮಾಡುತ್ತೇವೆಂದು ನಮಗೆ ಪ್ರಾಮಿಸ್ ಮಾಡಿದರು, ಇದನ್ನು ಮಾಡುವುದಕ್ಕೆ ಟೆಂಡರ್ ಕರೆದು ಮಾಡಲು ಎರಡು ವರ್ಷವಾಯಿತು,

ಇದನ್ನು ಪ್ರಾರಂಭ ಮಾಡಿ ಎರಡು ವರ್ಷವಾದರೂ ಇಲ್ಲಿಯವರೆಗೆ ಕನಿಷ್ಠ ಶೇ. 10ರಷ್ಟು ಕೆಲಸವನ್ನು ಶ್ರೀರಂಗಪಟ್ಟಣದಿಂದ ಚುಂಚನಗಿರಿಗೆ 36 ಕೋಟಿ ರೂ.ಗಳ ಕೆಲಸವಾಗುತ್ತದೆ, ಅದನ್ನು ಮಾಡುವುದಕ್ಕೆ ಆಗಿಲ್ಲ. ಯಾರಿಗೋ ಒಬ್ಬರಿಗೆ ಕಂಟ್ರಾಕ್ಟ್ ಕೊಟ್ಟಿದ್ದು, ಅವರು ಸಬ್ ಲೀಜ್ ಕೊಟ್ಟು ಕೈಲಾಗದೇ ಇರುವಂತಹ ಕಂಟ್ರಾಕ್ಟ್‌ಗೆ ಕೊಟ್ಟು, ಇವತ್ತು ರಸ್ತೆಯಲ್ಲಿ ಓಡಾಡುವುದಕ್ಕೆ ಆಗುವುದಿಲ್ಲ. ಮೈಸೂರಿನಿಂದ ತುಮಕೂರಿಗೆ ಹೋಗುವಂತಹ ರಸ್ತೆಯನ್ನು ನೋಡುವುದಕ್ಕೆ ಆಗುವುದಿಲ್ಲ. ಅಂತಹ ಪರಿಸ್ಥಿತಿಯನ್ನು ಇವತ್ತು ಈ ಸರ್ಕಾರ ತಂದಿದೆ. ಇದಕ್ಕೆ ಇವರು ಕೈ ಹಾಕದೇ ಇದ್ದಿದ್ದರೆ, ಚೆನ್ನಾಗಿತ್ತು, ಇದ್ದುದ್ದರಲ್ಲಿ ಹೇಗೋ ಪಿ.ಡಬ್ಲ್ಯೂ.ಡಿಯವರು ಇದ್ದರು, ಅವರನ್ನು ಕೇಳಿಕೊಂಡು ಅವರು ರಸ್ತೆಯ ಗುಂಡಿಗಳನ್ನು ಮುಚ್ಚುತ್ತಿದ್ದರು, ನಾವು ಅಲ್ಲಿ ಓಡಾಡಿಕೊಂಡು ಇದ್ದೆವು. ಇವರು ವರ್ಲ್ಡ್ ಬ್ಯಾಂಕ್‌ನ ದುಡ್ಡಿನಲ್ಲಿ, ನ್ಯಾಷನಲ್ ಹೈವೇ ರೀತಿಯಲ್ಲಿ ರಸ್ತೆಗಳನ್ನು ಮಾಡುತ್ತಾರೆಂದು ಆಸೆ ಇಟ್ಟುಕೊಂಡಿದ್ದೆವು, "ಹೊಟ್ಟೆಗೆ ಹಿಟ್ಟಿಲ್ಲ ಜುಟ್ಟಿಗೆ ಮಲ್ಲಿಗೆ ಹೂವು" ಎನ್ನುವ ರೀತಿಯಲ್ಲಿ ನಾವು ಈ ಸರ್ಕಾರದ ಸುಳ್ಳು ಭರವಸೆಯ ವ್ಯವಸ್ಥೆಯಲ್ಲಿ ಸಿಕ್ಕಿಕೊಂಡು ಬಹಳಷ್ಟು ನೋವನ್ನು ಅನುಭವಿಸುತ್ತಿದ್ದೇವೆ. ಇನ್ನು ಸಣ್ಣ ನೀರಾವರಿ ಬಗ್ಗೆ ಪ್ರತಿ ವರ್ಷ ಪಿ.ಡಬ್ಲ್ಯೂ.ಡಿಯಲ್ಲಿ, ಪ್ರತಿಯೊಂದರಲ್ಲಿ ಮಾಮೂಲಿಯಾಗಿ ನಡೆಯುವಂತಹ 30:54, 50:54 ಅನುದಾನದಲ್ಲಿ ಮಂಡ್ಯ ವಿಭಾಗ ಒಂದರಲ್ಲಿ 10 ಕೋಟಿ ರೂಪಾಯಿಗಳು ಪೆಂಡಿಂಗ್ ಇದೆ. ಪ್ರತಿ ತಿಂಗಳು 50 ಲಕ್ಷ, 60 ಲಕ್ಷ ರೂ. ಹಣವನ್ನು ಹೆಚ್ಚು ಅಂದರೆ 1 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಾರೆ, ಇದಕ್ಕಿಂತ ಹೆಚ್ಚಿಲ್ಲ, 10 ರಿಂದ 15 ಕೋಟಿ ರೂಪಾಯಿಗಳ ಹಣ ಪೆಂಡಿಂಗ್ ಇದೆ. ಇವರ ಅವಧಿಯ ಕೊನೆಯ ದಿವಸಗಳು ಬರುತ್ತಿವೆ, ಇದಕ್ಕೆ ಯಾರು ಜವಾಬ್ದಾರರು? ಇವರು ಎಷ್ಟರಮಟ್ಟಿಗೆ ಸರ್ಕಾರವನ್ನು ಯಶಸ್ವಿಯಾಗಿ ನಡೆಸಿದ್ದಾರೆಂಬುದನ್ನು ಪತ್ರಿಕೆಗಳಲ್ಲಿ ಬಹಳ ನಯವಾಗಿ ಮಾತನಾಡತಕ್ಕಂಥ ಬುದ್ಧಿವಂತ ಹೇಳಿಕೆಗಳನ್ನು ಕೊಟ್ಟು, ಜನರನ್ನು ನಂಬಿಸುವಂತಹದ್ದು, ನಾವು ಹಳ್ಳಿಗೆ ಹೋದರೆ ಜನ ಏನು ಶಾಸಕರೇ ನೀವು ಎಲ್ಲಾ ಸುಳ್ಳನ್ನು ಹೇಳುತ್ತಿರಿ, ದಿವಸ ಬೆಳಿಗ್ಗೆ ಎದ್ದು ಟಿ.ವಿ.ಯಲ್ಲಿ, ಪತ್ರಿಕೆಗಳಲ್ಲಿ ನೋಡಿದರೆ, ಯಾವುದಕ್ಕೂ ಬರವೆನ್ನುವುದೇ ಇಲ್ಲ. ಏನು ಬೇಕಾದರೂ ಸರ್ಕಾರ ಕೆಲಸ ಮಾಡುವುದಕ್ಕೆ ತಯಾರಿದೆ, ಎಷ್ಟು ಬೇಕಾದರೂ ದುಡ್ಡು ಕೊಡುತ್ತದೆ, ಮನೆಗಳನ್ನು ಎಷ್ಟು ಬೇಕಾದರೂ ಕೊಡುತ್ತೇವೆ, ಎಷ್ಟು ಬೇಕಾದರೂ ಕುಡಿಯುವ ನೀರಿಗೆ ದುಡ್ಡನ್ನು ಕೊಡುತ್ತೇವೆ, ರಸ್ತೆಗೆ ಹಣವನ್ನು ಕೊಡುತ್ತದೆ, ಎಂದು ಹೇಳುತ್ತಾರೆ, ಕಳೆದ ಒಂದೂವರೆ ವರ್ಷದಲ್ಲಿ ಶಾಸಕರ ಅಭಿವೃದ್ಧಿ ಹಣವನ್ನು ಕೊಟ್ಟಿಲ್ಲ, ಅದನ್ನು ಅನೌನ್ಸ್ ಮಾಡಿದರು, ಮತ್ತೆ ಬೇರೆ ಯೋಜನೆಗಳ ಹಣವನ್ನು ಬಿಡುಗಡೆ ಮಾಡಲಿಲ್ಲ, ಮತ್ತೆ ಬರಗಾಲದ ಸ್ಕೇರ್‌ಸಿಟಿ ವರ್ಕ್ಸ್ ಎಂದು ಕಳೆದ ಒಂದು ವರ್ಷದಿಂದ ಈಚೆಗೆ, ಇಂದಿನವರೆಗೂ ಪಾವತಿಯಾಗಿದೆ, ಇನ್ನೂ ಅರ್ಜಿಗಳು ಬರುತ್ತಿವೆ, ಇನ್ನೂ ಹಣವನ್ನು ಕೊಡುತ್ತಿದೆ. ಸ್ಕೇರ್‌ಸಿಟಿ ಎಂದರೆ ನಾನು ತಿಳಿದಂತೆ ಅವತ್ತು ಅವತ್ತು ಪೇಮೆಂಟ್ ಮಾಡಬೇಕಾಗುತ್ತದೆ. ಇವತ್ತಿನವರೆಗೆ ಆವತ್ತು ಕಮಿಟ್ ಮಾಡಿದಂತಹ ಕೆಲಸಗಳಿಗೆ ಇನ್ನು ಪಾವತಿ ಮಾಡಲಾಗಲಿಲ್ಲ. ಕಳೆದ ಒಂದೂವರೆ ವರ್ಷದಿಂದ ಈಚೆಗೆ ಯಾವ ಕ್ಷೇತ್ರಕ್ಕಾಗಲಿ, ಜಿಲ್ಲೆಗಾಗಲಿ ಅಭಿವೃದ್ಧಿ ಕೆಲಸವೆಂದು ಎಲ್ಲಾದರೂ ಯಾವುದಾದರೂ ಯೋಜನೆಯಲ್ಲಿ ಹಣ ಬಿಡುಗಡೆ ಮಾಡಿದ್ದರೆ, ನಾಳೆ ಉತ್ತರ ಹೇಳುವಾಗ ದಯಮಾಡಿ ಹೇಳಲಿ. ಅದು ಯಾವ ಜಿಲ್ಲಾಧಿಕಾರಿ ಹತ್ತಿರ, ಯಾವ ಸಿಇಒ ಹತ್ತಿರ ಇಟ್ಟಿದ್ದಾರೋ ನಮಗಾದರೂ ಗೊತ್ತಾದರೆ ಹೋಗಿ ತುರ್ತುವ್ಯವಸ್ಥೆಯಲ್ಲಿ ಉಪಯೋಗಿಸಿಕೊಳ್ಳಲು ಸಾಧ್ಯವಾದರೆ ಇನ್ನು ಒಂದು ತಿಂಗಳಲ್ಲಿ ಚುನಾವಣೆ ಇರುವುದರಿಂದ

ಉಪಯೋಗಿಸಿಕೊಳ್ಳುತ್ತೇವೆ. ಇಂತಹ ಬಹಳ ಅವ್ಯವಸ್ಥೆಯಲ್ಲಿ, ಇಷ್ಟೊಂದು ಆರ್ಥಿಕದಿವಾಳಿಯಾಗಿ ಆರ್ಥಿಕವಾಗಿ ಅಧೋಗತಿಗೆ ಹೋಗಿರುವ ನಾವು ಮತ್ತೊಂದು ಸರ್ಕಾರವನ್ನು ನೋಡುವುದಕ್ಕಾಗುವುದಿಲ್ಲ. ಮೊನ್ನೆ ನನ್ನ ಕ್ಷೇತ್ರದಲ್ಲಿ ಗುಡಿಸಲಿಗೆ ಬೆಂಕಿ ಬಿದ್ದು, ಒಬ್ಬ ಮಹಿಳೆ ಮೃತಪಟ್ಟಳು. ಅವರಿಗೆ ಐವತ್ತು ಸಾವಿರ ರೂಪಾಯಿಗಳ ಚೆಕ್ಕನ್ನು ಡಿ.ಸಿ.ಯವರು ಕೊಟ್ಟರೆ ಬ್ಯಾಂಕ್‌ನಲ್ಲಿ ಕ್ಯಾಷ್ ಇಲ್ಲದೆ ಚೆಕ್ ವಾಪಸ್ ಬರುತ್ತದೆ. ಅವರು ಚೆಕ್ ತೆಗೆದುಕೊಂಡು ಬಂದು, ನೋಡಿ ಸ್ವಾಮಿ ತಾವು ಚೆಕ್ ಕೊಡಿಸಿದಿರಿ ಎಂದು ಕೇಳಿದರು. ದೊಡ್ಡದಾಗಿ ಫೋಟೊ ತೆಗೆಸಿ ಚೆಕ್ಕನ್ನು ತಹಸೀಲ್ದಾರ್ ಕಡೆಯಿಂದ ಜಿಲ್ಲಾಧಿಕಾರಿಗಳು ಕಳುಹಿಸಿದ್ದಾರೆಂದು ಕೊಡಿಸಿದರು. ಜಿಲ್ಲಾಧಿಕಾರಿಗಳಿಗೆ ದೂರವಾಣಿ ಮಾಡಿದರೆ, ಖಜಾನೆ ಬ್ಯಾನ್ ಆಗಿದೆ ಸಾರ್, ಒಂದು ತಿಂಗಳು ಕಾಯಿರಿ ಏನಾದರೂ ಮಾಡುತ್ತೇವೆಂದು ಹೇಳಿದರು. ಈ ಒಂದು ಪರಿಸ್ಥಿತಿ ಸರ್ಕಾರದಲ್ಲಿದೆ, ಇನ್ನು ಸಣ್ಣ ನೀರಾವರಿ ಯೋಜನೆಗೆ ಹೋದರೆ, ಬಹುತೇಕ ಸ್ಕೇರ್‌ಸಿಟಿ ಎಂದೇನಾದರೂ ಒಂದು ರೈತಕಾಯಕ ಕೆರೆ ಮತ್ತು ಸ್ಕೇರ್‌ಸಿಟಿನಲ್ಲಿ ಒಂದು ಕ್ಷೇತ್ರಕ್ಕೆ ನಲವತ್ತು ಲಕ್ಷ ರೂಪಾಯಿಗಳನ್ನು ರಿಪೇರಿಗೆಂದು ಕೊಟ್ಟಿದ್ದು ಬಿಟ್ಟರೆ, ಒರಿಜಿನಲ್ ಆಗಿ ಯೋಜನೆಯಲ್ಲಿ ಅವರು ಕೈಗೆತ್ತಿಕೊಂಡಂತಹ ಕೆಲಸಗಳಿಗೆ, ಹೊಸ ಕಾಮಗಾರಿಗಳಿಗಲ್ಲ, ನಡೆಯುತ್ತಿರುವ ಆನ್‌ಗೋಯಿಂಗ್ ಕಾಮಗಾರಿಗಳಿಗೆ ಅವರು ಕನಿಷ್ಟ ಶೇ 10 ಹಣವನ್ನು ಪಾವತಿ ಮಾಡಲಾಗಿಲ್ಲ. ಇಲಾಖೆಯಿಂದ ವಿವರವನ್ನು ಪಡೆದುಕೊಂಡರೆ ಗೊತ್ತಾಗುತ್ತದೆ, ಕನಿಷ್ಟವಾದ ಹಣವನ್ನು ಪಾವತಿ ಮಾಡಿ ಆ ಕೆಲಸವನ್ನು ಮುಂದುವರೆಸುವುದಕ್ಕೆ ಇವತ್ತು ಸರ್ಕಾರದಿಂದಾಗಿಲ್ಲ. ಆದುದರಿಂದ ಅವರು ನೇರವಾಗಿ ಒಪ್ಪಿಕೊಳ್ಳಬೇಕಾಗುತ್ತದೆ ನಮ್ಮ ಕೈಯಲ್ಲಿ ಆರ್ಥಿಕ ಪರಿಸ್ಥಿತಿ ಸುಧಾರಣೆ ಮಾಡುವುದಕ್ಕೆ ಆಗಲಿಲ್ಲ, ನಾವು ಈ ಐದು ವರ್ಷಗಳ ಅವಧಿಯಲ್ಲಿ ರಾಜ್ಯದಲ್ಲಿ ಸರ್ಕಾರ ಅಭಿವೃದ್ಧಿ ಕೆಲಸಗಳನ್ನು ಮಾಡಲಾಗಲಿಲ್ಲ ಎನ್ನುವುದನ್ನು ಅವರು ಒಪ್ಪಿದರೆ ಖಂಡಿತ ಜನರು ಕ್ಷಮಿಸುತ್ತಾರೆ. ಇಲ್ಲವೆಂದರೆ, ತಾವೇನಾದರೂ ಅಲ್ಪಸ್ವಲ್ಪ ವಿರೋಧಪಕ್ಷದವರ ಸೀಟುಗಳಲ್ಲಿ ನಾವು ಕುಳಿತುಕೊಳ್ಳುತ್ತೇವೆ, ಸೀಟುಗಳು ಬರುತ್ತದೆ ಎಂದು ತಿಳಿದುಕೊಂಡಿದ್ದರೆ ಅದು ಕನಸು ಎಂದು ಕಾಣುತ್ತದೆ. ಏಕೆಂದರೆ ಹಳ್ಳಿಗಳಲ್ಲಿ ಈ ಸರ್ಕಾರಕ್ಕೆ ಮತ್ತೆ ಓಟು ಕೊಟ್ಟರೆ ಖಂಡಿತ ನಾವ್ಯಾರು ಹಳ್ಳಿಗಳಲ್ಲಿ ಜೀವನ ಮಾಡುವುದಕ್ಕಾಗುವುದಿಲ್ಲವೆನ್ನುವುದು ರೈತರಿಂದ ಹಿಡಿದು ಪ್ರತಿಯೊಬ್ಬರಿಗೂ ಮನವರಿಕೆಯಾಗಿದೆ. ನಮ್ಮ ಅರೋಗ್ಯ ಸಚಿವರು ಬಹಳ ಖಂಡಿತವಾದಿಗಳು, ಸ್ವಲ್ಪ ಬೇರೆಯವರಿಗೆ ಹೋಲಿಕೆ ಮಾಡಿದರೆ ನೇರವಾದಿಗಳೆಂದು ಹೆಸರುವಾಸಿಯಾಗಿದ್ದಾರೆ. ಆದರೆ ಅವರ ಇಲಾಖೆನಲ್ಲಿ ಕಿರಿಯ ಪುರುಷ ಆರೋಗ್ಯ ಸಹಾಯಕರ ಹುದ್ದೆ, ಪಾಪ ಹುಡುಗರಿಗೆ ಗೊತ್ತೇ ಇಲ್ಲ, ಮೊನ್ನೆ ಆರೋಗ್ಯ ನಿರ್ದೇಶನಾಲಯಕ್ಕೆ ಹೋದರೆ, ಮೂರು ವರ್ಷದಿಂದ ಆನಂದರಾವ್ ಸರ್ಕಲ್‌ನಲ್ಲಿ ಸತತವಾಗಿ ಅವರ ಅಪ್ಪ ಅಮ್ಮಂದಿರಿಂದ ಹಣ ತೆಗೆದುಕೊಂಡು ಬಂದು ಬೆಂಗಳೂರಿನಲ್ಲಿ ಇವತ್ತು ನಾಳೆ ಆದೇಶ ಕೊಡುತ್ತಾರೆಂದು ತಿರುಗುತ್ತಾರೆ. ಮೂರು ವರ್ಷಗಳಿಂದ ಪತ್ರಿಕಾ ಹೇಳಿಕೆಯನ್ನು ಕೊಟ್ಟು ಇವರನ್ನು ಆರು ತಿಂಗಳಲ್ಲಿ ಟ್ರೈನಿಂಗ್ ತೆಗೆದುಕೊಂಡಿರುವ ಎರಡು ಸಾವಿರ ಜನರನ್ನು ರಾಜ್ಯಮಟ್ಟದಲ್ಲಿ ನೇಮಕಾತಿ ಮಾಡಿ, ಜಿಲ್ಲಾ ಮಟ್ಟದ ನೇಮಕ ಮಾಡುವುದಿಲ್ಲವೆಂದು, ಟೆಕ್ನಿಷಿಯನ್ಸ್ ಡ್ರೈವರ್ಸ್, ಎಎನ್‌ಎಂ ಈ ರೀತಿಯ ಹುದ್ದೆಗಳಿಗೆ ಅರ್ಜಿ ಕರೆದು ಸ್ಕೂಟನಿ ಮಾಡಿ ಇಲ್ಲಿಯವರೆಗೆ ಅವರಿಗೆ ಆದೇಶ ಕೊಡಲಾಗಲಿಲ್ಲ. ನನ್ನನ್ನು ನಮ್ಮ ಜಿಲ್ಲೆಯ ಹುಡುಗರು ನಾಲ್ಕು ಸಾರಿ ಕರೆದುಕೊಂಡು ಹೋದರು, ನಾನು ಆ ಹುಡುಗರಿಗ ಈ ಸರ್ಕಾರದಿಂದ ನಿಮಗೆ ಯಾವತ್ತೂ ಮುಕ್ತಿ ಸಿಗುವುದಿಲ್ಲ

ಮುಂಚೆ ಒಳ್ಳೆಯ ಸರ್ಕಾರ ಬರುತ್ತದೆ, ದಯಮಾಡಿ ನೀವೆಲ್ಲರೂ ನಿಮ್ಮ ಅಪ್ಪ ಅಮ್ಮಂದಿರು ಹತ್ತಿರ ಮೊದಲೇ ದುಡ್ಡಿಲ್ಲದೇ ಇರುವಾಗ ನೀವು ಇಲ್ಲಿಗೆ ಬಂದು ಇಲ್ಲಿ ಸುಮ್ಮನೆ ಖರ್ಚು ಮಾಡಿಕೊಂಡು ತಿರುಗಾಡಬೇಡಿ, ವಾಪಸ್ ಹೋಗಿ ಎಂದು ಹೇಳಿದೆ. ಆದರೂ ಕೂಡ ಅವರು ಅಸೆ ಬಿಡದೆ ಸತತವಾಗಿ ಈ ಸರ್ಕಾರದ ಮೇಲೆ ಇಲ್ಲಿಯವರೆಗೆ ಭರವಸೆ ಇಟ್ಟುಕೊಂಡು ತಮ್ಮ ಸ್ವಂತ ಹಣವನ್ನು ಖರ್ಚು ಮಾಡಿಕೊಂಡು ತಿರುಗುತ್ತಿದ್ದಾರೆ. ಆದುದರಿಂದ ಈ ಸರ್ಕಾರ ಈ ವರ್ಷದ ಆಯವ್ಯಯ ಹಾಗೂ ಕಳೆದ ನಾಲ್ಕೂವರೆ ವರ್ಷದ ಸಾಧನೆ ಇವೆರಡು ಕ್ಷೇತ್ರದಲ್ಲೂ ಗಣನೀಯವಾಗಿ ಹಿಂದುಳಿದಿದ್ದಾರೆ. ಮೊನ್ನೆ ಪ್ರಧಾನಮಂತ್ರಿಗಳು ರೋಜ್‌ಗಾರ್ ಯೋಜನೆ ಮಾಡಿದಂತೆ ಮುಖ್ಯಮಂತ್ರಿಗಳು ರೋಜ್‌ಗಾರ್ ಯೋಜನೆಯನ್ನು ಮಾಡಲು ಹೊರಟಿದ್ದಾರೆ, ಈ ಶಾಸಕರ 40 ಲಕ್ಷ ರೂಪಾಯಿಗಳ ಅನುದಾನವನ್ನು ಬಿಟ್ಟುಬಿಟ್ಟರು, ಮುಖ್ಯಮಂತ್ರಿಗಳು ಅನುದಾನ ಕೊಡುತ್ತೇವೆಂದು ಹೇಳಿದರು, ನಮಗೆ ಯಾವುದೇ ರೀತಿಯಲ್ಲಿ ನಮ್ಮ ಊರಿನ ರಸ್ತೆಗಳಿಗೆ ಹಣ ಕೊಟ್ಟರೆ ಸಾಕು. ಸಂಬಂಧಿಸಿದಂತೆ, ನಮಗೆ ಜಿಲ್ಲಾ ಪಂಚಾಯತ್ ಇಂಜಿನಿಯರ್ ನಮಗೆ ಫೋನ್ ಮಾಡಿ 24 ಗಂಟೆಯೊಳಗೆ ಪಟ್ಟಿ ಕೊಡಬೇಕು, ಇನ್ನೊಂದು ವಾರದೊಳಗೆ ಅಪ್ರೂವಲ್ ಆಗುತ್ತದೆ ಒಂದುಕಾಲು ಕೋಟಿ ರೂ ಒಂದುಕಾಲು ಕೋಟಿ ರೂಗಳ ಎರಡು ಪಟ್ಟಿಯನ್ನು ಕೊಡಬೇಕೆಂದು ಹೇಳಿದರು ಎರಡೂವರೆ ಕೋಟಿ ರೂಪಾಯಿಗಳ ಪಟ್ಟಿ ಕೊಟ್ಟು ಮೂರು ತಿಂಗಳಾಯಿತು, ಮೊನ್ನೆ 20 ಲಕ್ಷ ರೂಪಾಯಿಗಳನ್ನು ಲ್ಯಾಂಡ್ ಆರ್ಮಿಯವರಿಗೆ ಕೊಟ್ಟಿದ್ದಾರೆ, 20 ಲಕ್ಷ ರೂ ಕೆಲಸವನ್ನು ಸೆಲೆಕ್ಟ್ ಮಾಡಿ ಎಂದು ಇನ್ನೂ ಹೇಳುತ್ತಿದ್ದಾರೆ, ಅದಕ್ಕೆ ಅವರು ಅಪ್ರೂವಲ್ ಕೊಟ್ಟು ಕೆಲಸ ಮಾಡುವುದಕ್ಕೆ ಚುನಾವಣೆ ಮುಗಿದಿರುತ್ತದೆ. ಇಷ್ಟೆಲ್ಲಾ ಸುಳ್ಳು ಭರವಸೆಗಳನ್ನು ಹೇಳಿದರೆ ಜನರು ನಂಬುತ್ತಾರಾ ಎನ್ನುವ ಯೋಚನೆ ಮಾಡದೆ ಈ ಸರ್ಕಾರ ಸುಳ್ಳು ಪೊಳ್ಳು ಭರವಸೆಗಳನ್ನು ಪತ್ರಿಕೆಗಳಲ್ಲಿ ಹೇಳಿ ರಾಜಕೀಯ ಈ ಒಂದು ವ್ಯವಸ್ಥೆಗೆ ಕಳಂಕ ತರುವ ರೀತಿಯಲ್ಲಿ ಸರ್ಕಾರ ಮಾಡಿದೆ. ಇವರು ಮುಂದೆ ತಿದ್ದುಕೊಳ್ಳುವ ಪರಿಸ್ಥಿತಿಯಲ್ಲಿಲ್ಲ, ಜನರೇ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕೆನ್ನುವುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಕೊನೆಯದಾಗಿ ನನ್ನ ತಾಲ್ಲೂಕಿನಲ್ಲಿ ಎರಡು ಘಟನೆಗಳು ನಡೆದಿವೆ ಅದನ್ನು ಸದನದ ಗಮನಕ್ಕೆ ತರಲಿಚ್ಛಿಸುತ್ತೇನೆ. ಒಂದನೇ ತಾರೀಖು ಇತಿಹಾಸ ಹಾಗೂ ಪರಂಪರೆಯುಳ್ಳ ನಮ್ಮ ತಾಲ್ಲೂಕಿನಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಅರೆಬೆತ್ತಲೆ ನೃತ್ಯ ಇಡೀ ಪ್ರಪಂಚದಲ್ಲೇ ಪ್ರಚಾರವಾಗಿ ಈ ಪ್ರಖ್ಯಾತವಾಗಿದೆ.

ಅಧ್ಯಕ್ಷರು: ಪಾರ್ಟಿ ವಿಚಾರಗಳನ್ನು ಇಲ್ಲಿ ಏತಕ್ಕೆ ಎತ್ತುತ್ತೀರಿ? ವಿರೋಧಪಕ್ಷದ ನಾಯಕರು ಸೇರಿದಂತೆ ಎಲ್ಲರೂ ಈ ಬಗ್ಗೆ ಹೇಳಿದ್ದಾರೆ.

ಶ್ರೀ ಎನ್. ಚಲುವರಾಯಸ್ವಾಮಿ: ನಾನು ಹೆಚ್ಚಿಗೆ ಹೇಳುವುದಿಲ್ಲ, ಅದು ಪ್ರಚಾರವಾಗಿದೆ, ಸರ್ಕಾರಕ್ಕೆ ಒಂದೇ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಅಧ್ಯಕ್ಷಗಿರಿಯಿಂದ ಅವರನ್ನು ತೆಗೆದಿರುವುದರಿಂದ ನಮ್ಮ ತಾಲ್ಲೂಕಿಗೇನು ಗೌರವ ಬರುವುದಿಲ್ಲ, ಅವತ್ತು ನನ್ನ ತಾಲ್ಲೂಕಿನ ಮಹಿಳೆಯರಿಗೆ ಆಗಿರುವ ಅವಮಾನ, ಈ ರಾಜ್ಯದ ಜನತೆಯ ಮೇಲೆ ಪರಿಣಾಮ ಬೀರಿರುವ ಬಗ್ಗೆ ಯಾರು ವ್ಯವಸ್ಥಾಪಕರಿದ್ದಾರೆ ಅವರ ಮೇಲೆ ಕ್ರಿಮಿನಲ್ ಕೇಸ್ ದಾಖಲು ಮಾಡಿ ಕ್ರಮ ತೆಗೆದುಕೊಂಡಾಗ ಮಾತ್ರ ಈ ಸರ್ಕಾರಕ್ಕೆ ಏನಾದರೂ ಗೌರವ ಬರುತ್ತದೆ. ಇಲ್ಲದೇ ಇದ್ದರೆ ಒಂದು ಮಹಿಳಾ ಪ್ರಾತಿನಿಧ್ಯ ಕೊಡುವ ವ್ಯವಸ್ಥೆಯಲ್ಲಿ ಓಪನ್ ಪ್ಲೇಸ್‌ನಲ್ಲಿ ಕಾರ್ಯಕರ್ತರ ಸಭೆಯಲ್ಲಿ ದಿವಾಳಿ

ಹೊಂದಿರುವ ಈ ಸಂದರ್ಭದಲ್ಲಿ ಓಟಿಗೆ ಹೋಗಬೇಕೆಂದು ಈ ರೀತಿ ನೃತ್ಯ ಮಾಡಿಸುವುದನ್ನು ನಾನು ಈ ಸಂದರ್ಭದಲ್ಲಿ ಖಂಡಿಸುತ್ತೇನೆ, ಹಾಗೂ ಅವರ ಮೇಲೆ ಕ್ರಿಮಿನಲ್ ಕೇಸ್ ದಾಖಲೆ ಮಾಡಿ ಅವರ ಮೇಲೆ ಕ್ರಮತೆಗೆದುಕೊಳ್ಳಬೇಕೆಂದು ಸರ್ಕಾರಕ್ಕೆ ನಾನು ಒತ್ತಾಯ ಮಾಡುತ್ತೇನೆ. ಮೊನ್ನೆ ಒಂದು ಘಟನೆ ನಡೆದಿದೆ, ಚುನಾವಣೆ ನಡೆಯುತ್ತಿರಬೇಕಾದರೆ ಹೈಕೋರ್ಟ್ ಒಂದು ಫೋರ್ಜರಿ ಆದೇಶವನ್ನು ತಹಸಿಲ್ದಾರ್‌ರವರಿಗೆ ಕೊಟ್ಟು ಚುನಾವಣೆ ಮುಂದೂಡಿದ್ದಾರೆ. ಅದು ಇವತ್ತು ಪತ್ರಿಕೆಯಲ್ಲೂ ಕೂಡ ಬಂದಿದೆ, ಹೈಕೋರ್ಟ್‌ನಲ್ಲೂ ಅದು ಫೈಲ್ ಆಗಿದೆ. ಈ ಬಗ್ಗೆಯು ಕೂಡ ನಮ್ಮ ತಾಲ್ಲೂಕಿನಲ್ಲಿ ಒಬ್ಬ ಮಾಜಿ ಶಾಸಕರು ಫೋರ್ಜರಿ ಹೈಕೋರ್ಟ್ ಆದೇಶವನ್ನು ಕೊಟ್ಟು ಚುನಾವಣೆಯನ್ನು ಮುಂದೂಡಿಸಿದರು, ನಂತರ ಬೆಳಿಗ್ಗೆ ಹೈಕೋರ್ಟ್, ಆ ತಹಸಿಲ್ದಾರ್, ಅಡ್ವೋಕೇಟ್ ಜನರಲ್ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಕೇಳಿದರೆ, ಯಾವುದೇ ತರಹದ ದಾಖಲೆಗಳು ಇಲ್ಲ. ಹೈಕೋರ್ಟ್‌ನವರು ನಮ್ಮ ಆದೇಶವಲ್ಲವೆಂದು ಸಾಬೀತಾಗಿ ಇವತ್ತು 12ನೇ ತಾರೀಖು ಚುನಾವಣೆಯನ್ನು ನಡೆಸುತ್ತಿದ್ದಾರೆ. ಆದರೆ ಈ ಫೋರ್ಜರಿ ಕೋರ್ಟ್ ಆದೇಶವನ್ನು ತಂದುಕೊಟ್ಟವರು ಮೇಲೆ ಕ್ರಿಮಿನಲ್ ಕೇಸ್ ದಾಖಲೆ ಮಾಡಿ, ಇವತ್ತು ನ್ಯಾಯಾಲಯದ ಮೇಲೆ ಇರುವ ನಂಬಿಕೆ ವಿಶ್ವಾಸವನ್ನು ಕಳೆದುಕೊಳ್ಳುವಂತಹ ಸನ್ನಿವೇಶವನ್ನು ನಿರ್ಮಾಣ ಮಾಡಿದ ಇವರ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡಿ ಈ ಆಯವ್ಯಯವನ್ನು ನಾನು ಒಪ್ಪದೆ, ಇದು ಬಹಳ ಸುಳ್ಳು ಭರವಸೆಯ ಆಯವ್ಯಯವೆಂದು ನನಗೆ ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಈಗ ಸಿಂಧ್ಯಾರವರು, ಸಿಂಧ್ಯಾರವರು ಆದಮೇಲೆ ಹೆಗಡೆಯವರು.

ಶ್ರೀ ಪಿ.ಜಿ.ಆರ್. ಸಿಂಧ್ಯ: ನಾನು ಮಾತನಾಡುತ್ತೇನೆ. ಅದಕ್ಕೂ ಮೊದಲು ಕೃಷ್ಣಬೈರೇಗೌಡರು ಮಾತನಾಡುವುದಾದರೆ ಅವರಿಗೆ ಐದು ನಿಮಿಷ ಅವಕಾಶ ಕೊಡಿ. ನಂತರ ನಾನು ಮಾತನಾಡುತ್ತೇನೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ ಕಾಗೇರಿ: ಅಧ್ಯಕ್ಷರೇ, ನಾವು ಭಾರತೀಯ ಜನತಾ ಪಾರ್ಟಿಯಿಂದಲೂ, ಮಾತನಾಡಬೇಕು ಎಂದು ತಮ್ಮನ್ನು ಕೇಳುತ್ತಿದ್ದೇವೆ.

ಅಧ್ಯಕ್ಷರು: ಈಗ ಸಿಂಧ್ಯರವರು, ನಂತರ ಹೆಗಡೆಯವರು. ಹೆಗಡೆಯವರಾದ ಮೇಲೆ ನೀವು ಮಾತನಾಡಿ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ ಕಾಗೇರಿ: ಈಗ ನಮ್ಮ ಪಕ್ಷದವರು ಮಾತನಾಡಬೇಕಿತ್ತು.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾತನಾಡಬೇಕು ಎನ್ನುವುದೇನೂ ನಮಗಿಲ್ಲ. ಅವರಿಗೇ ಅವಕಾಶ ಕೊಡಿ.

ಶ್ರೀ ಆರಗ ಜ್ಞಾನೇಂದ್ರ: ನಮ್ಮ ಪಾರ್ಟಿಯ ಸಂಖ್ಯಾ ಆಧಾರದ ಮೇಲೆ ನಮಗೆ ಎಷ್ಟು ಟೈಂ ಫಿಕ್ಸ್ ಮಾಡಿದ್ದೀರಿ ಎಂದು ತಾವೇ ನೋಡಿ. ಏಕೆಂದರೆ, ಇದುವರೆಗೆ ನಮ್ಮಲ್ಲಿ ಇಬ್ಬರು ಮಾತ್ರ ಮಾತನಾಡಿದ್ದಾರೆ. ಅವರೆಂದರೆ ವಿರೋಧ ಪಕ್ಷದ ನಾಯಕರು ಮತ್ತು ರಾಮದಾಸ್‌ರವರು. ಹೀಗಾದರೆ ನಾವು ಯಾವಾಗ ಮಾತನಾಡುವುದು? ನಮಗೆ ಎಷ್ಟು ಸಮಯವನ್ನು ನೀವು ಅಲಾಟ್ ಮಾಡಿದ್ದೀರಿ, ಅಷ್ಟು ಹೊತ್ತು ನಾವು ಮಾತನಾಡುತ್ತೇವೆ. ಕೊನೆಯ ದಿವಸ ನಿಮ್ಮ ಜೊತೆ ವಾಗ್ವಾದಕ್ಕೆ ನಿಲ್ಲುವುದಿಲ್ಲ.

ಅಧ್ಯಕ್ಷರು: ಇವತ್ತು ಸಂಜೆ 6 ಗಂಟೆಯವರೆಗೆ ಅಧಿವೇಶವವಿದೆ. ಹೆಗಡೆಯವರು 15 ನಿಮಿಷ ಮಾತನಾಡುತ್ತಾರೆ, ಆಮೇಲೆ ನೀವಿಬ್ಬರೂ ಮಾತನಾಡಿ.

ಶ್ರೀ ಆರಗ ಜ್ಞಾನೇಂದ್ರ: ಸಿಂಧ್ಯಾರವರಿಗೆ ತಡೆ ಒಡ್ಡಿದ್ದು ನಾವಲ್ಲ. ನಮ್ಮ ಪಕ್ಷಕ್ಕಿರುವ ಸಮಯವನ್ನು ಕೇಳುತ್ತಿದ್ದೇವೆ ಅಷ್ಟೇ.

ಅಧ್ಯಕ್ಷರು: ಸಿಂಧ್ಯಾರವರು ನಿನ್ನೆಯಿಂದ ಕೇಳುತ್ತಿದ್ದಾರೆ, ಅದಕ್ಕಾಗಿ ಹೇಳಿದೆ.

ಶ್ರೀ ಆರಗ ಜ್ಞಾನೇಂದ್ರ: ನಮ್ಮ ಪಟ್ಟಿ ಅಲ್ಲೇ ಇದೆ, ನೀವು ಅದನ್ನು ಕೂಗುವುದಿಲ್ಲ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ ಕಾಗೇರಿ: ನಮಗೆ ಒಂದು ಅವಕಾಶವನ್ನು ಕೊಡಬೇಕಲ್ಲವೇ?

ಅಧ್ಯಕ್ಷರು: ಎಲ್ಲಾ ಪಾರ್ಟಿಗಳಿಗೂ ಒಂದು ರೌಂಡ್ ಬರಬೇಕಲ್ಲವೇ?

ಶ್ರೀ ಆರಗ ಜ್ಞಾನೇಂದ್ರ: ಎಲ್ಲಾ ಬಂದಿದೆ. ಈಗ ನಮ್ಮನ್ನು ಸ್ಕಿಪ್ ಮಾಡಿದ್ದೀರಿ.

ಅಧ್ಯಕ್ಷರು: ಪಕ್ಷೇತರ ಪೈಕಿ ಇನ್ನೂ ಯಾರೂ ಮಾತನಾಡಿಲ್ಲ. ಆದ್ದರಿಂದ, ಹೆಗಡೆಯವರಾದ ಮೇಲೆ ನೀವು ಮಾತನಾಡಿ.

ಶ್ರೀ ಆರಗ ಜ್ಞಾನೇಂದ್ರ: ಬೆಳಿಗ್ಗೆಯಿಂದ ನೀವು ನಮ್ಮನ್ನು ಕೂಗಲಿಲ್ಲ. ನಿನ್ನೆ ರಾಮದಾಸ್‌ರವರು ಮಾತನಾಡಿದ್ದನ್ನು ಬಿಟ್ಟರೆ ನಮ್ಮ ಪಕ್ಷದಿಂದ ನಾವ್ಯಾರೂ ಮಾತನಾಡಲಿಲ್ಲ. ತಾವು ಕರೆಯಬಹುದು ಎಂದು ನಾವು ಸೌಜನ್ಯದಿಂದ ಕುಳಿತಿದ್ದೇನೆ.

ಅಧ್ಯಕ್ಷರು: ಈಗ ಹೇಳುತ್ತಿದ್ದೇನಲ್ಲಾ, ಹೆಗಡೆಯವರು ಆದಮೇಲೆ ನೀವು ಮಾತನಾಡಿ. ಬೇಕಾದರೆ ಇವತ್ತು ಆರೂಕಾಲುವರೆಗೆ ಕುಳಿತುಕೊಳ್ಳೋಣ. ಹೆಗಡೆಯವರೇ, ಈಗ ನೀವು ಮಾತನಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ನಾನು ಮಾತನಾಡುವುದಿಲ್ಲ. ಅವರು ಮಾತನಾಡಲಿ.

ಅಧ್ಯಕ್ಷರು: ಇಲ್ಲಿ ಏನಾಗುತ್ತದೆಂದರೆ, ಕೆಲವು ನಾಯಕರು ಒಂದು ಗಂಟೆ ಎಂದು ಹೇಳಿ 2 ಗಂಟೆ ತೆಗೆದುಕೊಳ್ಳುತ್ತಾರೆ. ಅದರಿಂದಲೇ ತೊಂದರೆಯಾಗಬಹುದು.

†**ಶ್ರೀ ಕೆ. ಜಯಪ್ರಕಾಶ ಹೆಗಡೆ (ಬ್ರಹ್ಮಾವರ)**: ಮಾನ್ಯ ಅಧ್ಯಕ್ಷರೇ, ಇವತ್ತು ಪತ್ರಿಕೆಯಲ್ಲಿ ಜಸ್ಟೀಸ್ ಸಲ್ಡಾನಾರವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. 'ಕಾನೂನು ವ್ಯವಸ್ಥೆ-ಭ್ರಷ್ಟ:ಸಲ್ಡಾನಾ ಆತಂಕ' ಎಂದು ಒಂದು ಆರ್ಟಿಕಲ್ ಬಂದಿದೆ. ಅದರಲ್ಲಿ ಯಾವ ಬಗ್ಗೆ ಹೇಳಿದ್ದಾರೆ ಎಂದರೆ, 'ಭ್ರಷ್ಟ ಕಾನೂನು ವ್ಯವಸ್ಥೆಯಲ್ಲಿ ಬಹುಕೋಟಿ ನಕಲಿ ಛಾಪಾ ಕಾಗದ ಹಗರಣ ರೂವಾರಿ ಕರೀಂ ಲಾಲಾ ತೆಲಗಿ ಆರೋಪ ಮುಕ್ತರಾದರೂ ಆಶ್ಚರ್ಯ ಪಡಬೇಕಾಗಿಲ್ಲ ಎಂದು ಹೈಕೋರ್ಟ್ ನ್ಯಾಯಮೂರ್ತಿ ಎಂ.ಎಸ್. ಸಲ್ಡಾನಾ ಅಭಿಪ್ರಾಯ ಪಟ್ಟಿದ್ದಾರೆ' ಎಂದು ಬಂದಿದೆ. ಒಬ್ಬ ನ್ಯಾಯಾಧೀಶರೇ ಈ ರೀತಿ ಅಭಿಪ್ರಾಯ ಪಡುವಾಗ, ಮುಂದೆ ಏನಾಗಬಹುದು ಎಂದು ನಾವು ಆಲೋಚನೆ ಮಾಡಬೇಕಾಗುತ್ತದೆ. ನಾನು ಮೊನ್ನೆಯೇ ಹೇಳಿದ್ದೆ, ಒಂದು ಜೇಡರ ಬಲೆಯಲ್ಲಿ ಸಣ್ಣಪುಟ್ಟ ಹುಳುಗಳು ಸಿಕ್ಕಿಬಿದ್ದಾಗ ಅವು ಸಾಯುತ್ತವೆ, ದೊಡ್ಡ ದೊಡ್ಡದು ಸಿಕ್ಕಿಬಿದ್ದಾಗ ಜೇಡರ ಬಲೆ ಹರಿದು ಬೀಳುತ್ತದೆ ಎನ್ನುವ ಒಂದು ಮಾತನ್ನು ಇಲ್ಲಿ ಹೇಳಿದ್ದೆ. ಅದೇ ರೀತಿ, ಎಲ್ಲಾ ಸೇರಿ ಈ ಹಗರಣವನ್ನು ಮುಚ್ಚಿ ಹಾಕುತ್ತಾರೆ ಎನ್ನುವ ಅನುಮಾನ ನ್ಯಾಯಾಧೀಶರಿಗೂ ಬಂದಿದೆ. ಮೊನ್ನೆ, ಇದರ ಬಗ್ಗೆ ಭಾರತೀಯ ಜನತಾ ಪಕ್ಷದವರು ಒಂದು ದೊಡ್ಡ ಆಪಾದನೆಯನ್ನು ಮಾಡಿದರು. ನಿವೃತ್ತ ಡೈರೆಕ್ಟರ್ ಜನರಲ್ ಆಫ್ ಪೋಲೀಸ್‌ರವರ ಸ್ನೇಹಿತರಾದ ಸಂತೋಷ್ ಗಾಡಿಯಾ ಎನ್ನುವವರ ಬಗ್ಗೆ ಆಪಾದನೆಯನ್ನು ಮಾಡಿದ್ದು, ಅವರು ಅಧ್ಯಕ್ಷರಾದ ತಮ್ಮನ್ನು ಮತ್ತು ಮೇಲ್ಮನೆಯ ಸಭಾಪತಿಗಳನ್ನು ಕಂಡು ದೂರನ್ನು ಕೊಟ್ಟಿದ್ದಾರೆ ಎಂದು ಪತ್ರಿಕೆಯಲ್ಲಿ ಬಂದಿದೆ. ಇವು ಸುಳ್ಳು ಆಪಾದನೆಗಳಾಗಿದ್ದರೆ ನಾನು ಕ್ರಮವನ್ನು ಕೈಗೊಳ್ಳುತ್ತೇನೆ ಎಂದು ಮೇಲ್ಮನೆಯ ಸಭಾಪತಿಗಳು ಹೇಳಿದ್ದಾರೆ ಎನ್ನುವುದನ್ನು

(† ಈ ಚಿಹ್ನೆ ಮಾನ್ಯ ಸದಸ್ಯ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ)

ನಾನು ಪತ್ರಿಕೆಗಳಲ್ಲಿ ಓದಿದ್ದೇನೆ. ಅವರು ತಮ್ಮ ಹತ್ತಿರ ಸಹ ಬಂದಿದ್ದರು ಎಂದು ಇರುವುದರಿಂದ, ಒಂದು ವೇಳೆ ಇಂಥಾದ್ದೇನಾದರೂ ನಡೆದಿದೆಯೇ ಅಥವಾ ತಾವು ಕ್ರಮವನ್ನು ಕೈಗೊಳ್ಳುವಿರೇ ಎಂಬುದನ್ನು ಹೇಳಬೇಕು. ಏಕೆಂದರೆ ಮೇಲ್ಮನೆಯ ಸಭಾಪತಿಗಳು ಹೇಳಿದ್ದಾರೆ ಎಂದು ಪತ್ರಿಕೆಯಲ್ಲಿ ಬಂದಿದೆ, ಸಬ್ಜೆಕ್ಟ್ ಟು ಕರೆಕ್ಷನ್ ಪತ್ರಿಕೆಯಲ್ಲಿ ಬಂದಿದೆ. ಆದ್ದರಿಂದ, ಯಾವುದೇ ಒಬ್ಬ ವ್ಯಕ್ತಿಯ ಮೇಲೆ ಆಪಾದನೆಗಳನ್ನು ಮಾಡಿದಾಗ, ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಕೊಟ್ಟು ಅದನ್ನು ಸಬೀತುಪಡಿಸುವುದು ಸದಸ್ಯರ ಜವಾಬ್ದಾರಿಯಾಗುತ್ತದೆ. ಆಪಾದನೆಗಳು ಸುಳ್ಳು ಎಂದಾದರೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ ಎಂದು ಮೇಲ್ಮನೆಯ ಸಭಾಪತಿಗಳು ಹೇಳಿರುವಾಗ, ಇಲ್ಲಿ ತಾವೇನಾದರೂ ಅಂಥ ಕ್ರಮವನ್ನು ಕೈಗೊಳ್ಳುವಿರಾ ಎನ್ನುವ ಬಗ್ಗೆ ಸದನಕ್ಕೆ ತಿಳಿಸಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

MR. SPEAKER: I will verify.

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ಮಾನ್ಯ ಚಲುವರಾಯಸ್ವಾಮಿಯವರು ಒಂದು ಮಾತನ್ನು ಹೇಳಿದರು, ಹೈಕೋರ್ಟಿನ ಆದೇಶವನ್ನು ಫೋರ್ಜರಿ ಮಾಡಲಾಗಿದೆ ಎಂದು ಹೇಳಿದರು. It is a very serious allegation made by the Member.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಸದಸ್ಯರಿಗೆ ಸುದ್ದಿ ಮುಟ್ಟಿರಬೇಕು ಅಥವಾ ನೇರವಾಗಿ ಅವರಿಗೇ ಸುದ್ದಿ ಬಂದಿರಬೇಕು. ಅಂಥ ವಿಷಯವನ್ನು ಪೊಲೀಸರಲ್ಲಿ ಕಂಪ್ಲೆಂಟ್ ಮುಖಾಂತರ ದಾಖಲು ಮಾಡದಿದ್ದರೆ ತನಿಖೆ ಹೇಗೆ ನಡೆಯುತ್ತದೆ?

ಶ್ರೀ ಎನ್. ಚಲುವರಾಯಸ್ವಾಮಿ: ಅದು ಪತ್ರಿಕೆಗಳಲ್ಲೂ ಬಂದಿದೆ.

ಶ್ರೀ ಕಾಗೋಡು ತಿಮ್ಮಪ್ಪ: ಅದನ್ನು ಇಲ್ಲಿ ಚರ್ಚೆಗೆ ಬಳಸಿಕೊಳ್ಳಬಹುದು. ಮತ್ತು ಚರ್ಚೆಗೆ ಗ್ರಾಸವಾಗಬಹುದೇ ವಿನಃ ಅದು ನಿಜವಾಗಿ ತನಿಖೆಯಾಗಬೇಕು ಎನ್ನುವ ಇಚ್ಛೆ ಇದ್ದರೆ ಕಂಪ್ಲೇಂಟ್ ಕೊಡಬೇಕು.

ಶ್ರೀ ಕೆ. ಜಯಪ್ರಕಾಶ ಹೆಗಡೆ: ಅದರ ಮೇಲೆ ಕ್ರಿಮಿನಲ್ ಕೇಸನ್ನು ಹಾಕಬೇಕಾಗುತ್ತದೆ. ಈ ಮಟ್ಟಕ್ಕೆ ಹೋಗುವಂಥ ಪರಿಸ್ಥಿತಿ ನಿರ್ಮಾಣವಾಗಿದೆ.

(ಈ ಹಂತದಲ್ಲಿ ಶ್ರೀ ಯು.ಆರ್. ಸಭಾಪತಿಯವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಕಾಗೋಡು ತಿಮ್ಮಪ್ಪ: If it is a fact. ಇಲ್ಲದಿದ್ದರೆ? ಏಕೆಂದರೆ ನಾವಿನ್ನೂ ifs and butsನಲ್ಲಿದ್ದೇವೆ.

ಶ್ರೀ ಕೆ. ಜಯಪ್ರಕಾಶ ಹೆಗಡೆ: ಜೆರಾಕ್ಸ್ ಕಾಪಿಯನ್ನು ಕೋರ್ಟಿಗೆ ಪ್ರೊಡ್ಯೂಸ್ ಮಾಡಿದ್ದು, ಅಂಥ ಆದೇಶವಾಗಿಲ್ಲ ಎಂದು ಅಲ್ಲಿ ತಿಳಿಸಿದರು ಎಂದು ಈಗ ಸದಸ್ಯರು ಇಲ್ಲಿ ಹೇಳಿದರು.

ಶ್ರೀ ಕಾಗೋಡು ತಿಮ್ಮಪ್ಪ: ನಿಮ್ಮ ಹತ್ತಿರ ದಾಖಲೆಗಳಿದ್ದರೆ, ಸಂಬಂಧಪಟ್ಟ ಪೊಲೀಸರಲ್ಲಿ ಕೇಸ್ ದಾಖಲು ಮಾಡಿ.

ಶ್ರೀ ಕೆ. ಜಯಪ್ರಕಾಶ ಹೆಗಡೆ: ಬೆಳೆಗ್ಗೆಯೂ ಇಲ್ಲಿ ಒಂದು ವಿಷಯ ಚರ್ಚೆಯಾಯಿತು. If it is for the court to take action ಲೈವ್‌ಬ್ಯಾಂಡ್ ಬಗ್ಗೆ ಚರ್ಚೆಯಾಯಿತು. ತಾವ್ಯಾರು ಅದಕ್ಕೆ ಉತ್ತರವನ್ನು ಕೊಡಲಿಲ್ಲ. ಲೈವ್‌ಬ್ಯಾಂಡನ್ನು ಪೊಲೀಸನವರು ನಿಲ್ಲಿಸಿದ್ದಕ್ಕೆ, ಪೊಲೀಸಿನವರೇ ಹೇಳಿಕೊಟ್ಟು ಹೈಕೋರ್ಟಿನಿಂದ ಸ್ಟೇ ಆರ್ಡರ್ ತೆಗೆದುಕೊಂಡು ಬಂದು ಲೈವ್‌ಬ್ಯಾಂಡನ್ನು

ನಡೆಸುತ್ತಿದ್ದಾರೆ ಎಂದು ಚರ್ಚೆಯಾಯಿತು. ಸಿ.ಇ.ಟಿ ಯಲ್ಲಿ ಇಂಟರ್‌ಫಿಯರ್ ಆಗಿ ಆದೇಶವನ್ನು ಬದಲಾವಣೆ ಮಾಡಲಿಕ್ಕಾಗುತ್ತದೆ. ಬೆಳಿಗ್ಗೆ ಎಪಿಎಂಸಿ ಬಿಲ್ಲನ್ನು ಮಂಡಿಸಿದಾಗ ಮಾನ್ಯ ಸಚಿವರು ಹೈಕೋರ್ಟಿನ ನಿರ್ದೇಶನವಿದೆ ಎಂದು ಹೇಳಿದರು. ಆದ್ದರಿಂದ, ಸರ್ಕಾರ ಕಾನೂನಿನ ತಿದ್ದುಪಡಿ ಮಾಡಿ ಲೈವ್‌ಬ್ಯಾಂಡಿಗೆ ಆದೇಶ ಸಿಕ್ಕದಂತೆ ಮಾಡಬೇಕಾಗುತ್ತದೆ. ಆದರೆ ಹೈಕೋರ್ಟ್‌ನವರು ಆದೇಶವನ್ನು ಕೊಡುವುದರ ಬಗ್ಗೆ ಸಹ ತೀವ್ರ ಗಮನವನ್ನು ಹರಿಸಬೇಕಾಗುತ್ತದೆ. ಹೈಕೋರ್ಟಿನವರೂ ಇದರ ಬಗ್ಗೆ ಆಲೋಚನೆಯನ್ನು ಮಾಡಬೇಕು. ಸಮಾಜದಲ್ಲಿನ ಆಗುಹೋಗುಗಳ ಬಗ್ಗೆ ಕೇವಲ ಜನಪ್ರತಿನಿಧಿಗಳು ಮಾತ್ರವಲ್ಲ, ಅವರೂ ಆಲೋಚನೆ ಮಾಡಬೇಕು. ಅಲ್ಲಿ ಅವರು ಯಾವ ರೀತಿಯಲ್ಲಿ ಪ್ರಿಸಿಡೆಂಟನ್ನು ಮಾಡುತ್ತಾರೋ ಅದೇ ರೀತಿ ಇಂಥಾದ್ದರಲ್ಲೂ ಸಹ ಮಾಡಬೇಕು. They should say laws. ಇದಕ್ಕೆಲ್ಲಾ ನ್ಯಾಯಾಲಯದಲ್ಲಿ ಅನುಮತಿಯನ್ನು ಕೊಡುವಂಥ ಅವಕಾಶವನ್ನು ಮಾಡಕೊಡಬಾರದು. ಸರ್ಕಾರ ಮತ್ತು ನ್ಯಾಯಾಲಯ ಇವೆರಡೂ ಇದರ ಬಗ್ಗೆ ಗಮನ ಹರಿಸಬೇಕಾಗುತ್ತದೆ ಎಂದು ಹೇಳುತ್ತೇನೆ.

ಮಾನ್ಯ ಮೀನುಗಾರಿಕಾ ಸಚಿವರು ಈಗ ಇಲ್ಲಿ ಇಲ್ಲ. ಬೆಳಿಗ್ಗೆ ಗೋಪಾಲ ಭಂಡಾರಿಯವರು ಕೆಲವು ವಿಷಯಗಳನ್ನು ಹೇಳಿದರು. ಮಾನ್ಯ ಸಚಿವರ ಹೇಳಿಕೆಗಳನ್ನು ಬಹಳಷ್ಟು ನೋಡಿದ್ದೇನೆ. ಅದರ ಕಾಪಿಗಳು ನನ್ನಲಿವೆ. ಅವುಗಳನ್ನು ಓದಿ ಹೇಳಲು ಒಂದು ದಿವಸ ಬೇಕೆಂದು ಕಾಣುತ್ತದೆ. ಅವರು ಮೀನುಗಾರಿಕೆಗೆ ಸಾವಿರಾರು ಕೋಟಿ ರೂಪಾಯಿ ಅನುದಾನದ ಬಗ್ಗೆ ಮಾತನಾಡಿದ್ದಾರೆ. ಆದರೆ, ಮೀನುಗಾರಿಕೆಗೆ 4–5 ಕೋಟಿ ರೂ. ಅನುದಾನವನ್ನು ಕೊಟ್ಟಿರಬಹುದು, ಅದೂ ಸಹ ಸರಿಯಾಗಿ ಬಿಡುಡಗೆಯಾಗಿಲ್ಲ. ಕಡಲ ಕೊರೆತದ ಬಗ್ಗೆ 10 ಕೋಟಿ ರೂಪಾಯಿಗಳಲ್ಲಿ ಹೊಸ ತಂತ್ರಜ್ಞಾನದಲ್ಲಿ ಮಾಡುತ್ತೇವೆ ಎಂದು ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯದಲ್ಲಿ ಹೇಳಿದ್ದಾರೆ. ಉಲ್ಲಾಳದಲ್ಲಿ ಒಂದು ಪೈಲಟ್ ಕಾರ್ಯಕ್ರಮವನ್ನು ಮಾಡಲು 7.5 ಕೋಟಿ ರೂಪಾಯಿಗಳು ಬೇಕು ಎಂದು ಹೇಳಿ, 10 ಕೋಟಿ ರೂಪಾಯಿಗಳನ್ನಿಟ್ಟರೆ ಅದರಿಂದ ಎಲ್ಲಾ ಕಾರ್ಯಕ್ರಮಗಳನ್ನು ಮಾಡಲು ಆಗುತ್ತದೆಯೇ? ಒಂದು ವರ್ಷದಿಂದ ಈ ಕೆಲಸವನ್ನು ಮಾಡಿಲ್ಲ. ಮಾನ್ಯ ಸಚಿವರು ಮತ್ತು ಅಂದಿನ ಕಾರ್ಯದರ್ಶಿಗಳು ಫ್ರಾನ್ಸ್‌ಗೆ ಹೋಗಿ ಬಂದರು. ಈವರೆಗೆ ಆ ಕೆಲಸ ಪ್ರಾರಂಭವಾಗಲಿಲ್ಲ. ಅಲ್ಲಿಗೆ ಹೋಗಿ ಬಂದ 15 ದಿವಸಗಳಲ್ಲಿ ಕಾರ್ಯದರ್ಶಿಗಳು ನಿವೃತ್ತರಾದರು.

ಶ್ರೀ ಕಾಗೋಡು ತಿಮ್ಮಪ್ಪ: ಕೆಲಸ ಪ್ರಾರಂಭವಾಗಬೇಕು ಎಂದರೆ ಅದಕ್ಕೆ ಒಂದು ಅಂದಾಜು ತಯಾರಾಗಬೇಕು, ಆ ಅಂದಾಜು ಸರ್ಕಾರಕ್ಕೆ ಬರಬೇಕು, ಮಂಜೂರಾತಿಯಾಗಬೇಕು, ಟೆಂಡರ್ ಕರೆಯಬೇಕು ಈ ಎಲ್ಲಾ ಪ್ರೊಸೀಜರ್‌ಗಳಿವೆ. ನೀವು ಮಂತ್ರಿಯಾಗಿ ಕೆಲಸ ಮಾಡಿದವರು, ನಿಮಗೇ ಗೊತ್ತಿರುತ್ತದೆ. ಈ ಕೆಲಸ ಮಾಡೋಣ ಎಂದು ಹೇಳುತ್ತೇನೆ. ಹಾಗೆಂದ ತಕ್ಷಣ ಕೆಲಸ ಶುರು ಮಾಡಲು ಆಗುತ್ತದೆಯೇ?

ಶ್ರೀ ಕೆ. ಜಯಪ್ರಕಾಶ ಹೆಗಡೆ: ನಾನೂ ಮಂತ್ರಿಯಾಗಿ ಕೆಲಸ ಮಾಡಿದ್ದರಿಂದಲೇ ಹೇಳುತ್ತಿದ್ದೇನೆ. ಒಂದು ವರ್ಷದ ಹಿಂದೆಯೇ, ಪ್ರಾಜೆಕ್ಟ್ ರೆಡಿಯಾಗಿ, ಎಸ್ಟಿಮೇಟ್ ರೆಡಿಯಾಗಿದ್ದರೂ ಕೆಲಸ ಪ್ರಾರಂಭ ಮಾಡಲು ಸರ್ಕಾರ ಹಣ ಬಿಡುಗಡೆ ಮಾಡಲಿಲ್ಲ. ಕೇವಲ ಒಂದು ಪೈಲಟ್ ಪ್ರಾಜೆಕ್ಟ್ ಮಾಡಿದ ಕೂಡಲೇ, ಇಡೀ ಕರಾವಳಿಯಲ್ಲಿ ತಡೆಗೋಡೆ ನಿರ್ಮಾಣವಾದ ಹಾಗೆ ಆಗುವುದಿಲ್ಲ. ಈಗ ಇಟ್ಟಿರುವ 10 ಕೋಟಿ ರೂಪಾಯಿ ಹಿಂದಿನ ಬಾಕಿ ಕೊಡಲು ಸಾಕಾಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ಹಣ ಬಿಡುಗಡೆಯಾಗಲಿಲ್ಲ, ಹಣ ಬಿಡುಗಡೆಯಾಗಲಿಲ್ಲ ಎಂದರೆ ಹಣವನ್ನು ಅಲ್ಲಿಗೆ ತೆಗೆದುಕೊಂಡು ಹೋಗಿ ಗಾಡಿ ಮೇಲೆ ನಿಲ್ಲಿಸಿಕೊಂಡಿರುತ್ತಾರೆಯೇ? ಎಸ್ಟಿಮೇಟ್ ಮಾಡಿ, ಟೆಂಡರ್ ಕರೆದು, ಏಜೆನ್ಸಿ ಫಿಕ್ಸ್ ಆಗಿ ಕೆಲಸ ಶುರುವಾದ ಮೇಲೆ ಎಲ್‌ಓಸಿ ಬೀಳುವ ಸಂದರ್ಭದಲ್ಲಿ, ಪೇಮೆಂಟ್ ಆಗುವ ಸಂದರ್ಭದಲ್ಲಿ ಬಿಡುಗಡೆ ಮಾಡುತ್ತಾರೆ. ಇದು ನಾವು ಕೇಳಿದ್ದು, ನೋಡಿದ್ದು, ಮಾಡಿದ್ದು, ಆದರೆ ನೀವು ಹಣವನ್ನೇ ಬಿಡುಗಡೆ ಮಾಡಿಲ್ಲ, ಬಿಡುಗಡೆ ಮಾಡಿಲ್ಲ ಎಂದು ಹೇಳುತ್ತೀರಿ. ಒಂದು ವೇಳೆ ಬಿಡುಗಡೆ ಮಾಡುತ್ತೇವೆ ಎಂದು ತಿಳಿದುಕೊಳ್ಳಿ, ಅದೇನು ಅಂಗಡಿ ಸಾಮಾನೇ, ತೆಗೆದುಕೊಂಡು ಹೋಗಿ ಅಂಗಡಿ ಇಟ್ಟುಕೊಂಡು ವ್ಯಾಪಾರ ಮಾಡುವುದಕ್ಕೆ?

ಶ್ರೀ ಕೆ. ಜಯಪ್ರಕಾಶ ಹೆಗಡೆ: ಮಾನ್ಯ ಸಚಿವರಾದ ಕಾಗೋಡು ತಿಮ್ಮಪ್ಪನವರು ಪ್ರಾಯಶಃ ಅದರ ಬಗ್ಗೆ ಮಾಹಿತಿ ತೆಗೆದುಕೊಂಡಿಲ್ಲವೆಂದು ಕಾಣುತ್ತದೆ. ಅಧ್ಯಕ್ಷರಿಗೆ ಅದರ ಬಗ್ಗೆ ಮಾಹಿತಿ ಇದೆ. ಸಚಿವರು ಫ್ರಾನ್ಸ್‌ಗೆ ಹೋಗಿ ಬಂದ ಮೇಲೆ ಕೆಲಸವನ್ನು ಮಾಡುತ್ತೇವೆ ಎಂದು ಹೇಳಿದೆ ಫ್ರಾನ್ಸ್ ಕಂಪನಿಯವರು ತಮ್ಮ ಪಾಲಿನ ಶೇಕಡಾ 30 ರಷ್ಟು ಅನುದಾನವನ್ನು ರೆಡಿ ಮಾಡಿ ಇಟ್ಟಿದ್ದೇವೆ, ನೀವು ಯಾವಾಗ ಹಣವನ್ನು ಕೊಡುತ್ತೀರಿ ಎಂದು ಪತ್ರವನ್ನು ಬರೆದಿದ್ದಾರೆ. ಅದನ್ನು ಮಾನ್ಯ ಸಚಿವರು ನನಗೆ ತಿಳಿಸಿದ್ದಾರೆ. 10 ಕೋಟಿ ರೂಪಾಯಿಗಳಲ್ಲಿ ಇಡೀ ಸಮುದ್ರದ ತಡೆಗೋಡೆಯನ್ನು ನಿಲ್ಲಿಸಲು ಸಾಧ್ಯವಾಗುವುದಿಲ್ಲ. ಹಳೆಯ ಬಾಕಿಯೇ 10 ಕೋಟಿ ರೂಗಿಂತ ಜಾಸ್ತಿ ಇದೆ. ಬರೀ ಹೇಳಿಕೆಯನ್ನು ಕೊಟ್ಟು ಅದನ್ನು ಸರಿ ಮಾಡುವುದಕ್ಕಾಗುವುದಿಲ್ಲ. ಸ್ವಲ್ಪ ಜಾಸ್ತಿ ಹಣವನ್ನು ಬಿಡುಗಡೆ ಮಾಡಬೇಕು. ಇದರ ಹೊಸತಂತ್ರಜ್ಞಾನ ಗೊತ್ತಿಲ್ಲ. But it is an experiment. I appreciate it. ಅದು ಆಗುತ್ತದೆಯೇ? ಏಕೆಂದರೆ, ಒಂದು ವರ್ಷದಿಂದ ಮಾಡದೇ ಇದ್ದಂಥಾದ್ದು ಈಗ ಮಾಡಲು ಆಗುತ್ತದೆಯೇ? ಏಕೆಂದರೆ, ಕರಾವಳಿಯಲ್ಲಿ ಈಗ ಪುನಃ ಮಳೆಗಾಲ ಪ್ರಾರಂಭವಾಗುತ್ತದೆ. ಆಗ ಏನು ಮಾಡುತ್ತೀರಿ ಎನ್ನುವ ಪ್ರಶ್ನೆಯನ್ನು ನಾನು ಮಾಡುತ್ತಿದ್ದೇನೆ. ಆಯವ್ಯಯದಲ್ಲಿ ಕೇವಲ ಒಂದು ಕಾಮಗಾರಿಯ ಬಗ್ಗೆ ಬಂದರೆ ಸಾಕಾಗುವುದಿಲ್ಲ.

4.40 ಪಿಎಂ

ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಸಭೆ ನಡೆದಾಗ ಮೀನುಗಾರರಿಗೆ ಕೊಡುವಂಥ ಐಸ್ ಮೇಲಿನ ಟ್ಯಾಕ್ಸ್ ಅನ್ನು ವಜಾ ಮಾಡುತ್ತೇವೆಂದು ಹೇಳಿದ್ದರು. ಆ ಸಭೆಯಲ್ಲಿ ನಾನೂ ಕೂಡ ಇದ್ದೆ. ಅದು ಇನ್ನೂ ಆಗಲಿಲ್ಲ ಮತ್ತು ಈ ಆಯವ್ಯಯ ಪತ್ರದಲ್ಲಿ ಸಹ ಹೇಳಲಿಲ್ಲ. ಡೀಸಲ್ ಮೇಲಿನ ಕರದ ಬಗ್ಗೆ ಬೆಳಿಗ್ಗೆ ಚರ್ಚೆ ಆಯಿತು. ಡೀಸಲ್ ಮೇಲಿನ ಕರವನ್ನು ಕಳೆದ ನಾಲ್ಕೈದು ವರ್ಷಗಳಿಂದ, ಅದನ್ನು ನಮ್ಮ ಸರ್ಕಾರ ಕೊಡಲಿಕ್ಕೆ ಶುರುಮಾಡಿತು. ಒಂದು ವರ್ಷ ಮಾತ್ರ ಇವರು ಕೊಡುತ್ತೇವೆಂದು ಹೇಳಿದ್ದರು. ಇದು ಪ್ರತಿ ವರ್ಷ ಬಜೆಟ್‌ನಲ್ಲಿ ಬರುವುದಿಲ್ಲ. ಆಮೇಲೆ ಮೀನುಗಾರರ ಮುಖಂಡರು ಬರುವಂಥದ್ದು ಸರ್ಕಾರವನ್ನು ಬೇಡಿಕೊಳ್ಳುವಂಥದ್ದು, ಅದನ್ನು ಪುನಃ ಮಾಡುವಂಥದ್ದು, ಈ ರೀತಿ ಮಾಡುವುದರ ಬದಲು 17 ಕೋಟಿ ರೂಪಾಯಿಗಳ ಶಾಶ್ವತವಾದಂಥ ಒಂದು ವ್ಯವಸ್ಥೆಯನ್ನು ಅಲ್ಲಿ ಮಾಡಿದರೆ, ಪ್ರತಿಯೊಂದು ಸಲ ಈ ಭಿಕ್ಷೆಯನ್ನು ಬೇಡುವಂಥ ಸಮಸ್ಯೆ ಉದ್ಭವವಾಗುವುದಿಲ್ಲವೆಂದು ಹೇಳುತ್ತಾ 'ಅಂಚಿನ ಹಣ ಹೊಸ ತಂತ್ರಜ್ಞಾನದ ಮಾರುಕಟ್ಟೆಯನ್ನು ಮಾಡಲಿಕ್ಕೆ ಎಂದು' ಮಹಿಳಾ ಮೀನುಗಾರರಿಗೆ

ಆಯವ್ಯಯದಲ್ಲಿ ಒಂದು ಕಾರ್ಯಕ್ರಮವನ್ನು ಹೇಳಿದ್ದಾರೆ. ಹೊಸ ತಂತ್ರಜ್ಞಾನದ ಮಾರುಕಟ್ಟೆಯನ್ನು ಮಾಡಲಿಕ್ಕೆ ಎಂದು ಹೇಳಿದರೆ ಅದು ಬಹಳ ಕಷ್ಟದ ಕೆಲಸ. ಅದು ಏನು ಎಂದು ಸರಿಯಾಗಿ ನೀವು explain ಮಾಡಬೇಕು. ಏಕೆಂದರೆ ಅವರಿಗೆ ವ್ಯಾಪಾರಕ್ಕೆ 5000 ರೂಪಾಯಿ ಕೊಟ್ಟರೆ ಸಾಕಾಗುತ್ತದೆ. ಮಾರುಕಟ್ಟೆಯನ್ನು ಮೀನುಗಾರರ ಮಹಿಳೆಯರಿಂದ ಮಾಡುವುದಕ್ಕಾಗುವುದಿಲ್ಲ, ಇದು ಸಭಾ ಛೇರ್ಮನರಿಗೆ ಗೊತ್ತಿದೆ. ಹಾಗಾಗಿ ಯಾವ ರೀತಿಯಲ್ಲಿ ಈ ವ್ಯವಸ್ಥೆಯನ್ನು ಮಾಡುತ್ತಾರೆ, 5000 ರೂಪಾಯಿ ಎಂಥ ಒಂದು ಕಾರ್ಯಕ್ರಮಕ್ಕೆ ಕೊಡುತ್ತಾರೆಂಬ ಬಗ್ಗೆ ಹೇಳಬೇಕು. ಕೇವಲ ಇದನ್ನು ಹೇಳಿದರೆ ಬರೀ ಮುಂಗೈಗೆ ಬೆಲ್ಲವನ್ನು ಹಾಕಿ ಇಟ್ಟಂತಾಗಿದೆ. ಆ ರೀತಿ ಮಾಡದೆಯೇ ಈ ಕಾರ್ಯಕ್ರಮ ಏನು ಎಂಬುದನ್ನು ವಿವರಿಸಬೇಕೆಂದು ಹೇಳುತ್ತ.....

ಶ್ರೀ ಕಾಗೋಡು ತಿಮ್ಮಪ್ಪ: ಹೊಸ ತಂತ್ರಜ್ಞಾನ ಎಂದು ಹೇಳಿದರೆ ಅದನ್ನು ಅಮೇರಿಕಾದಿಂದ ತರುವುದು ಅಲ್ಲ. ಈಗ ದಕ್ಷಿಣ ಕನ್ನಡದಲ್ಲಿ ಹೆಣ್ಣು ಮಕ್ಕಳು ಮೀನು ಮಾರುವುದಕ್ಕೆ ಹೇಗೆ ಬರುತ್ತಾರೆ ಎನ್ನುವುದು ಗೊತ್ತು. ಅವರು ಏನು ಮಾಡುತ್ತಾರೆಂದರೆ ಮೀನು ಮಾರುವುದಕ್ಕೆ ದಾರಿ ಮೇಲೆ ನಿಂತುಕೊಳ್ಳುತ್ತಾರೆ, ಅಥವಾ ಎಲ್ಲಿ ಖಾಲಿ ಜಾಗ ಇದೆಯೋ ಅಲ್ಲಿ ನಿಂತುಕೊಳ್ಳುತ್ತಾರೆ, ಅಂಥವರಿಗೆ ಕುಳಿತುಕೊಳ್ಳುವುದಕ್ಕೆ ಕರಾರುವಕ್ಕಾಗಿ ಲೈನ್ ಹಾಕಿ. ಮಳೆಗಾಲ ಆದರೆ ಶೆಡ್ ಹಾಕಿ ಕೊಟ್ಟರೆ ಅಲ್ಲಿ ಶಾಶ್ವತವಾಗಿ ಕುಳಿತುಕೊಂಡು ಮಾರುತ್ತಾರೆ. ಮೀನು ಜಾಸ್ತಿ ವಾಸನೆ ಇರುವುದರಿಂದ ಅದನ್ನು ಮುಟ್ಟಿದ ಮೇಲೆ ಕೈ ತೊಳೆಯುವುದಕ್ಕೆ ಕ್ಲೀನ್ ಮಾಡುವ ವ್ಯವಸ್ಥೆ ಮಾಡಿದರೆ ಆಯಿತು.

ಛೇರ್ಮನ್: ಆ ಹಣದಿಂದ ಐಸ್ ಬಾಕ್ಸ್ ತೆಗೆದುಕೊಳ್ಳುವುದಕ್ಕೆ ಆಗುತ್ತದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಹಾಗಲ್ಲ, ಹೊಸ ತಂತ್ರಜ್ಞಾನ ಎಂದರೆ ತಾವು ಸ್ವಲ್ಪ ಸರಿಯಾಗಿ ಹೇಳಬೇಕು. ಅವರು ಹೊಸ ತಂತ್ರಜ್ಞಾನ ಎಂದು ಹೇಳಿದ್ದಾರೆ.

ಛೇರ್ಮನ್: ಐಸ್ ಬಾಕ್ಸ್ ಹೊಸ ತಂತ್ರಜ್ಞಾನ. ಹೊಸ ತಂತ್ರಜ್ಞಾನ ಎಂದರೆ ಮಾಹಿತಿ ತಂತ್ರಜ್ಞಾನ ಅಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಅಲ್ಲ, ಕಂಪ್ಯೂಟರ್‌ನಲ್ಲಿ ಅವರಿಗೆ ಅಕೌಂಟಿಂಗ್ ಮೇಯಿಂಟೇನ್ ಮಾಡುವುದಕ್ಕಾ?

ಶ್ರೀ ಕಾಗೋಡು ತಿಮ್ಮಪ್ಪ: ಹೊಸ ತಂತ್ರಜ್ಞಾನ ಅಂದರೆ ಮಾಹಿತಿ ತಂತ್ರಜ್ಞಾನ ಅಲ್ಲರೀ. ಮೀನು ಇಲ್ಲದಿರುವ ಜಾಗಕ್ಕೆ ನಾವು ಮೀನು ಮಾರುಕಟ್ಟೆ ಮಾಡಿದರೆ ಅದು ಹೊಸ ತಂತ್ರಜ್ಞಾನ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಮೀನು ಮಾರುಕಟ್ಟೆ ಇದೆ. ಅವರಿಗೆ ನೀವು ಯಾವುದಕ್ಕಾಗಿ 5000 ರೂಪಾಯಿಗಳನ್ನು ಕೊಡುತ್ತೀರಿ ಎನ್ನುವುದರ ಬಗ್ಗೆ ಸ್ವಲ್ಪ ಸರಿಯಾಗಿ ಹೇಳಬೇಕಾಗುತ್ತದೆ. ಕೇವಲ ಹೊಸ ತಂತ್ರಜ್ಞಾನಕ್ಕೋಸ್ಕರ 5000 ರೂಪಾಯಿ ಕೊಡುತ್ತೇವೆಂದು ಹೇಳಿದರೆ ಅಷ್ಟು ಸರಿಯಾಗುವುದಿಲ್ಲ.

ಛೇರ್ಮನ್: ಅದರ ಬಗ್ಗೆ ರೂಲ್ಸ್ ಮಾಡುವಾಗ explain ಮಾಡೋಣ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಇದರ ಬಗ್ಗೆ ಸ್ವಲ್ಪ ವಿವರವನ್ನು ಕೊಡಬೇಕಾಗುತ್ತದೆಂದು ನನ್ನ ಸಲಹೆ ನಮ್ಮ ಭಾಗದಲ್ಲಿ ಸಣ್ಣ ನೀರಾವರಿಗೆ ಹೆಚ್ಚು ಹಣವನ್ನು ಕೊಡಬೇಕು. ನಮ್ಮ ಭಾಗದಲ್ಲಿ ಮೇಜರ್ ಇರಿಗೇಷನ್ ಯಾವುದೂ ಇಲ್ಲ. ಸಣ್ಣ ನೀರಾವರಿ ಇಲಾಖೆ ಸಣ್ಣದಾಗುತ್ತಿದೆ. ಏಕೆಂದರೆ ಅದಕ್ಕೆ ಅನುದಾನ ಕಡಿಮೆ ಆಗುತ್ತಿದೆ. ಅದಕ್ಕೆ ಅನುದಾನ ಜಾಸ್ತಿ ಕೊಟ್ಟಾಗ ನಮ್ಮಲ್ಲಿ ಚೆಕ್ ಡ್ಯಾಮ್ಸ್

ವೆಂಟೆಡ್ ಡ್ಯಾಮ್ಸ್, ಉಪ್ಪು ನೀರಿನ ತಡೆಗೋಡೆಯನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆ. ಪಶ್ಚಿಮ ವಾಹಿನಿ ಕಾರ್ಯಕ್ರಮವನ್ನು ಹೇಳಿದ್ದಾರೆ. ಮಾನ್ಯ ಕುಮಾರ ಬಂಗಾರಪ್ಪನವರು ಮಂತ್ರಿಯಾಗಿದ್ದಾಗ ಈ ಕಾರ್ಯಕ್ರಮವನ್ನು ಹಾಕಿಕೊಂಡಿರುವಂಥದ್ದು. ಇಲ್ಲಿಯವರೆಗೆ ಇದರ ಬಗ್ಗೆ ಹಣವನ್ನು ಇಟ್ಟು ಯಾವುದೇ ಒಂದು ಕಾರ್ಯಕ್ರಮವನ್ನು ಹಮ್ಮಿಕೊಳ್ಳದೆ ಈಗ ಕೊನೆಯಲ್ಲಿ ಪಶ್ಚಿಮ ವಾಹಿತಿ ಕಾರ್ಯಕ್ರಮ ಏಕೆ ಬಂತು ಎಂಬುದು ಗೊತ್ತಿಲ್ಲ. ಬೇರೆ ಎಲ್ಲಾ ಕಾರ್ಯಕ್ರಮಗಳಿಗಿಂತ ನಮ್ಮ ಪಶ್ಚಿಮ ವಾಹಿನಿ ಕಾರ್ಯಕ್ರಮವನ್ನು ಜಾರಿಗೆ ತಂದಾಗ, ಸಾಧಾರಣ 200–250 ಕೋಟಿ ರೂಪಾಯಿ ಹಣ ಇಡಿ, ಮೇಜರ್ ಇರಿಗೇಷನ್‌ಗೆ ಅದಕ್ಕಿಂತ ಜಾಸ್ತಿ ಹಣ ಬೇಕು. ಇದನ್ನು ಮಾಡಿದರೆ ಇಡೀ ಕರಾವಳಿ ಜನತೆಗೆ ಅಂದರೆ ಕೇವಲ ದಕ್ಷಿಣ ಕನ್ನಡ, ಉಡುಪಿ ಅಲ್ಲ ಉತ್ತರ ಕನ್ನಡದ ಎಲ್ಲರಿಗೂ ಇದರಿಂದ ಸಹಾಯವಾಗುತ್ತದೆ ಎಂದು ಹೇಳುತ್ತಾ, ಈ ಜಲಸಂವರ್ಧನೆ ಯೋಜನೆ ಕೇವಲ ನಿಮ್ಮ ಪತ್ರಿಕೆಯಲ್ಲಿ ಮಾತ್ರ ಆ ಕಾರ್ಯಕ್ರಮ ಉಳಿಯಿತು ಎಂದು ಹೇಳುತ್ತಾ ಬೇರೆ ಯಾವುದೇ ರೀತಿಯಲ್ಲಿ ಅದನ್ನು ಜಾರಿಗೆ ತರುವಂಥ ವ್ಯವಸ್ಥೆ ಆಗಲಿಲ್ಲ. ಕಾರವಾರದ ಕೋಸ್ಟಲ್ ಇನ್‌ವೆಸ್ಟರ್ಸ್ ಮೀಟ್ ಒಂದು ಆಯಿತು. ಸುಮಾರು 2 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಒಂದು ಇನ್‌ವೆಸ್ಟರ್ಸ್ ಮೀಟ್ ಅನ್ನು ಮಾಡಿದರು. ಮಾನ್ಯ ದೇಶಪಾಂಡೆಯವರು ಸುಮಾರು 5000 ಕೋಟಿ ರೂ ಇನ್‌ವೆಸ್ಟ್‌ಮೆಂಟ್ ಬಂದಿದೆ ಎಂದು ನನಗೆ ಉತ್ತರವನ್ನು ಕೊಟ್ಟಿದ್ದಾರೆ. ಹಾಗೆಯೇ ಪತ್ರಿಕೆಯಲ್ಲಿಯೂ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಇದಕ್ಕೆ ಸತ್ಯಕ್ಕೆ ದೂರವಾದ ವಿಚಾರವೆಂದು ನಾನು ಹೇಳುವುದಕ್ಕೆ ಇಚ್ಚಪಡುತ್ತೇನೆ. ಆ ಕಾರ್ಯಕ್ರಮದಲ್ಲಿ ಅವರು ಏನು MOUಗೆ ಸಹಿ ಮಾಡಿದ್ದೇವೆಂದು ಹೇಳಿದ್ದಾರೆ, ಬಂದರು ಅಭಿವೃದ್ಧಿ MOUಗೆ ಸಹಿ ಮಾಡಿಲ್ಲ. ಟೌನ್‌ಷಿಪ್ ಅಭಿವೃದ್ಧಿಗೆ, 2655 ಕೋಟಿ ರೂಪಾಯಿ ವಿದ್ಯುತ್ ಉತ್ಪಾದನೆಗೆ ಜಿಂದಾಲ್ ಪವರ್ ಪ್ಲಾಂಟ್ ಅವರೊಂದಿಗೆ MOU ಸಹಿ ಮಾಡಿದ್ದೇವೆಂದು ಹೇಳಿದ್ದಾರೆ. ಒಂದು ಪತ್ರ from Principal Secretary to Government ಇಂಧನ ಇಲಾಖೆಯಿಂದ Commissioner for Industrial Development and Director Industries ಗೆ ಬರೆದಿದ್ದಾರೆ. ಅದನ್ನು ಓದಿ ತಮ್ಮ ಮುಖೇನ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಯಾವ ಒಂದು ಪ್ರಾಜೆಕ್ಟ್‌ಗೆ MOU ಗೆ ಸಹಿ ಮಾಡಿದ್ದೇವೆಂದು ಮಾನ್ಯ Industries Minister ಹೇಳುತ್ತಾರೆ, ಅದನ್ನು ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ. ದಿಲೀಪ್ ರಾವ್‌ರವರು ಚಿಕ್ಕಮಠ್‌ರವರಿಗೆ ಬರೆದಿರುವ ಪತ್ರ.

"Please refer to your DO letter dated 17-12-2003 regarding Karnataka Coastal Investors' Meet at Karwar on 20th adn 21st of December of 2003. You havae requested me to sign a MOU on behalf of Energy Department, Government of Karnataka, with M/s Jindal Thermal Power Company limited to set up a thermal plant of 500 MW capacity in Udupi district. The government has already given approval to M/s. JTPCL to set up 200 to 250 MW thermal plant as an expansion of their existing power plant at Torangallu, Bellary District.

It is not clear whether the proposed 500 MW power plant in Udupi district is an additon to or lieu of the proposal at Torangallu. Moreover the proposed project of M/S JTPCL will be located near Mangalore where already 1000 MW thermal plant of M/s. Nagarjuna Power Co. Ltd. is supposed to come up. There is also a proposal of ONGC to set up a gas based power plant at Mangalore. Hence Engery Department requires sometime to examine the proposal of M/s. JTPCL. At such short notice, it will not be possible for me to sign MOU with M/s. JTPCL"

ಎಂದು ಹೇಳುತ್ತಾರೆ. ಇಂಧನ ಇಲಾಖೆಯ ಕಾರ್ಯದರ್ಶಿಯವರು ಸಹಿ ಮಾಡುವುದಿಲ್ಲವೆಂದು ಹೇಳುವಾಗ 'ಇನ್ನು 2655 ಮೆಗಾವ್ಯಾಟ್ ಇದಕ್ಕೆ ನಾವು MOUಗೆ ಸಹಿ ಮಾಡಿದ್ದೇವೆಂದು ಇವರು ಇವರ ಕಾರ್ಯಕ್ರಮದಲ್ಲಿ ಹೇಳಿಕೆಯನ್ನು ಕೊಡುತ್ತಾರೆ. ಆದರೆ ಇಷ್ಟು ಸುಳ್ಳು ಉತ್ತರವನ್ನು ಕೇವಲ ಪತ್ರಿಕಾ ಹೇಳಿಕೆಯನ್ನು ಮುಖಾಂತರ ಮಾತ್ರವಲ್ಲ ನಾನು ಕೇಳದ ಪ್ರಶ್ನೆಗೆ ಸದನದಲ್ಲಿ ಉತ್ತರವನ್ನು ಅದೂ ಕೂಡ ಸುಳ್ಳು ಉತ್ತರವನ್ನು ಕೊಟ್ಟಿದ್ದಾರೆ. ಆದ್ದರಿಂದ ಇವರು ಹೇಳಿದ್ದೆಲ್ಲಾ ಎಷ್ಟು ಸತ್ಯಕ್ಕೆ ಹತ್ತಿರವಾಗಿದೆ ಮತ್ತು ಎಷ್ಟು ದೂರವಾಗಿದೆ ಎಂಬುದರ ಬಗ್ಗೆ ತನಿಖೆ ಮಾಡಬೇಕಾಗುತ್ತದೆ. ಈ ಸದನದ ಕಾರ್ಯಕಲಾಪ ನಾಳೆಗೆ ಮುಗಿಯುತ್ತಿದೆ. ಇಲ್ಲದಿದ್ದರೆ ಅವರ ಮೇಲೆ Privilege Motion ಅನ್ನು ಮೂವ್ ಮಾಡಬೇಕೆಂದು ನಾನು ಆಲೋಚನೆಯನ್ನು ಮಾಡಿದ್ದೆ. ಏಕೆಂದರೆ ಯಾವುದೇ ಒಂದು ಉತ್ತರವನ್ನು ಸದನದಲ್ಲಿ ಕೊಡುವಾಗ ಅದು ಸತ್ಯಕ್ಕೆ ದೂರವಾದುದ್ದನ್ನು ಕೊಟ್ಟರೆ it amounts to privilege. ಸರ್ಕಾರಿ ಅಧಿಕಾರಿಗಳು ಯಾವ ರೀತಿಯಲ್ಲಿ ವರ್ಗಾವಣೆ ಆಗುತ್ತಾರೆ ಅದೇ ರೀತಿ ಮಂತ್ರಿಗಳನ್ನು ಸಹ ಒಂದೇ ಇಲಾಖೆಯಲ್ಲಿ ಹೆಚ್ಚು ವರ್ಷಗಳು ಇರದ ಹಾಗದೆ ಬದಲಾವಣೆ ಮಾಡುತ್ತಾ ಇರಬೇಕೆಂದು ಕಾಣುತ್ತದೆ. ಏಕೆಂದರೆ ನಮ್ಮ ಸರ್ಕಾರ ಇದ್ದಾಗ ಅವರೇ ಈ ಕೈಗಾರಿಕೆಗಳ ಇಲಾಖೆಗೆ ಮಂತ್ರಿಯಾಗಿದ್ದರು, ಈಗಲೂ ಶ್ರೀ ದೇಶಪಾಂಡೆಯವರೇ ಅದೇ ಇಲಾಖೆಗೆ ಮಂತ್ರಿಯಾಗಿ ಇದ್ದಾರೆ. ಯಾರು ಭ್ರಷ್ಟರು ಇದ್ದಾರೆ ಅವರಿಗಿಂತ ಅವರನ್ನು ರಕ್ಷಣೆ ಮಾಡುವವರ ಮೇಲಿನ ತಪ್ಪು ಜಾಸ್ತಿ ಆಗುತ್ತದೆ. ಹಿಂದೆ ಒಂದು ಸಾರಿ ಮಾನ್ಯ ಎಸ್.ಎಸ್. ಪಾಟೀಲರು Karnataka Soaps and Detergent ಬಗ್ಗೆ ಮಾತನಾಡಿದರು. CoPU ನಲ್ಲ ಇದರ ಬಗ್ಗೆ ಆಪಾದನೆಗಳನ್ನು ಮಾಡಿ ವರದಿಯನ್ನು ತರಿಸುತ್ತಾರೆ. ಆಪಾದನೆ Financial aspect ಬಗ್ಗೆ Finance Department ನ Head ಜಿ.ಎಸ್.ಭಟ್ ಎನ್ನುವವರು ಇದ್ದಾರೆ. ಅವರ ಮೇಲೆ ಆಪಾದನೆ ಆಗುತ್ತದೆ As a Secretary of the Company ಅವರೇ ಅದಕ್ಕೆ ಉತ್ತರವನ್ನು ಕೊಡುವಂಥದ್ದು. ಇದು 1995ರಲ್ಲಿ ಶ್ರೀ ಬೆಳ್ಳಿಯಪ್ಪನವರು ಸ್ಕ್ರೆಟರಿಯಾಗಿದ್ದಾಗ ಅವರನ್ನು ಬದಲಾವಣೆ ಮಾಡಿದರು. ಅಲ್ಲಿಂದ ಅವರನ್ನು ತೆಗೆದದ್ದಕ್ಕೆ ಮಾರನೇ ದಿವಸ ಸಂಬಂಧಪಟ್ಟ ಸಚಿವರು ಹೋಗಿ ಅಲ್ಲಿ subject to correction, it is on record, ಅವರು ಹೋಗಿ ಮೀಟಿಂಗ್ ಅನ್ನು ಮಾಡಿ ಒಂದೇ ದಿವಸದಲ್ಲಿ ಆರ್ಡರ್ ಅನ್ನು ಬದಲಾವಣೆ ಮಾಡಿ ಒಂದೇ ದಿವಸದಲ್ಲಿ ಅವರನ್ನು ಪುನಃ Financial Departmentನ Head and Company Secretary ಆಗಿ ಮಾಡಿ ಎರಡರಲ್ಲೂ ಅವರನ್ನು ಮುಂದುವರಿಸಿದ್ದಾರೆ. ಅವರು ಕಂಪನಿ

ಸೆಕ್ರೆಟರಿಯಾಗಿ ಇದರಲ್ಲಿ ಉತ್ತರವನ್ನು ಕೊಡುತ್ತಾರೆ. ಈ ವ್ಯಕ್ತಿ ದಾಂಡೇಲಿ ಪೇಪರ್ ಮಿಲ್ಸ್‌ನಲ್ಲಿ ಇದ್ದಾಗ 2500 ರೂಪಾಯಿಗಳನ್ನು ಕಟ್ಟಲಿಕ್ಕೆ ಸಾಧ್ಯವಾಗದೆ, ಇವರಿಂದ ಆ ಹಣವನ್ನು ವಸೂಲಿ ಮಾಡಿ ಕೊಡಿ ಎಂದು ಅಲ್ಲಿಂದ ಅವರು ಪತ್ರವನ್ನು ಬರೆದಿದ್ದರು. ಅವರು ಶೇರ್ ಮಾರ್ಕೆಟ್ಟಿನಲ್ಲಿ 18 ಲಕ್ಷ ರೂಪಾಯಿಗಳನ್ನು ಕಟ್ಟಿರುವಂಥದ್ದರ ಬಗ್ಗೆ ಈಗ ನನ್ನ ಹತ್ತಿರ ದಾಖಲೆಗಳಿವೆ. ಹಾಗೆಯೇ ಆ ರೀತಿಯವರು ಇನ್ನೊಬ್ಬರು ಇದ್ದಾರೆ. ನಾನು ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ಅವರು Social Welfare Minister ಆಗಿದ್ದಾಗ ಒಂದು ಪ್ರಶ್ನೆಯನ್ನು ಕೇಳಿದ್ದೆ. ಎಷ್ಟು ಜನ ಸುಳ್ಳು ಸರ್ಟಿಫಿಕೇಟ್ ಅನ್ನು ಕೊಟ್ಟು ಮೆಡಿಕಲ್ ಸೀಟ್ ಅನ್ನು ತೆಗೆದುಕೊಂಡಿದ್ದಾರೆ ಎಂದು ಕೇಳಿದ್ದೆ. ಅದರ ಬಗ್ಗೆ ತನಿಖೆಯನ್ನು ಮಾಡಿ ಹೇಳುತ್ತೇನೆಂದು ಅವರು ಹೇಳಿದ್ದರು. ಈಗ ಅವರ ಇಲಾಖೆ ಬದಲಾವಣೆಯಾಗಿದೆ. ಸದರಿ ರೆಕಾರ್ಡ್ಸ್‌ನ್ನು ತಮ್ಮ ಮುಖೇನ ಸರ್ಕಾರಕ್ಕೆ ಕಳುಹಿಸಲಿಕ್ಕೆ ಇಚ್ಛೆಪಡುತ್ತೇನೆ. ಈಗ ಡಾಕ್ಟರ್ ಆಗಿರುವಂಥ ಆನಂದ್ ಎನ್ನುವವರು ಗ್ರೂಪ್-ಬಿ ಯಲ್ಲಿ ವೈಷ್ಣವ ಎಂದು ಕ್ಯಾಸ್ಟ್ ಸರ್ಟಿಫಿಕೇಟ್‌ನ್ನು ತೆಗೆದುಕೊಂಡು ಎಂಬಿಬಿಎಸ್ ಅನ್ನು ಮಾಡಿದ್ದಾರೆ. ನಂತರ ಅವರ ತಂದೆ ಪಿ.ಕೆ. ಶ್ಯಾನಭಾಗ್, ಮ್ಯಾನೇಜರ್ ಪ್ರೊಡಕ್ಷನ್, ಸೋಪ್ಸ್ ಅಂಡ್ ಡಿಟರ್‌ಜಂಟ್, ಅವರ ಸೀನಿಯಾರಿಟಿ ಲಿಸ್ಟ್‌ನಲ್ಲಿ ಬ್ರಾಮಿನ್ ಎಂದು ಬರುತ್ತದೆ. ಅಲ್ಲಿ (ಬಿ) ಗ್ರೂಪ್‌ನಲ್ಲಿ ಸರ್ಟಿಫಿಕೇಟ್ ತೆಗೆದುಕೊಂಡು ಅವರು ಎಂಬಿಬಿಎಸ್ ಅನ್ನು ಮಾಡುತ್ತಾರೆ. ಮಗನಿಗೆ ಬಿ ಗ್ರೂಪ್ ಸರ್ಟಿಫಿಕೇಟ್ ತೆಗೆದುಕೊಂಡು ಅವನು ಎಂಬಿಬಿಎಸ್ ಮಾಡಿ ಇಎಸ್‌ಐ ನಲ್ಲಿ ಅಪಾಯಿಂಟ್‌ಮೆಂಟ್‌ನಲ್ಲಿ ಇದ್ದಾರೆ, ತಂದೆ ಅವರಿಗೆ ಎಕ್ಸಿಕ್ಯೂಟೀವ್ ಡೈರೆಕ್ಟರ್ ಕೆಎಸ್ ಅಂಡ್ ಡಿಎಸ್ ಆಗಿ ಪ್ರಮೋಷನ್ ಕೊಟ್ಟಿದ್ದಾರೆ. ಅವರ ಸೀನಿಯಾರಿಟಿ ಲಿಸ್ಟ್‌ನಲ್ಲಿ ಬ್ರಾಮಿನ್ ಎಂದು ಬರುತ್ತದೆ, ಮಗನಿಗೆ (ಬಿ) ಗ್ರೂಪ್ ಎಂದು ಸರ್ಟಿಫಿಕೇಟ್ ತೆಗೆದುಕೊಂಡು ಎಂಬಿಬಿಎಸ್ ಮಾಡಿ ಈಗ ಅವರು ಇಎಸ್‌ಐ ಆಸ್ಪತ್ರೆಯಲ್ಲಿ ಡಾಕ್ಟರ್ ಆಗಿದ್ದಾರೆ. ಇದನ್ನು ನಾನು ಎರಡು ವರ್ಷಗಳ ಹಿಂದೆ ಹೇಳಿದ್ದೇ, ಇವತ್ತು ದಾಖಲೆಗಳು ಇವೆ ಪುನಃ ಅದನ್ನು ತನಿಖೆ ಮಾಡಿಸಿ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಎರಡು ವರ್ಷದ ನಂತರ ನನಗೆ ಉತ್ತರವೂ ಬರಲಿಲ್ಲ. ಏಕೆಂದರೆ, ತಾವೂ ಕೂಡ ಆ ಸಮಿತಿಯಲ್ಲಿ ಇದ್ದೀರಿ, ಡೈರೆಕ್ಟರ್ ಆಫ್ ಬ್ಯಾಕ್‌ವರ್ಡ್ ಕ್ಲಾಸ್‌ನವರಿಗೆ ನಾನು ಪ್ರಶ್ನೆಯನ್ನು ಕೇಳಿದ್ದೆ... ತಾವು ಹೇಳಿದ ಮೇಲೆ ತಮ್ಮದು ಇಲಾಖೆ ಬದಲಾವಣೆಯಾಯಿತು. ತಾವು ಹೇಳಿದಿರಿ, ಬೇಕಾದರೆ ನೋಡಿ It is on record.

ಶ್ರೀ ಕಾಗೋಡು ತಿಮ್ಮಪ್ಪ: ನನಗೆ ನೆನಪು ಇಲ್ಲ. ಬದಲಾವಣೆಯಾದ ಕೂಡಲೇ ಜವಾಬ್ದಾರಿ ತಪ್ಪಿಸಿಕೊಳ್ಳುತ್ತಾರೆಂದು ತಿಳಿದುಕೊಳ್ಳಬೇಡಿ. ಈಗ ನೀವು ಪ್ರಸ್ತಾಪಿಸಿದ್ದೀರಿ, ತನಿಖೆ ಮಾಡಿ ಎಂದು ಹೇಳಿದ್ದೆ ಬಟ್ ನನಗೆ ನೆನಪು ಇಲ್ಲ. ಈಗಲೂ ಕೂಡ ಮಾಡಿಸುತ್ತೇವೆ. ಏಕೆಂದರೆ, ಜಾತಿ ಪ್ರಮಾಣ ಪತ್ರಕ್ಕೋ ಅಥವಾ ಆದಾಯ ಪ್ರಮಾಣ ಪತ್ರಕ್ಕೋ?

ಶ್ರೀ ಜಯಪ್ರಕಾಶ್ ಹೆಗಡೆ ಕೆ.: ಅಲ್ಲಿ ಅವರು ವೈಷ್ಣವ ಎಂದು ಬ್ಯಾಕ್‌ವರ್ಡ್ ಗ್ರೂಪ್ (ಬಿ) ಎಂದು ತೆಗೆದುಕೊಳ್ಳುತ್ತಾರೆ. ಆದಾಯದ್ದು ಕೊಟ್ಟಿದ್ದರೆ ನಾನು ಒಪ್ಪುತ್ತಿದ್ದೆ, ಆದಾಯದ್ದು ಇಲ್ಲಿ ಕೊಟ್ಟಿಲ್ಲ. ಜಾತಿ ಪ್ರಮಾಣ ಪತ್ರ ಕೊಟ್ಟಿರುವುದು.

ಶ್ರೀ ಕಾಗೋಡು ತಿಮ್ಮಪ್ಪ: ಜಾತಿ ಪ್ರಮಾಣ ಪತ್ರಕ್ಕೆ ಕೊಟ್ಟಿದ್ದರೆ, ಜಾತಿ ಪ್ರಮಾಣ ಪತ್ರ ಸುಳ್ಳು ಹೇಳಿ ತೆಗೆದುಕೊಂಡಿದ್ದರೆ ಯಾವ ಸಂದರ್ಭದಲ್ಲಾದರೂ ಕೂಡ ಈವನ್ ತಹಸೀಲ್ದಾರ್, ಡಿಸ್ಟ್ರಿಕ್ ಸೋಷಿಯಲ್ ಆಫೀಸರ್ ಅಥವಾ ಯಾರಾರೂ ಬೇಕಾದರೂ ತನಿಖೆ ಮಾಡಿ ವಾಪಸ್ ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ. ಅದಕ್ಕೆ ಕಾನೂನು ತಿದ್ದುಪಡಿ ಕೂಡ ನಾನೇ ಮಾಡಿದ್ದೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ಅದರ ಬಗ್ಗೆ ಇಲ್ಲಿ ಚರ್ಚೆಯಾಗಿತ್ತು ಅವರದ್ದು ಡಿಗ್ರಿ ಇರಬೇಕೋ ಬೇಡವೋ ಎಂದು ಚರ್ಚೆಯಾಗಿ, ಸುಳ್ಳು ಸರ್ಟಿಫಿಕೇಟ್ ಕೊಟ್ಟು ಎಲ್ಲಿಯಾದರೂ ಡಿಗ್ರಿ ಮಾಡಿದ್ದರೆ ಆ ಡಿಗ್ರಿಯನ್ನು ತೆಗೆಯಬೇಕೆಂದು ಇದೇ ಸದನದಲ್ಲಿ ಚರ್ಚೆಯಾಗಿತ್ತು. ನಾನು ಕೂಡ ಅದರಲ್ಲಿ ಭಾಗವಹಿಸಿದ್ದೆ. ಇನ್ನು ಪವರ್ ಪ್ರಾಜೆಕ್ಟ್‌ಗಳ ಬಗ್ಗೆ ಹೇಳುವುದಾದರೆ, ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ನನಗೆ ಅವಕಾಶ ಸಿಗದೇ ಇರುವುದರಿಂದ ನಾನು ಮಾತನಾಡಲಿಲ್ಲ, ಅಲ್ಲಿ ಮಾನ್ಯ ಮುಖ್ಯಮಂತ್ರಿಗಳು, ಸರ್ಕಾರ ಮಾನ್ಯ ರಾಜ್ಯಪಾಲರ ಹತ್ತಿರ ಒಂದು ಮಾತನ್ನು ಹೇಳಿಸಿದರು. ಏನೆಂದರೆ 24 ಗಂಟೆಗಳ ಕಾಲ ವಿದ್ಯುಚ್ಛಕ್ತಿ ಒದಗಿಸುತ್ತೇವೆಂದು ಹೇಳಿಸಿದ್ದರು. ಒಂದು ಪತ್ರಿಕಾ ಹೇಳಿಕೆ ಬಂತು, ಅದು ಏನೆಂದರೆ, ಅಂದಿನ ಮುಖ್ಯ ಕಾರ್ಯದರ್ಶಿಯವರು, "ಕೆಪಿಟಿಸಿಎಲ್ ಮೇಲೆ ಹರಿಹಾಯ್ದು ಬಿ.ಎಸ್. ಪಾಟೀಲ್" "ಬೆಂಗಳೂರಿನ ಬಗ್ಗೆ ಹೇಳುತ್ತಾ ಬೆನ್ನು ಚಪ್ಪರಿಸಿಕೊಳ್ಳಬೇಡಿ, ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿನ ವಿದ್ಯುತ್ ಸ್ಥಿತಿಯ ಬಗ್ಗೆ ಗಮನಹರಿಸಿ ಎಂದು ರಾಜ್ಯದ ಮುಖ್ಯ ಕಾರ್ಯದರ್ಶಿ ಬಿ.ಎಸ್. ಪಾಟೀಲ್ ಅವರು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ಮತ್ತು ವಿದ್ಯುತ್ ಸರಬರಾಜು ಕಂಪನಿಗಳ ಸಿಬ್ಬಂದಿಗೆ ಇಂದು ಇಲ್ಲಿ ಕಿವಿ ಮಾತು ಹೇಳಿದರು. ನೀವು ಬೆಂಗಳೂರಿಗೆ 24 ಗಂಟೆಗಳ ಕಾಲ ವಿದ್ಯುತ್ ಕೊಡುತ್ತಿದ್ದೀರಿ, ಅದನ್ನೇ ದೊಡ್ಡದಾಗಿ ಹೇಳಿಕೊಳ್ಳುತ್ತಿದ್ದೀರಿ, ನಿಮ್ಮ ಬೆನ್ನನ್ನು ನೀವೇ ಚಪ್ಪರಿಸಿಕೊಳ್ಳುತ್ತಿದ್ದೀರಿ, ಬೆಂಗಳೂರು ಹೊರತುಪಡಿಸಿ ಗ್ರಾಮಾಂತರ ಪ್ರದೇಶದಲ್ಲಿ ವಿದ್ಯುತ್ ಸ್ಥಿತಿ ಏನಾಗಿದೆ ಎಂದು ಯೋಚನೆ ಮಾಡಿ ಎಂದು ಮಾನ್ಯ ಮುಖ್ಯ ಕಾರ್ಯದರ್ಶಿಯವರು ಹೇಳಿದ್ದರು." ಆದರೆ ರಾಜ್ಯಪಾಲರ ಭಾಷಣದಲ್ಲಿ ಅವರೂ ಸಹ ಅದರಲ್ಲಿ ಪಾರ್ಟಿ ಅದನ್ನು ರಾಜ್ಯಪಾಲರ ಭಾಷಣದ ಡ್ರಾಫ್ಟ್ ಮಾಡುವಾಗ, 24 ಗಂಟೆಗಳ ಕಾಲ ಸಿಟಿಗೆ ಮಾತ್ರ ಕೊಡುತ್ತೇವೆ, ಆದರೆ ಇನ್ನೊಂದು ಡ್ರಾಫ್ಟನ್ನು ಓದುತ್ತೇನೆ.

"Proceedings of the meeting presided overy by Hon'ble Chief Minister at Home Office 'Krishna' on 10th December, 2003.

The Managing Director KPTCL made a presentation on the power scenario in the State. He said that the present availability of energy from all sources was 93.62 Mega units per day. At present 3 phase power is being supplied to the agriculture sector for 2 hours during day time to some villages and for 6 hours during night for other batch of villages.

The Chief Minister had instructed that 3 phase power supply for IP sets should be provided only during the day time as farmers face great hardship having to work in the fields from midnight onwards. M.D., KPTCL explained that with the present availability of power it would not be possible to supply 3 phase power to villages for 6 hours in the day time every day. He porposed the following schedule for supply;

6 hours - 3 phase during day time.

10 hours single phase during night time."

24 ಗಂಟೆಗಳ ಕಾಲ ಕೊಡುತ್ತೇವೆಂದು ರಾಜ್ಯಪಾಲರ ಭಾಷಣದಲ್ಲಿ ಬರುತ್ತದೆ. ಇಲ್ಲಿ ಸ್ವತಃ ಮಾನ್ಯ ಮುಖ್ಯಮಂತ್ರಿಗಳು ಪ್ರಿಸೈಡ್ ಮಾಡಿದ ಸಭೆಯಲ್ಲಿ ಮೂರು ಗಂಟೆಗಳ ಕಾಲ, ಆರು ಗಂಟೆಗಳ ಕಾಲ, ಎಂದು ಬರುತ್ತದೆ. ಅದರ ಅರ್ಥ ಮಾನ್ಯ ರಾಜ್ಯಪಾಲರ ಕೈಯಲ್ಲಿ ಸರಿಯಾದ ಮಾಹಿತಿಯನ್ನು ಕೊಡದೇ ಭಾಷಣವನ್ನು ಮಾಡಿಸಿದ್ದಾರೆ ಎಂಬುದು ಅರ್ಥವಾಗುತ್ತದೆ. ಅದೇ ರೀತಿಯಲ್ಲಿ ಕಳೆದ 4–5 ವರ್ಷದಲ್ಲಿ ಎಷ್ಟು ಹೊಸ ಪ್ರಾಜೆಕ್ಟ್ ಬಂದಿದೆ?

ಶ್ರೀ ಕಾಗೋಡು ತಿಮ್ಮಪ್ಪ: ತಾವು ಈಗ ಏನು ಕಳುಹಿಸಿ ಕೊಟ್ಟಿರಿ, ಇದರ ಪ್ರಕಾರ ಇದರಲ್ಲಿ ಸ್ಪಷ್ಟವಾಗಿದೆ. "ಶ್ರೀಯುತ ಆನಂದ್ ಅವರು ಹಿಂದುಳಿದ ವರ್ಗಗಳಿಗೆ ಮೀಸಲಾಗಿರುವ ಮೀಸಲಾತಿಯನ್ನು ದುರುಪಯೋಗಪಡಿಸಿಕೊಂಡು ಸುಳ್ಳು ಜಾತಿ ಪ್ರಮಾಣ ಪತ್ರ ಸಲ್ಲಿಸಿ ಸರ್ಕಾರಿ ಕೆಲಸ ಪಡೆದಿರುವವರೆಂದು ಸಹಾಯಕ ನಿರ್ದೇಶಕರು, ಹಿಂದುಳಿದ ವರ್ಗಗಳ ಇಲಾಖೆ ಇವರ ತನಿಖೆಯಿಂದ ಸಾಬೀತಾಗಿದೆ."

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ಇನ್ನೂ ಕ್ರಮ ತೆಗೆದುಕೊಂಡಿಲ್ಲ.. ಅದನ್ನೇ ಹೋಲ್ಡ್ ಮಾಡುತ್ತಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ: ತಾಳಿ. ತಾಳಿ. "ಶ್ರೀಯುತ ಆನಂದ್‌ರವರು ಇಎಸ್‌ಐ ಆಸ್ಪತ್ರೆ, ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಕಾರಣ ಸದರಿಯವರನ್ನು ಸರ್ಕಾರಿ ಸೇವೆಯಿಂದ ತೆಗೆದುಹಾಕುವ ಬಗ್ಗೆ ಕ್ರಮ ಜರುಗಿಸುವಂತೆ ಕಾರ್ಮಿಕ ಇಲಾಖೆಗೆ ತಿಳಿಸಲಾಗಿದೆ. ಇದು ಯಾವತ್ತು, ಎಂದರೆ 20–10–2003. ನವೆಂಬರ್, ಡಿಸೆಂಬರ್, ಜನವರಿ ಮೂರು ತಿಂಗಳಾಗಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ಮೂರು ತಿಂಗಳಾದರೂ ಕ್ರಮ ತೆಗೆದುಕೊಂಡಿಲ್ಲ ಎಂಬುದರ ಬಗ್ಗೆ ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ: ಕ್ರಮ ಏನಾಗಿದೆ ಎಂಬ ಬಗ್ಗೆ ತಕ್ಷಣ ತಿಳಿಸುತ್ತೇನೆ. ಹಿಂದುಳಿದ ವರ್ಗಗಳ ಇಲಾಖೆಯಿಂದ.. ಸ್ವಾಮಿ ಸ್ವಲ್ಪ ನಾನು ಹೇಳುವವರೆಗೆ ಕೇಳಿ.. ಈ ವಿಷಯ ಪ್ರಸ್ತಾಪ ಮಾಡಿದ ಮೇಲೆ ಅದು ಗಮನಕ್ಕೆ ಬಂದ ಮೇಲೆ, ಹಿಂದುಳಿದ ವರ್ಗದ ಇಲಾಖೆಯಿಂದ ತನಿಖೆಯನ್ನು ಮಾಡಿ, ಸುಳ್ಳು ಜಾತಿ ಪ್ರಮಾಣ ಪತ್ರ ತೆಗೆದುಕೊಂಡಿರುವುದು ನಿಜ ಇದೆ ಎಂದು ಸಾಬೀತಾಗಿದೆ. ಸಾಬೀತಾಗಿರುವ ಹಿನ್ನೆಲೆಯಲ್ಲಿ ಕಾರ್ಮಿಕ ಇಲಾಖೆಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ. ಅದು ಯಾವ ಹಂತದಲ್ಲಿ ಇದೆ ಎಂಬುದನ್ನು ತಿಳಿದುಕೊಂಡು ನಂತರ ಹೇಳುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ಇನ್ನೊಂದು ವಿಷಯ ತಮ್ಮ ಗಮನಕ್ಕೆ ತರುತ್ತೇನೆ. ಅವರು ಏನು ಹೇಳುತ್ತಾರೆಂದರೆ, ಇಲ್ಲಿ ಸುಳ್ಳು ಜಾತಿ ಪ್ರಮಾಣ ಪತ್ರ ಕೊಟ್ಟಿಲ್ಲ, ಅವರು ಕೊಟ್ಟಿದ್ದು ಅಲ್ಲಿ. ಆದುದರಿಂದ ನಾವು ಕ್ರಮ ತೆಗೆದುಕೊಳ್ಳಲಿಕ್ಕೆ ಬರುವುದಿಲ್ಲ ಎಂದು ನನಗೆ ಹೇಳಿದರು.

ಶ್ರೀ ಕಾಗೋಡು ತಿಮ್ಮಪ್ಪ: ಉತ್ತರ ಬರಲಿ ನಂತರ ನೋಡೋಣ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ಅದಕ್ಕೋಸ್ಕರವೇ ನಾನು ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಪವರ್ ಸೆಕ್ಟರ್‌ನಲ್ಲಿ ಕಳೆದ ನಾಲ್ಕೈದು ವರ್ಷಗಳಲ್ಲಿ ಎಷ್ಟು ಹೊಸ ಯೂನಿಟ್ ಪ್ರಾರಂಭವಾಗಿದೆ? ಎಷ್ಟು ಉತ್ಪಾದನೆ ಜಾಸ್ತಿಯಾಗಿದೆ ಎಂದು ನೋಡಿದರೆ ಇದು ಒಂದೂ ಇಲ್ಲ, 2004, 2005, 2006 ಬಗ್ಗೆ ಮಾತ್ರ ಹೇಳಿರುವುದನ್ನು ಬಿಟ್ಟರೆ ಈವರೆವಿಗೂ ಎಷ್ಟು ಉತ್ಪಾದನೆಯಾಗಿದೆ, ಅಡಿಷನ್ ಎಷ್ಟು ಆಗಿದೆ ಎಂಬ ಮಾಹಿತಿಯನ್ನು ಕೊಡುವುದಿಲ್ಲ, ಅದಕ್ಕೋಸ್ಕರ ದಯವಿಟ್ಟು ನನಗೆ ಸ್ವಲ್ಪ ಅವಕಾಶ ಕೊಡಿ, 10 ನಿಮಿಷವೂ ಆಗಿಲ್ಲ.

ಛೇರ್ಮನ್: 20 ನಿಮಿಷ ಆಯಿತು.

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ಇನ್ನು 5–6 ನಿಮಿಷದಲ್ಲಿ ನಾನು ನನ್ನ ಮಾತು ಮುಗಿಸುತ್ತೇನೆ, ಏಕೆಂದರೆ ಜಾಸ್ತಿ ನಾನು ಒತ್ತಡವನ್ನು ತರುವುದಿಲ್ಲ. ಈಗ ಮೀನುಗಾರಿಕೆ ಇಲಾಖೆಯಲ್ಲಿ ಮತ್ತೊಂದು ವಿಚಾರ ಹೇಳುವುದಾದರೆ, ಸಂಕಷ್ಟ ಪರಿಹಾರ ನಿಧಿ ಒಂದು ಇದೆ. ರಾಷ್ಟ್ರೀಯ ಮೀನುಗಾರಿಕೆ ಇಲಾಖೆಯಲ್ಲಿ ಹಣ ಬರುತ್ತಿದೆ, ಈ ಹೊಸ ಕಾರ್ಯಕ್ರಮ ರೈತ ಸಂಜೀವಿನಿಯಲ್ಲೂ ಹೇಳಿದ್ದಾರೆ. ಇನ್ ಅಡಿಷನ್ ಟು ಅದರ್, ಅಥವಾ ಅದರ ಬದಲಿಗೆ ಯಾವುದಾದರೂ ಅದರ ಬಗ್ಗೆ ಸ್ವಲ್ಪ ಗಮನವನ್ನು ಹರಿಸಬೇಕಾಗುತ್ತದೆ. ಹೊಸ ಕರ್ನಾಟಕ ಕೃಷಿ ಅಭಿವೃದ್ಧಿ ನಿಗಮ, ನೀರಾವರಿ ನಿಗಮದ ಬಗ್ಗೆ ಎಲ್ಲಾ ಹೇಳಿದ್ದಾರೆ, ಮೀನುಗಾರಿಕೆ ನಿಗಮ ಬಂದ್ ಆಗುತ್ತಿದೆ, ಕೆಲವು ನಿಗಮಗಳೇ ಬಂದ್ ಆಗುತ್ತಿವೆ. ಹೀಗಿರುವಾಗ ಹೊಸ ನಿಗಮಗಳನ್ನು ಪ್ರಾರಂಭ ಮಾಡುತ್ತಿದ್ದಾರೆ, ಹೊಸ ನಿಗಮಗಳ ಅಗತ್ಯ ಇದೆಯೇ ಇರುವಂಥ ನಿಗಮಗಳಿಗೆ ಇದನ್ನು ಸೇರಿಸಿದಾಗ ಕೆಲಸಗಳನು ಮಾಡಬಹುದು, ಏಕೆಂದರೆ, ಹೊಸ ನಿಗಮಗಳನ್ನು ಮಾಡುತ್ತಿರುವಾಗ ಖರ್ಚು ಜಾಸ್ತಿ ಆಗುತ್ತಾ ಹೋಗುತ್ತಿದೆ. ಅದಕ್ಕೋಸ್ಕರ ಕೆಲವು ನೀರಾವರಿ ನಿಗಮಗಳು ಇವೆ, ಅದರ ಮುಖೇನ ಹೊಸ ಹೊಸ ಕಾರ್ಯಕ್ರಮಗಳನ್ನು ಮಾಡಬೇಕೇ ಹೊರತು ಹೊಸ ನಿಗಮ ಮಾಡುವುದು ಸೂಕ್ತವಲ್ಲ ಎಕ್ಸ್‌ಟ್ರಾ ಎಕ್ಸ್‌ಪೆಂಡಿಚರ್ ಆಗುತ್ತದೆ ಎಂದು ನಾನು ತಮ್ಮ ಮುಖೇನ ಸರ್ಕಾರದ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಇನ್ನು ರೇಷನ್ ಕಾರ್ಡುಗಳ ಬಗ್ಗೆ ಹೇಳುವುದಾದರೆ, ಅದು ಬರೀ ಬಣ್ಣ ಬದಲಾಯಿಸುತ್ತಾ ಹೋಯಿತು, ರೇಷನ್ ಕಾರ್ಡುಗಳನ್ನು ಸರಿಯಾದ ವ್ಯವಸ್ಥೆ ಮಾಡಲಿಲ್ಲ. ನಾನು ಏನು ಹೇಳುತ್ತೇವೆ ಎಂದರೆ ಕಾರ್ಡುಗಳನ್ನು ವಿತ್‌ಡ್ರಾ ಮಾಡಿ ಹೊಸ ಕಾರ್ಡುಗಳನ್ನು ಕೊಡುವುದಕ್ಕಿಂತ ಇದ್ದ ಕಾರ್ಡುಗಳಲ್ಲಿ ರೇಷನ್ ಕೊಡುತ್ತಾ ಹೊಸ ಕಾರ್ಡುಗಳ ವ್ಯವಸ್ಥೆ ಸರಿಯಾದ ಮೇಲೆ ಇದನ್ನು ವಿತ್ ಡ್ರಾ ಮಾಡಬೇಕಾಗಿತ್ತು. ಇವತ್ತು ಏನಾಗಿದೆ ಎಂದರೆ, ನಮ್ಮ ಜನ ಎಲ್ಲಾ ತಾಲ್ಲೂಕು ಆಫೀಸ್ ಎದುರುಗಡೆ ಹೋಗಿ ಕ್ಯೂ ನಿಂತು ರೇಷನ್ ಕಾರ್ಡು ತೆಗೆದುಕೊಳ್ಳುವಂಥ ಪರಿಸ್ಥಿತಿ, ಅವರಿಗೆ ಅಲ್ಲಿ ಅಂಗಡಿಗೆ ಹೋದರೆ ರೇಷನ್ ಸಿಕ್ಕುತ್ತಿಲ್ಲ. ಇದನ್ನು ಸರಿಯಾದ ವ್ಯವಸ್ಥೆಯನ್ನು ನೀವು ಮಾಡಿಲ್ಲ. ಎಸ್‌ಸಿ:ಎಸ್‌ಟಿ ವರ್ಗದವರಿಗೆ ಕೊಟ್ಟಿರತಕ್ಕಂಥ ಮನೆಗಳಿಗೆ ರಿಜಿಸ್ಟ್ರೇಷನ್ ಮಾಡಿಕೊಡಬೇಕೆಂದು ಕಳೆದ ಸಭೆಯಲ್ಲಿ ಮಾನ್ಯ ಗೃಹ ಸಚಿವರು ಗಮನಕ್ಕೆ ತಂದಿದ್ದೆ. ಆದರೆ, ಇವತ್ತಿನ ದಿವಸ ಅವರಿಗೆ ಜಾಗವನ್ನು ಕೊಡದೆ ರಿಜಿಸ್ಟ್ರೇಷನ್ ಮಾಡುವುದಕ್ಕೆ ಆಗುವುದಿಲ್ಲ. ಮತ್ತೆ ರಿಜಿಸ್ಟ್ರೇಷನ್ ಆಗಿರುವವರಿಗೆ ಮನೆ ಕೊಡುವುದಕ್ಕೆ ಆಗುತ್ತಿಲ್ಲ. ಆದ್ದರಿಂದ ಅಂಬೇಡ್ಕರ್ ಮತ್ತು ಆಶ್ರಯ ಯೋಜನೆಯಲ್ಲಿರತಕ್ಕಂಥ ಈ ಒಂದು ವ್ಯವಸ್ಥೆಯನ್ನು ಬದಲಾವಣೆ ಮಾಡಬೇಕಾಗುತ್ತದೆ. ಇವರು ಇಲ್ಲಿ ಎಷ್ಟು ದಿವಸ ಇರುತ್ತಾರೆ ಎಂಬುದು ಗೊತ್ತಿಲ್ಲ. ಆದರೆ ಇರುವಷ್ಟು ದಿವಸದೊಳಗೆ ಬದಲಾವಣೆ ಮಾಡುವುದಕ್ಕೆ ಸಾಧ್ಯವಾದಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ, ಇವತ್ತಿನ ದಿವಸ ದೊಡ್ಡ ದೊಡ್ಡ ಉದ್ದಿಮೆದಾರರಿಗೆ ರಿಜಿಸ್ಟ್ರೇಷನ್ ಚಾರ್ಜ್ಸ್ ತೆಗೆದುಕೊಳ್ಳುತ್ತಿಲ್ಲ. ಆದರೆ, ಆಶ್ರಯ ಮನೆಗಳಿಗೆ ರಿಜಿಸ್ಟ್ರೇಷನ್ ಮಾಡುತ್ತಿದ್ದೀರಿ. ಮತ್ತೆ ರಾಜೀವ್‌ಗಾಂಧಿ ಹೌಸಿಂಗ್ ಕಾರ್ಪೊರೇಷನ್‌ರವರು ಒಂದು ಹೊಸ ಕಾರ್ಯಕ್ರಮವನ್ನು ಮಾಡಿದ್ದು, ಇದಕ್ಕೆ ಕಟ್ಟಬೇಕಾಗಿರತಕ್ಕಂಥ ಕಂತನ್ನು ಯಾರು ವಸೂಲ್ಮಾಡುವುದಕ್ಕೆ ಹೋಗುವಂಥವರಿಗೆ ಕಮಿಷನ್ ಕೊಡುತ್ತಿದ್ದಾರೆ. ಆದ್ದರಿಂದ ಇದನ್ನು ನಿಲ್ಲಿಸಿ ಅದೇ ಕನ್ಸೆಷನ್‌ನ್ನು ಜನರಿಗೆ ಕೊಟ್ಟರೆ ಅವರು ಕಂತನ್ನು ಖಂಡಿತ ಕಟ್ಟುತ್ತಾರೆ. ಇದನ್ನು ಮಾಡಬೇಕೆಂದು ತಮ್ಮ ಮುಖೇನ ಹೇಳುವುದಕ್ಕೆ ಇಷ್ಟಪಡುತ್ತೇನೆ. ಹೆಚ್ಚಾಗಿ ಹಳೇ ಕಾರ್ಯಕ್ರಮಗಳನ್ನೇ ಮತ್ತೆ ಈ ಆಯವ್ಯಯದಲ್ಲಿ ತಂದಿದ್ದಾರೆ. ಮತ್ತೆ ಇದರಲ್ಲಿ ಸ್ವಾತಂತ್ರ ಹೋರಾಟಗಾರರಿಗೆ [illegible]

ಒಂದು ಮಾತನ್ನು ಹೇಳಿದ್ದಾರೆ. ಆದರೆ, ಅವರಿಗೆ ಪಾಸ್ ಕೊಟ್ಟು ಅವರೊಬ್ಬರೇ ಹೋಗುವುದಕ್ಕೆ ಅವಕಾಶ ಮಾಡಿ ಕೊಟ್ಟಿದ್ದಾರೆ. ಸ್ವಾತಂತ್ರಕ್ಕೋಸ್ಕರ ಹೋರಾಟ ಮಾಡಿರತಕ್ಕಂಥ ಅನೇಕ ಜನರ ವಯಸ್ಸು ಸುಮಾರು 70 ರಿಂದ 80 ವರ್ಷಗಳಾಗಿರುತ್ತದೆ. ಆದ್ದರಿಂದ ಇವರ ಜೊತೆಗೆ ಒಬ್ಬ ಅಸಿಸ್ಟೆಂಟ್ ಹೋಗುವುದಕ್ಕೆ ಅವಕಾಶ ಮಾಡಿಕೊಟ್ಟರೆ ಅವರಿಗೆ ಸ್ವಲ್ಪ ಸಹಾಯವಾಗುತ್ತವೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ರಸ್ತೆಗಳ ಅಭಿವೃದ್ಧಿ ಬಗ್ಗೆ ಮುಖ್ಯಮಂತ್ರಿಗಳ ಸಡಕ್ ಯೋಜನೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ನಾವು ಈಗಾಗಲೇ 2.5 ಕೋಟಿ ರೂಪಾಯಿಗಳ ಒಂದು ಪ್ರಸ್ತಾವನೆಯನ್ನು ಕಳುಹಿಸಿದ್ದೇವೆ. ಈಗ ನಮ್ಮಲ್ಲಿ ಒಂದು ಸಮಸ್ಯೆ ಉದ್ಭವವಾಗಿದೆ. ಮಾನ್ಯ ಛೇರ್ಮನ್‌ರವರೂ ಕೂಡ ನಮ್ಮ ಜಿಲ್ಲೆಯವರೇ ಆಗಿದ್ದಾರೆ. ನಮ್ಮಲ್ಲಿ ಆಗಿರತಕ್ಕಂಥ ಸಮಸ್ಯೆ ಏನೆಂದರೆ, ನಮಗೆ ಶಾಸಕರ ನಿಧಿಯ ಹಣ ಕೂಡ ಕೊಟ್ಟಿಲ್ಲ. ಮತ್ತೆ ಬರಗಾಲ ಕಾಮಗಾರಿಗೆ ಕೊಡಬೇಕಾಗಿರತಕ್ಕಂಥ ಹಣವೂ ಕೂಡ ಬಂದಿಲ್ಲ. ಆದ್ದರಿಂದ ಕಳೆದ ಎರಡು ವರ್ಷಗಳಿಂದ ಶಾಸಕರು ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಮಾಡುವುದಕ್ಕೆ ಆಗಿಲ್ಲ. ಇದಕ್ಕೆ ಸಂಬಂಧಪಟ್ಟಂತೆ ನೇರವಾದ ಆಪಾದನೆಯನ್ನು ಇಬ್ಬರು ಉಸ್ತುವಾರಿ ಮಂತ್ರಿಗಳ ಮೇಲೆ ನಾನು ಮಾಡುತ್ತಿದ್ದೇನೆ. ಏಕೆಂದರೆ, ಅವರು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ಈ ಸಮಸ್ಯೆಯನ್ನು ನೇರವಾಗಿ ತಂದು ಹಣವನ್ನು ಕೊಡಿಸತಕ್ಕಂಥ ಕೆಲಸವನ್ನು ಮಾಡಿಸಬೇಕಾಗಿತ್ತು. ಒಂದು ಕ್ಷೇತ್ರಕ್ಕೆ 125 ಲಕ್ಷ ರೂಪಾಯಿ ಕೊಡಬೇಕಾಗಿರತಕ್ಕಂಥದ್ದರಲ್ಲಿ ಒಂದು ತಾಲ್ಲೂಕಿಗೆ ಕೇವಲ 20 ಲಕ್ಷ ರೂಪಾಯಿ ಕೊಡುತ್ತಿದ್ದಾರೆ. ಒಂದು ತಾಲ್ಲೂಕಿಗೆ ಕೊಟ್ಟಿರತಕ್ಕಂಥ 20 ಲಕ್ಷ ರೂಪಾಯಿಗಳನ್ನು ಮೂರು ವಿಧಾನಸಭಾ ಕ್ಷೇತ್ರಕ್ಕೆ ಹಂಚಿಕೆ ಮಾಡುವಾಗ ನಮಗೆ ಕೇವಲ 5 ರಿಂದ 6 ಲಕ್ಷ ರೂಪಾಯಿ ಬರುತ್ತದೆ. ಆದ್ದರಿಂದ ಒಂದೊಂದು ಕ್ಷೇತ್ರಕ್ಕೆ 20 ಲಕ್ಷ ರೂಪಾಯಿಗಳನಾದರೂ ಕೊಟ್ಟರೆ ನಮ್ಮ ಕ್ಷೇತ್ರಗಳಲ್ಲಿ ಈಗಾಗಲೇ ಮಾಡಿಸಿರತಕ್ಕಂಥ ಕೆಲಸಕ್ಕೆ ಹಣ ಪಾವತಿ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ಮಲೆನಾಡು ಅಭಿವೃದ್ಧಿ ಮಂಡಳಿಗೂ ಕೂಡ ಹಣ ಕೊಟ್ಟಿಲ್ಲ. ಆದ್ದರಿಂದ ಇದಕ್ಕೂ ಹಣ ಕೊಡಿಸತಕ್ಕಂಥ ಕೆಲಸ ಮಾಡಬೇಕು. ಗುತ್ತಿಗೆದಾರರಿಗೆ ಹಳೇ ಬಾಕಿಯನ್ನು ಕೊಟ್ಟರೆ ಮಾತ್ರ ಹೊಸ ಕಾಮಗಾರಿಗಳನ್ನು ಮಾಡಿಸುವುದಕ್ಕೆ ಸಾಧ್ಯವಾಗುತ್ತದೆ. ಕಳೆದ ಮೂರ್‍ನಾಲ್ಕು ವರ್ಷಗಳಿಂದ ಕೊಡಬೇಕಾಗಿರತಕ್ಕಂಥ ಬಾಕಿ ಹಣವನ್ನು ಗುತ್ತಿಗೆದಾರರಿಗೆ ಕೊಡದೇ ಇರುವುದರಿಂದ ಹೊಸ ಕೆಲಸವನ್ನು ಮಾಡಿಸುವುದಕ್ಕೆ ಆಗುತ್ತಿಲ್ಲ.

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್ (ಧಾರವಾಡ): ಮಾನ್ಯ ಛೇರ್ಮನ್‌ರವರೇ, ಮಲೆನಾಡು ಅಭಿವೃದ್ಧಿ ಮಂಡಳಿ ವತಿಯಿಂದ ಮಾಡುತ್ತಿರುವ ಕಾಮಗಾರಿಗಳು ಮತ್ತು ಕಟ್ಟಡದ ಕೆಲಸಗಳು ಅರ್ಧಕ್ಕೆ ನಿಂದಿವೆ. ಇವತ್ತಿನ ದಿವಸ ಗುತ್ತಿಗೆದಾರರಿಗೆ ಹಣ ಕೊಡದೇ ಇರುವುದರಿಂದ ಅವರೆಲ್ಲರೂ ಬಹಳ ದುಸ್ಥಿತಿಯಲ್ಲಿದ್ದಾರೆ. ಕಳೆದ ಮೂರು ವರ್ಷಗಳಿಂದ ಕಟ್ಟಡದ ಕಾಮಗಾರಿಗಳು ಪೂರ್ಣಗೊಳ್ಳದೆ ಅರ್ಧಕ್ಕೆ ನಿಂತಿದ್ದು, ಇವುಗಳು ಯಾವುದೇ ಉಪಯೋಗಕ್ಕೆ ಬರದೇ ಇರತಕ್ಕಂಥ ಪರಿಸ್ಥಿತಿಯಲ್ಲಿವೆ. ಆದ್ದರಿಂದ ಇವುಗಳಿಗಾದರೂ ಹಣ ಕೊಡಬೇಕಾಗುತ್ತದೆ. ಇಲ್ಲದಿದ್ದರೆ ಈ ಎಲ್ಲಾ ಕಾಮಗಾರಗಳು ಅರ್ಧಕ್ಕೆ ನಿಂತು ಹೋಗುತ್ತವೆ. ಇದಕ್ಕೆ ಹಣ ಕೊಡಿ ಎಂದು ನಾವು ಈಗಾಗಲೇ ಮೇಲಿಂದ ಮೇಲೆ ಒತ್ತಾಯ ಮಾಡುತ್ತಾ ಬರುತ್ತಿದ್ದೇವೆ. ಮಾನ್ಯ ಛೇರ್ಮನ್‌ರವರೂ ಕೂಡ

ಮಲೆನಾಡು ಪ್ರದೇಶದಿಂದ ಬಂದಿದ್ದೀರಿ. ಮಲೆನಾಡು ಅಭಿವೃದ್ಧಿ ಮಂಡಳಿಯು ಮಾಡುತ್ತಿರುವ ಕಾಮಗಾರಿಗಳನ್ನು ಪೂರ್ಣಗೊಳಿಸುವುದಕ್ಕೆ ಶೀಘ್ರಗತಿಯಲ್ಲಿ ಹಣ ಕೊಡಬೇಕೆಂದು ಸರ್ಕಾರವನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ಮಾನ್ಯ ಛೇರ್ಮನ್‌ರವರೆ, ಮಾನ್ಯ ಲಾಟರಿ ಮಂತ್ರಿಗಳು ಇಲ್ಲಿ ಇಲ್ಲ. ಈ ಸರ್ಕಾರದ ನೀತಿ ಏನು ಎನ್ನತಕ್ಕಂಥದ್ದು ನನಗೆ ಅರ್ಥವಾಗುತ್ತಿಲ್ಲ. ಇವತ್ತಿನ ದಿವಸ ಲಾಟರಿಯನ್ನು ಜನರು ಒಪ್ಪದೇ ಇರುವಾಗ ಅಥವಾ ತಿರಸ್ಕಾರ ಮಾಡುವಾಗ ಅದನ್ನು ಕ್ಯಾನ್ಸಲ್ ಮಾಡಬೇಕು. ಇದೊಂದು ಮನೋರಂಜನೆ ಎನ್ನತಕ್ಕಂಥ ಮಾತನ್ನು ನಾವು ಚರ್ಚೆ ಮಾಡತಕ್ಕಂಥ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು ಹೇಳಿದ್ದರು. ಇದು ಮನೋರಂಜನೆಯಾದರೆ ಇದಕ್ಕೆ ಜೂಜಿನ ತೆರಿಗೆಯನ್ನು ಏತಕ್ಕಾಗಿ ಹಾಕುತ್ತಾರೆ? ಇದಕ್ಕೆ ಸಂಬಂಧಪಟ್ಟಂತೆ ನಾವು ಚರ್ಚೆ ಮಾಡುವಾಗ ಇದೊಂದು ಜೂಜು ಎಂದು ಹೇಳಿದ್ದಕ್ಕೆ ಸರ್ಕಾರ ಇದನ್ನು ಒಪ್ಪದೆ ಇದೊಂದು ಮನೋರಂಜನೆ ಎಂದು ಹೇಳಿದರು. ಆದರೆ, ಇದಕ್ಕೆ ಇವತ್ತಿನ ದಿವಸ ಜೂಜಿನ ತೆರಿಗೆಯನ್ನು ಹಾಕುತ್ತಿದ್ದಾರೆ. ನಾವೇನು ಹಿಂದೆ ಇದೊಂದು ಜೂಜು ಎನ್ನತಕ್ಕಂಥದ್ದನ್ನು ಹೇಳಿದ್ದೆವೂ ಅದನ್ನು ಸರ್ಕಾರ ಒಪ್ಪಿಕೊಂಡಿದೆ ಎಂದು ನನಗನ್ನಿಸುತ್ತದೆ. ಮತ್ತೆ ಶಿಕ್ಷಣ ಕ್ಷೇತ್ರದ ಬಗ್ಗೆ ಹೇಳುವುದಾದರೆ, ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಇಲ್ಲದೇ ಇರುವ ಕಡೆ ಹೊಸದಾಗಿ ಶಾಲೆಗಳನ್ನು ಪ್ರಾರಂಭ ಮಾಡತಕ್ಕಂಥದ್ದು ತಪ್ಪಾಗುತ್ತದೆ. ಹಾಗೆಯೇ ಖಾಸಗಿ ಶಾಲೆಗಳಿಗೆ ಕೊಡತಕ್ಕಂಥ ಗ್ರಾಂಟ್‌ನ್ನು ಕಡಿಮೆ ಮಾಡಿ ಅಲ್ಲಿ ಅನಾರೋಗ್ಯಕರವಾದ ಸ್ಪರ್ಧೆಯನ್ನು ಸರ್ಕಾರ ಮಾಡುತ್ತಿರುವುದು ತಪ್ಪಾಗುತ್ತದೆ. ಇವತ್ತಿನ ದಿವಸ ಸರ್ಕಾರಿ ಶಾಲೆಗಳಿಗೆ ಯಾವ ರೀತಿಯಾಗಿ ಸೌಲಭ್ಯಗಳನ್ನು ಕೊಡಲಾಗುತ್ತಿದೆಯೋ ಮತ್ತು ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಶಿಕ್ಷಕರುಗಳನ್ನು ನೇಮಕ ಮಾಡುತ್ತಿದ್ದಾರೆಯೋ ಅದೇ ಮಾದರಿಯಲ್ಲಿ ಖಾಸಗಿ ಅನುದಾನಿತ ಶಾಲೆಗಳಿಗೆ ಕೊಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ನಮ್ಮಲ್ಲಿರತಕ್ಕಂಥ ಬ್ರಹ್ಮಾವರ ಸಕ್ಕರೆ ಕಾರ್ಖಾನೆ ಬಗ್ಗೆ ಹೇಳುವುದಾದರೆ, ಸಕ್ಕರೆ ಕಾರ್ಖಾನೆಗೆ ನನ್ನಿಂದ ರಾಜೀನಾಮೆ ಕೊಡಿಸಿದರು. ಮಾನ್ಯ ಛೇರ್ಮನ್‌ರವರೂ ಕೂಡ ಆ ಭಾಗದಿಂದ ಬಂದ್ದೀರಿ. ನಾನು ರಾಜೀನಾಮೆ ಕೊಟ್ಟ ಮೇಲೆ ಸಕ್ಕರೆ ಕಾರ್ಖಾನೆಗೆ ಸರ್ಕಾರದಿಂದ ದುಡ್ಡು ಬರುತ್ತದೆ ಎಂದು ಹೇಳಿದರು. ಆದರೆ, ಈ ಬಾರಿ ಸಕ್ಕರೆ ಕಾರ್ಖಾನೆಯನ್ನು ತೆರದೇ ಇಲ್ಲ. ಆದ್ದರಿಂದ ಈ ಒಂದು ಪರಿಸ್ಥಿತಿಗೆ ನೇರ ಹೊಣೆಗಾರರು ಯಾರು ಎಂಬುದು ತೀರ್ಮಾನವಾಗಬೇಕಾಗುತ್ತದೆ. 5 ಕೋಟಿ ರೂಪಾಯಿ ಮೃದು ಸಾಲವನ್ನು ಸರ್ಕಾರ ಕೊಡುತ್ತದೆ ಎನ್ನತಕ್ಕಂಥ ಸಂದರ್ಭದಲ್ಲಿ ನಾನು ಅಲ್ಲಿಯವರಿಗೆ ಕೊಡಬಾರದೆಂದು ತಡೆಹಿಡಿದರು. ಇವತ್ತಿನ ದಿವಸ ಇಡೀ ಸಕ್ಕರೆ ಕಾರ್ಖಾನೆ ಮುಚ್ಚತಕ್ಕಂಥ ಪರಿಸ್ಥಿತಿ ಬಂದಿದೆ. ಈ ಕಾರ್ಖಾನೆಯನ್ನು ಅಲ್ಲಿ ತೆಗೆದಿದ್ದೇ ತಪ್ಪೆಂದು ಹೇಳಿದರು. ಇದನ್ನು ನಾನು ಕೂಡ ಒಪ್ಪುತ್ತೇನೆ. ಬ್ರಹ್ಮಾವರ ಸಕ್ಕರೆ ಕಾರ್ಖಾನೆಗೆ ಅನುಮತಿ ಕೊಡುವಾಗಲೇ ಇದಕ್ಕೆ ಸಮಸ್ಯೆಯಾಗುತ್ತದೆ ಎಂಬುದನ್ನು ತಾವು ಆಗಲೇ ಹೇಳಿದ್ದೀರಿ. ತಾವು ಹೇಳಿರತಕ್ಕಂಥದ್ದು ನಿಜ. ಅಲ್ಲಿ ಬೆಳೆಯತಕ್ಕಂಥ ಕಬ್ಬು ಈ ಕಾರ್ಖಾನೆಗೆ ಸಾಕಾಗುವುದಿಲ್ಲ. ಆದರೆ, ಪ್ರಾರಂಭವಾಗಿರತಕ್ಕಂಥ ಸಕ್ಕರೆ ಕಾರ್ಖಾನೆಯನ್ನು ಉಳಿಸಿಕೊಳ್ಳುವುದಕ್ಕೆ ಆಗಲಿಲ್ಲ. ಆದ್ದರಿಂದ ಇದಕ್ಕಾಗಿ ನೋವನ್ನು ಅನುಭವಿಸಿದ್ದೇನೆ ಎಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಬ್ರಹ್ಮಾವರ ಸಕ್ಕರೆ ಕಾರ್ಖಾನೆಗೆ ಸಂಬಂಧಪಟ್ಟಂತೆ ನಾವು ಮತ್ತು ನೀವು ಸಾಕಷ್ಟು ಪ್ರಯತ್ನ ಮಾಡಿದ್ದೇವೆ. ಮತ್ತೆ ಈ ಸಂದರ್ಭದಲ್ಲಿ

ಮಾನ್ಯ ಕಾಗೋಡು ತಿಮ್ಮಪ್ಪನವರಿಗೂ ಕೂಡ ಈ ವಿಷಯಕ್ಕೆ ಸಂಬಂಧಪಟ್ಟಂತೆ ಅಭಿನಂದನೆ ಸಲ್ಲಿಸುತ್ತೇನೆ. ನಾವೆಲ್ಲರೂ ಕೂಡ ಏನು ಪ್ರಯತ್ನ ಮಾಡಿದರೂ ಕೂಡ ಬಹಳ ಕಷ್ಟವಿತ್ತು. ಆದರೆ, ಸರ್ಕಾರಿ ಅಧಿಕಾರಿಗಳ ಸಹಕಾರದಿಂದ ಅದಕ್ಕೆ ಚಾರ್ಜ್ ಮಾಡತಕ್ಕಂಥ ಹಣವನ್ನು ಕಡಿಮೆ ಮಾಡಿರುವುದರಿಂದ ನಾನು ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ಏಕೆಂದರೆ, ಅದನ್ನು ಪ್ರಾರಂಭ ಮಾಡಿದ್ದು ನಾನು. ಇದನ್ನು ಅಂತ್ಯಗೊಳಿಸುವುದಕ್ಕೆ ತಮ್ಮೆಲ್ಲರ ಸಹಕಾರ ಸಿಕ್ಕಿದ್ದಕ್ಕೆ ತಮಗೂ ಮತ್ತು ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ಹಾಗು ಎಲ್ಲರಿಗೂ ಕೂಡ ಜನರ ಪರವಾಗಿ ಕೃತಜ್ಞತೆ ಮತ್ತು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಮಾನ್ಯ ಛೇರ್ಮನ್‌ರವರು ಕೂಡ ಅದೇ ಭಾಗದವರಿಂದ ಬಂದವರು. ಆದ್ದರಿಂದ ನಾನು ಮತ್ತೊಮ್ಮೆ ಪ್ರಸ್ತಾಪ ಮಾಡುವುದೇನೆಂದರೆ, ಮೀನುಗಾರರಿಗೆ ಕೊಡತಕ್ಕಂಥ ಡೀಸಲ್ ಮೇಲಿನ ಮಾರಾಟ ತೆರಿಗೆಯನ್ನು ರದ್ದು ಮಾಡತಕ್ಕಂಥದ್ದು ಮತ್ತು ಮಂಜುಗಡ್ಡೆ ಘಟಕದ ಮೇಲೆ ಇರತಕ್ಕಂಥ ವಿದ್ಯುತ್ ಶುಲ್ಕದ ಬಡ್ಡಿಯನ್ನು ಮನ್ನಾ ಮಾಡುವಂಥ ಕೆಲಸ ಆಗಬೇಕು. ಇಲ್ಲದಿದ್ದರೆ, ಮೀನುಗಾರರು ಉಳಿಯುವುದಿಲ್ಲ ಮತ್ತು ಮೀನುಗಾರರಿಗೆ ಪೂರಕವಾಗಿ ಬೇಕಾಗಿರತಕ್ಕಂಥ ಸಂಸ್ಥೆಗಳೂ ಕೂಡ ಉಳಿಯುವುದಿಲ್ಲ. ಆದ್ದರಿಂದ ಈ ಎರಡು ವಿಷಯಗಳಿಗೆ ಸಂಬಂಧಪಟ್ಟಂತೆ ಸರ್ಕಾರ ಗಮನಹರಿಸಬೇಕೆಂದು ಹೇಳುತ್ತಾ ಈ ಒಂದು ಆಯವ್ಯಯದ ಬಗ್ಗೆ ಬಹಳಷ್ಟು ಮಾತನಾಡಬೇಕಾಗಿದ್ದು, ಆದರೆ ಯಾವುದನ್ನು ಸರಿಯಾಗಿ ಮಾತನಾಡುವುದಕ್ಕೆ ಆಗಲಿಲ್ಲ. ಆದರೆ, ಜನ ಪುನಃ ಆಶೀರ್ವಾದ ಮಾಡಿದರೆ ಮತ್ತೆ ಬಂದು ಇದರ ಬಗ್ಗೆ ಮಾತನಾಡುತ್ತೇನೆ. ಅಂದರೆ ಈಗ ಕೇವಲ ನಾಲ್ಕು ತಿಂಗಳ ಮಟ್ಟಿಗೆ ಲೇಖಾನುದಾನ ತೆಗೆದುಕೊಳ್ಳುತ್ತಿರುವುದರಿಂದ ಮತ್ತೆ ಇದರ ಬಗ್ಗೆ ನಾವು ಮಾತನಾಡಬೇಕಾದರೆ ಪುನಃ ಜನ ಆಶೀರ್ವಾದ ಮಾಡಿ ಕಳುಹಿಸಿದರೆ ಇದರ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೋರುತ್ತೇನೆ ಎಂದು ಹೇಳುತ್ತಾ, ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ):** ಮಾನ್ಯ ಛೇರ್ಮನ್‌ರವರೆ, 2004–2005ನೇ ಸಾಲಿನ ಬಜೆಟ್ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. ಈ ಬಜೆಟ್ ವಿಷಯಕ್ಕೆ ಕುರಿತಂತೆ ಈಗಾಗಲೇ ನಮ್ಮ ಹಿರಿಯ ನಾಯಕರು ಮತ್ತು ಅನೇಕ ಮಾನ್ಯ ಸದಸ್ಯರುಗಳು ಸಾಕಷ್ಟು ಮಾತನಾಡಿದ್ದಾರೆ. ಈ ಸದನದ ಒಳಗೆ ಬಜೆಟ್ ಬಗ್ಗೆ ಹಿರಿಯ ಸದಸ್ಯರೆಲ್ಲರೂ ಮಾತನಾಡಿದ ನಂತರವೂ ಕೂಡ ಸದನದ ಹೊರಗಡೆ ಇದರ ಬಗ್ಗೆ ಟೀಕೆ ಮಾಡಿರತಕ್ಕಂಥದ್ದನ್ನು ವಿವಿಧ ಮಾಧ್ಯಮಗಳ ಮೂಲಕ ಬಂದಿದೆ. ಇದೊಂದು ಜನ ವಿರೋಧಿ ಬಜೆಟ್ ಎನ್ನತಕ್ಕಂಥದ್ದನ್ನು ಬಹಳ ಸ್ಪಷ್ಟವಾಗಿ ಇವತ್ತಿನ ದಿವಸ ಜನತೆಗೆ ತಿಳುವಳಿಕೆ ಬಂದಿರತಕ್ಕಂಥದ್ದನ್ನು ನಾವು ಕಾಣುತ್ತಿದ್ದೇವೆ. ಈ ಬಜೆಟ್‌ನನು ಕೇವಲ ಚುನಾವಣಾ ಪ್ರಚಾರಕ್ಕೋಸ್ಕರ ಬಳಸಿಕೊಂಡಿರತಕ್ಕಂಥ ಬಜೆಟ್ ಎಂದು ಹೇಳಿದರೆ ಯಾವುದೇ ಕಾರಣಕ್ಕೂ ಕೂಡ ತಪ್ಪಾಗುವುದಿಲ್ಲ ಎಂಬುದನ್ನು ನಾನು ಭಾವಿಸಿಕೊಂಡಿದ್ದೇನೆ. ಮಾನ್ಯ ವೀರಪ್ಪಮೊಯಿಲಿಯವರು ನೀಡಿರತಕ್ಕಂಥ ತೆರಿಗೆ ಸುಧಾರಣೆ ವರದಿಯನ್ನು ನಾನು ವೀಕ್ಷಣೆ ಮಾಡಿದ್ದೇನೆ. ಇದರಲ್ಲಿ ಏನೇನು ಅಂಶಗಳು ಅಡಕವಾಗಿವೆ ಎಂಬುದನ್ನು ನೋಡಿದ್ದೇನೆ. ಆಡಳಿತ ಸುಧಾರಣೆ ಬಗ್ಗೆ ಮತ್ತು ತೆರಿಗೆ ಸುಧಾರಣೆ ಬಗ್ಗೆ ಮತ್ತು ಇನ್ನು ಉಳಿದ ಸುಧಾರಣೆ ಬಗ್ಗೆ ಟಾಸ್ಕ್‌ಫೋರ್ಸ್ ಮಾಡಿ ಅದಕ್ಕೆ ಹಿರಿಯರನ್ನು ಅಧ್ಯಕ್ಷರನ್ನಾಗಿ ಮಾಡತಕ್ಕಂಥ ಕೆಲಸವನ್ನು ಮಾನ್ಯ ಮುಖ್ಯ ಮಂತ್ರಿಯವರು ಮಾಡಿದ್ದಾರೆ. ಆದರೆ, ಅವರು ನೀಡಿರತಕ್ಕಂಥ ವರದಿಯಲ್ಲಿರುವ ಒಳ್ಳೆಯ

(†ಈ ಚಿಹ್ನೆ ಮಾನ್ಯ ಸದಸ್ಯ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ)

ಅಂಶಗಳು ನಮ್ಮ ರಾಜ್ಯದ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಿ ಆ ಮೂಲಕ ಜನತೆಗೆ ಹಿತವನ್ನು ಬಯಸತಕ್ಕಂಥ ಅಂಶಗಳು ಯಾವುದೂ ಕೂಡ ಈ ಬಜೆಟ್‌ನಲ್ಲಿ ಇದೇ ಎನ್ನತಕ್ಕಂಥದ್ದು ನನಗನ್ನಿಸುತ್ತಿಲ್ಲ. ಏಕೆಂದರೆ ಅವರೆಲ್ಲರೂ ಅಧ್ಯಯನ ಮಾಡಿ ಕೊಟ್ಟಿರತಕ್ಕಂಥ ವರದಿಯ ಲಾಭ ಕೇವಲ ಪತ್ರಿಕಾ ಹೇಳಿಕೆಗೆ ಮಾತ್ರ ಸೀಮಿತವಾಗಬಾರದು. ಅದು ಈ ರೀತಿಯಾದ ಬಜೆಟ್ ಮುಲಕ ನಮ್ಮ ರಾಜ್ಯದ ಜನತೆಯ ಹಿತವನ್ನು ಕಾಪಾಡುವುದಕ್ಕೆ ಮುಂದಾಗಬೇಕು. ಆದರೆ, ಈ ರೀತಿಯಾಗಿಲ್ಲ ಎನ್ನತಕ್ಕಂಥದ್ದು ನಮ್ಮ ದುರ್ದೈವದ ಸಂಗತಿಯಾಗಿದೆ. ಸಹಜತೆಯಿಂದ ಇರತಕ್ಕಂಥ ಬಜೆಟ್ ಇದಲ್ಲ. ಚುನಾವಣೆ ಸಿದ್ಧತೆಗಾಗಿ ಮಾಡಿರತಕ್ಕಂಥ ಬಜೆಟ್ ಎನ್ನುವುದಲ್ಲದೆ, ಇದು ಸಹಜತೆಯಿಂದ ಕೂಡ ಮಾಡಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಇದು ಸೇರಿ ಒಟ್ಟು 5 ಬಜೆಟ್‌ಗಳನ್ನು ಇಲ್ಲಿ ಮಂಡಿಸಿದ್ದಾರೆ. ಅವರು ಈಗಾಗಲೇ ಮಂಡಿಸಿರುವ ನಾಲ್ಕು ಬಜೆಟ್‌ಗಳಲ್ಲಿ ಕವಿಗಳ ಒಂದು ವಾಕ್ಯ ಕೂಡ ಇರಲಿಲ್ಲ. ಆದರೆ ಈ ಬಜೆಟ್‌ನಲ್ಲಿ ಇದ್ದಕಿದ್ದ ಹಾಗೆ ಸರ್ವಜ್ಞನ ವಚನ ಮತ್ತು ಎಲ್ಲರ ನೆನಪುಗಳು ಇದರಲ್ಲಿ ಅವರಿಗೆ ಆಗಿದೆ. ಅಂದರೆ ಈ ಬಜೆಟ್ ಸಹಜತೆಯಿಂದ ಕೂಡಿಲ್ಲ ಎಂದು ಹೇಳುವುದಕ್ಕೆ ಎಷ್ಟು ಬೇಕಾದರೂ ಉದಾಹರಣೆ ಹೇಳಬಹುದು. ಹಿಂದಿನ ಬಜೆಟ್ ಪುಸ್ತಕಗಳು ಎಷ್ಟೆಷ್ಟು ಪೇಜ್ ಇತ್ತು ಎಂಬುದನ್ನು ನಾನು ನೋಡಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳು ಎಷ್ಟು ಹೊತ್ತಿಗೆ ಬಜೆಟ್ ಪುಸ್ತಕವನ್ನು ಓದಿ ಮುಗಿಸುತ್ತಾರೆಂದು ಉಳಿದವರೆಲ್ಲರೂ ಎದುರು ನೋಡುತ್ತಿದ್ದರು. ಆದರೆ, ಈ ಸಾರಿ ಹಾಗೆ ಆಗಿಲ್ಲ. ಏಕೆಂದರೆ ಕೇವಲ 36 ರಿಂದ 37 ಪೇಜ್‌ನಲ್ಲಿ ಪೂರ್ಣ ಬಜೆಟ್ ಮುಗಿದು ಹೋಗಿದೆ. ಆದರೆ, ಉಳಿದವೆಲ್ಲವನ್ನೂ ಓದುವುದಕ್ಕೆ ಮಾನ್ಯ ರಾಜ್ಯಪಾಲರಿಗೆ ಇವರು ಕೊಟ್ಟರು.

5.10 ಪಿಎಂ

ಆದರೆ ಈ ಬಜೆಟ್ ಜನಪರವಾಗಿಲ್ಲವೆಂದು ನಾನು ಯಾವ ಯಾವ ರೀತಿಯಲ್ಲಿ ಹೇಳಿದರೂ ಕೂಡ ಬಹುಶಃ ತಪ್ಪಿಲ್ಲ ಅಂದುಕೊಂಡಿದ್ದೇನೆ. ಬಹಳ ಮುಖ್ಯವಾಗಿ ಹೇಳುವುದಾದರೆ ನಾನು ಈ ಸಂದರ್ಭದಲ್ಲಿ ಒಂದೆರಡು ವಿಶೇಷವಾದಂತಹ ಸಂಗತಿಗಳನ್ನು ಪ್ರಸ್ತಾಪಕ್ಕೆ ತರುವುದೆಂದರೆ, ಇಡೀ ದೇಶದಲ್ಲಿ ತೆರಿಗೆಯು ಹೆಚ್ಚಿರುವಂತಹ ರಾಜ್ಯ ಎಂದರೆ ಕರ್ನಾಟಕ. ಮಾನ್ಯ ವೀರಪ್ಪಮೊಯಿಲಿಯವರ ವರದಿ ಹೇಳುವುದು ಸ್ಪಷ್ಟ ಇದೆ, ದಕ್ಷಿಣ ರಾಜ್ಯಗಳದು ಮತ್ತು ಉಲ್ಲೇಖ ಮಾಡಿ ಹೇಳಿದ್ದಾರೆ. ಇಡೀ ದೇಶದಲ್ಲಿ ಕರ್ನಾಟಕ ತೆರಿಗೆಯನ್ನು ಅಂದರೆ ತೆರಿಗೆಯ ದರ ಹೆಚ್ಚಿರುವಂತಹ ರಾಜ್ಯ ಎಂದರೆ ಕರ್ನಾಟಕ. ಮಾನ್ಯ ಮುಖ್ಯಮಂತ್ರಿಗಳು ನಾನು ಯಾವುದೇ ಹೊಸ ತೆರಿಗೆಯನ್ನು ಹಾಕಿಲ್ಲವೆಂದು ಈ ಬಜೆಟ್‌ನಲ್ಲಿ ಹೇಳಿದರು. ನಾನು ಏತಕ್ಕೆ ಹಾಕಬೇಕೆಂದು ಕೇಳಿದೆ. ಏಕೆಂದರೆ ಕಳೆದ ವರ್ಷ ಬಜೆಟ್ ಆದ ನಂತರದಲ್ಲಿ ಜೂನ್ ತಿಂಗಳಲ್ಲಿ ಮೂಲ ತೆರಿಗೆ ಸಂಗ್ರಹಿಸಲು ಒಂದು ಪರ್ಸೆಂಟ್ ಹೆಚ್ಚಿಗೆ ಮಾಡಿದ್ದಾರೆ. ಜನವರಿಯಲ್ಲಿ ಶೇಕಡ 15 ರಷ್ಟು ಸೆಸ್ ಎಪಿಎಂಸಿ ಸೆಸ್ ಪಾಯಿಂಟ್ 50 ಪರ್ಸೆಂಟ್ ಹೆಚ್ಚಳವಾಗಿದೆ. ಅದಾದನಂತರ ಕ್ಯಾಪ್‌ಟಿವ್ ಜನರೇಷನ್ 25 ಪೈಸೆ ಹೇರಿಕೆಯಾಗಿದೆ. ಹೀಗೆ ಕಳೆದ ಬಜೆಟ್ ನಂತರದಿಂದ ಜೂನ್‌ನಿಂದ ಜನವರಿಯತನಕ ಟ್ಯಾಕ್ಸ್‌ನ್ನು ಹೆಚ್ಚು ಮಾಡುತ್ತಲೇ ಇದ್ದಾರೆ. ಈ ಬಜೆಟ್‌ನಲ್ಲಿ ನಾನು ಟ್ಯಾಕ್ಸ್‌ನ್ನು ಹೆಚ್ಚು ಮಾಡಿಲ್ಲ, ಅಂತ ಹೇಳುತ್ತಾರೆ. ಅಂದರೆ ಇದು ಹೇಗೆ? ರಾಜ್ಯದ ಜನತೆಯ ಈ ಸದನವನ್ನು ತಪ್ಪುದಾರಿಗೆ ಎಳೆಯುವುದಕ್ಕೆ ಒಂದು ಅವಕಾಶವನ್ನು ಮಾನ್ಯ ಮುಖ್ಯಮಂತ್ರಿಗಳು ಬಳಸಿಕೊಂಡಿದ್ದಾರೆ ಎನ್ನುವುದಕ್ಕೆ ಇದೊಂದು ಉದಾಹರಣೆಯಾಗಿದೆ.

ಜನವರಿಯೊಳಗಡೆ ಟ್ಯಾಕ್ಸ್‌ನ್ನು ಹೆಚ್ಚು ಮಾಡಿ, ಮತ್ತು ಫೆಬ್ರವರಿಯೊಳಗೆ ಟ್ಯಾಕಸ್ಸ ಹೆಚ್ಚು ಮಾಡುವುದಕ್ಕೆ ಬಂದರೆ ಜನ ಏನು ಹೇಳುತ್ತಾರೆಂಬುದು ಗೊತ್ತು? ಹಾಗಾಗಿ ಈಗ ಟ್ಯಾಕ್ಸ್ ಹೆಚ್ಚು ಮಾಡುವುದಿಲ್ಲ, ಎಂದು ಜನತೆಗೆ ಭರವಸೆಯನ್ನು ಕೊಡುತ್ತಾರೆ. ಜನವರಿಯಲ್ಲಿ ಹೆಚ್ಚು ಮಾಡಿರುವುದು ಯಾವುದು, ಹಾಗಾಗಿ ಟ್ಯಾಕ್ಸ್ ಹೆಚ್ಚು ಮಾಡಿಲಿಲ್ಲವೆಂದು ಹೇಳಿ ಅದು ಜನವರಿಯೊಳಗಡೆ ಮತ್ತು ಬೇರೆ ಬೇರೆ ತಿಂಗಳಲ್ಲಿ ಟ್ಯಾಕ್ಸ್‌ನ್ನು ಹೆಚ್ಚು ಮಾಡಿ ರಾಜ್ಯಕ್ಕೆ ಕಳೆದ ವರ್ಷವೇ ಸುಮಾರು 3 ಸಾವಿರ ಕೋಟಿ ರೂಪಾಯಿಗಳಷ್ಟು ಜನಕ್ಕೆ ತೆರಿಗೆ ಬಿದ್ದಿರುವುದನ್ನು ಇದೆ ಆದಾಯದಲ್ಲಿ ಹೇಳಿದ್ದಾರೆ. 3 ಸಾವಿರ ಕೋಟಿ ರೂಪಾಯಿಯಷ್ಟು ಹಚ್ಚು ತೆರಿಗೆ ಸಂಗ್ರಹವಾಗಿದೆ ಎಂದು ಹೇಳಿದ್ದಾರೆ. ನಿರೀಕ್ಷೆಗಿಂತ ತೆರೆಗೆಯಿಂದ ಆದಾಯ ಹೆಚ್ಚಾಗಿದೆ ಎಂದರೆ ಇವರು ಮಧ್ಯಮಧ್ಯದಲ್ಲಿ ಆ ರೀತಿಯಾಗಿ ಟ್ಯಾಕ್ಸ್ ಹೆಚ್ಚಿಸಿರುವುದರಿಂದಲೇ ಆ ರೀತಿಯಾಗಿ ಆದಾಯ ಹೆಚ್ಚಿಗೆ ಬಂದಿರುವುದು. ಅದನ್ನೂ ಕೂಡ ಕೇವಲ ಪ್ಲಾನ್‌ಗೆ 340 ಕೋಟಿ ರೂಪಾಯಿಗಳನ್ನು ಬಳಸಿಕೊಂಡು, ನಾನ್‌ಪ್ಲಾನ್‌ಗೆ ಉಳಿದ ಎಲ್ಲಾ ಅಮೌಂಟ್‌ಗಳನ್ನು ಖರ್ಚು ಮಾಡಿ ಖರ್ಚುಗಳನ್ನು ಹೇಗೆ ಹೇಗೆ ಮಾಡಿದ್ದಾರೋ ಆ ಹೆಚ್ಚಾಗಿ ಬಂದಿರುವಂತಹ ಹಣದ ಬಗ್ಗೆ ನಮಗೆ ಇನ್ನು ಸ್ಪಷ್ಟತೆ ಬರಬೇಕು. ಅಂದರೆ ಪ್ಲಾನ್‌ಗೆ ಕೇವಲ 340 ಕೋಟಿ ರೂಪಾಯಿಗಳು ಆ 3 ಸಾವಿರ ಕೋಟಿ ರೂಪಾಯಿಗಳಲ್ಲಿ ಖರ್ಚು ಮಾಡಿರುವುದು ಮಿಕ್ಕ ಎಲ್ಲವೂ ನಾನ್‌ಪ್ಲಾನ್‌ಗೆ ಖರ್ಚಾಗಿರುವುದು, ನಾನ್ ಪ್ಲಾನ್‌ಗೆ ಖರ್ಚಾಗಿರುವುದು ಎಂದರೆ ಯಾವುದಕ್ಕೆ ಖರ್ಚಾಗಿರುವುದು? ಸರ್ಕಾರಕ್ಕೆ ಮನಸ್ಸಿಗೆ ಬಂದಂತೆ ಖರ್ಚು ಮಾಡಿದೆ ಹಾಗಾಗಿ ಈ ರೀತಿ ಸಾಕಷ್ಟು ತೆರಿಗೆಯ ಭಾರ ರಾಜ್ಯದ ಜನತೆಯ ಮೇಲಿದೆ ಇಲ್ಲಿ ಬರಗಾಲದ ಛಾಯೇ ಇದೆ, ಕಳೆದ 3 ವರ್ಷದಿಂದ ರಾಜ್ಯದಲ್ಲಿ ಬರಗಾಲವಿದೆ. ಈ ಬಜೆಟ್ ಪುಸ್ತಕದ ತುಂಬಾ ಬರಗಾಲ, ಬರಗಾಲ ಎಂದು ಬರೆದಿದ್ದಾರೆ. ಬರಗಾಲದ ಒಂದು ಶೆಲ್ಟರ್‌ನನು ತೆಗೆದುಕೊಂಡು ರಾಜ್ಯದ ಜನತೆಗೆ ಹೇರುವಂತಹ ಎಲ್ಲಾ ತೆರಿಗೆಯನ್ನು ಹೇರಿ, ಈಗ ತಮಗೆ ಒಳ್ಳೆಯ ಕೆಲಸವನ್ನು ಮಾಡುವುದಕ್ಕೆ ಇನ್ನು ಮುಂದೆಯೂ ಅವಕಾಶವನ್ನು ಕೊಡಿ ಎಂದು ಮೊಸಳೆ ಕಣ್ಣೀರು ಹಾಕುವಂತಹ ಅಂಶಗಳು ಇಲ್ಲಿ ಇದೆ, ಹಾಗಾಗಿ ರಾಜ್ಯದ ಜನತೆಗೂ ಸ್ಪಷ್ಟ ಇದೆ, ನಮ್ಮೆಲ್ಲರಿಗೂ ಸ್ಪಷ್ಟ ಇದೆ, ಈ ಬಜೆಟ್ ಇಡೀ ರಾಜ್ಯದ ಅಭಿವೃದ್ಧಿಗೆ ಆರ್ಥಿಕ ಅಭಿವೃದ್ಧಿಗೆ ಮತ್ತು ಜನತೆಯ ಸಮಸ್ಯೆಯನ್ನು ಬಗೆಹರಿಸುವಂತಹ ಕೆಲಸಕ್ಕೆ ಪೂರಕ ಇಲ್ಲವೆನ್ನುವಂತಹದ್ದು ಇಲ್ಲಿ ಸ್ಪಷ್ಟ ಇದೆ. ಇಡೀ ದೇಶದಲ್ಲಿಯೇ ಕರ್ನಾಟಕ ತೆರಿಗೆಯ ದರ ಹೆಚ್ಚಿದೆ ಎಂದು ನಾನು ಆಗಲೇ ಹೇಳಿದ್ದೆ. ಈ ಮಲ್ಟಿಪಲ್ ಟ್ಯಾಕ್ಸ್ ವ್ಯವಸ್ಥೆ ಇದೆ, ಇದರೊಳಗೂ ಕೂಡ ಟ್ಯಾಕ್ಸ್ ಹೆಚ್ಚಿರುವಂತಹದ್ದು ಆಗಿದೆ. ಸೆಸ್, ಟಿಓಟಿ, ಸರ್‌ಚಾರ್ಜ್, ಎಂಟ್ರಿಟ್ಯಾಕ್ಸ್ ಇತ್ಯಾದಿಗಳೆಲ್ಲವೂ ಇದೆಯಲ್ಲಾ ಅದು ಡೈರೆಕ್ಟ್ ಟ್ಯಾಕ್ಸ್ ದರವು ಹೆಚ್ಚು ಈ ಮಲ್ಟಿಪಲ್ ಟ್ಯಾಕ್ಸ್‌ನ ದರವೂ ಕೂಡ ಕರ್ನಾಟಕದಲ್ಲಿ ಹೆಚ್ಚು, ಹಾಗಾಗಿ ನಾವು ಯಾವುದೇ ರೀತಿಯಲ್ಲೂ ಕೂಡ ಕರ್ನಾಟಕ ಇನ್ನು ಹೆಚ್ಚಿನ ತೆರಿಗೆಯನ್ನು ಹೊರೆಯನ್ನು ಸಹಿಸಿಕೊಳ್ಳುವುದಕ್ಕೆ ಆಗದಿರುವಂತಹ ಸ್ಥಿತಿಯಲ್ಲಿದ್ದೇವೆ. 1999ರಲ್ಲಿ ಈ ಸರ್ಕಾರ ಅಧಿಕಾರಕ್ಕೆ ಬರುವಾಗ 15,106 ಕೋಟಿ ರೂಪಾಯಿಗಳು ನಮಗೆ ಸಾಲದ ಹೊರೆ ಇತ್ತು, ಆದರೆ ಇದರ ಬಗ್ಗೆ ನಾವು ಯೋಚನೆಯನ್ನು ಮಾಡಿದರೆ ಈಗ ನಮ್ಮ ಮೇಲೆ 31 ಸಾವಿರ ಕೋಟಿ ರೂಪಾಯಿಗಳ ಸಾಲದ ಹೊರೆ ಇದೆ. ಆದರೆ ಸಾಲವನ್ನಾದರೂ ಮಾಡಿ ಅಭಿವೃದ್ಧಿಯ ಕೆಲಸವನ್ನು ಮಾಡಿದ್ದರೆ ನಾವು ಮೆಚ್ಚಬಹುದಾಗಿತ್ತು. ಇವರು ಸಾಲವನ್ನು ಮಾಡಿ ಇವರು ಮೋಜು ಮಾಡಿದ್ದಾರೆ ಏನೋ ಎಂಬ ಅಭಿಪ್ರಾಯ ರಾಜ್ಯದ ಜನತೆಗೆ ಬಂದಿದೆ. ಇವರು ಹೇಳಿದ್ದು ಜಿಡಿಪಿ 18 ಪರ್ಸೆಂಟ್ ಇತ್ತು, ಅಂದರೆ

87 ಸಾವಿರ ಕೋಟಿ ರೂಪಾಯಿಗಳು ಆರಕೆ ಇವತ್ತು ಜಿಡಿಪಿ 27 ಪರ್ಸೆಂಟ್ ಆಗಿದೆ. ಒಂದು 87 ಸಾವಿರ ಕೋಟಿ ರೂಪಾಯಿಗಳಷ್ಟು. ಈ ಸರ್ಕಾರ ಹೇಗೆ ಹೇಗೆ ಅಂಕಿಸಂಖ್ಯೆಗಳ ಮೂಲಕ ದಾರಿ ತಪ್ಪಿಸುತ್ತದೆ ಅದನ್ನು ದೊಂಬರಾಟವನ್ನು ಮಾಡುತ್ತದೆ ಎನ್ನುವ ಬಗ್ಗೆ ಹೇಳಬೇಕಾಗುತ್ತದೆ. ಫಿಸಿಕಲ್ ಡೆಪಿಸಿಟ್ 2000–01ರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ಅದನ್ನು ತಾವು 3 ಪರ್ಸೆಂಟ್ ಇಳಿಸುತ್ತೇನೆ, ಮತ್ತು ರೆವಿನ್ಯೂ ಡೆಫಿಸಿಟ್‌ನ್ನು 0 ಪರ್ಸೆಂಟ್‌ಗೆ ತರುತ್ತೇವೆಂದು ಹೇಳಿದರು. ಇಲ್ಲಿ ಹಿರಿಯ ಸಚಿವರು ಇದ್ದಾರೆ, ಮಾನ್ಯ ಮುಖ್ಯ ಮಂತ್ರಿಗಳು ಈ ಫಿಸಿಕಲ್ ಡೆಪಿಸಿಟ್ 3 ಪರ್ಸೆಂಟ್‌ಗೆ, ರೆವಿನ್ಯೂ ಡೆಫಿಸಿಟ್‌ನ್ನು 0 ಪರ್ಸೆಂಟ್‌ಗೆ ಹೇಳಿರುವುದನ್ನು ಈಗ ಬಜೆಟ್‌ನಲ್ಲಿ ಹೇಳಿದ್ದಾರೆ. ನಾವು ಫಿಸಿಕಲ್ ಡಿಪಿಸಿಟ್‌ನ್ನು 4 ಪರ್ಸೆಂಟ್‌ಗೆ ತರುವುದಕ್ಕೆ ಸಾಧ್ಯವಾಗಿದೆ, ಮತ್ತು ರೆವಿನ್ಯೂ ಡೆಪಿಸಿಟ್‌ನ್ನು ನಾವು 1.1 ಗೆ ತಂದಿದ್ದೇವೆ. ಏತಕ್ಕಾಗಿ 0 ಗೆ ತರುವುದಕ್ಕೆ ಆಗಲಿಲ್ಲ. ಈ ಸ್ಟ್ಯಾಟಿಸ್ಟಿಕ್ಸ್‌ನ್ನು ಹೀಗೆ ಮಾಡುವುದಕ್ಕೆ ನನ್ನ ಹತ್ತಿರ ಇದರ ಬಗ್ಗೆ ಮಾಹಿತಿಗಳು ಇವೆ. ಇಲ್ಲಿ Accounts at a Glance ಮತ್ತು ಬೇರೆ ಬೇರೆ ಮಾಹಿತಿಯನ್ನು ಸರ್ಕಾರ ಕೊಟ್ಟಿರುವುದು ಇಲ್ಲಿ ಇದೆ. ಇವೆಲ್ಲವನ್ನೂ ಅವಲೋಕಿಸಿದಾಗ ಈ ಸರ್ಕಾರಕ್ಕೆ ಪ್ರಾಮಾಣಿಕವಾಗಿ ರಾಜ್ಯದ ಆರ್ಥಿಕ ಅಭಿವೃದ್ಧಿಯನ್ನು ಮಾಡಬೇಕು, ಆರ್ಥಿಕ ಕ್ಷೇತ್ರದಲ್ಲಿ ಒಂದು ಸುಧಾರಣೆಯ ಮಾದರಿಯನ್ನು ನಿರ್ಮಾಣ ಮಾಡಬೇಕೆಂಬ ಇಚ್ಛೆ ಇಲ್ಲವೆನ್ನುವಂತಹದ್ದು ಇವೆಲ್ಲದರಿಂದಲೂ ನಮಗೆ ಅರ್ಥವಾಗುತ್ತದೆ. ನಾನು ಇನ್ನು ಹೆಚ್ಚು ವಿವರವನ್ನು ಹೇಳುವುದಕ್ಕೆ ಹೋಗುವುದಿಲ್ಲ, ನಾನು ಇನ್ನೊಂದು ಸಂಗತಿಯನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ, ಈಗ ನಾನು ಹೇಳಿದೆ 31 ಸಾವಿರ ಕೋಟಿ ರೂಪಾಯಿಗಳು ಸಾಲವನ್ನು ಮಾಡಿಕೊಂಡಿದ್ದೇವೆ, ನಮ್ಮದು ಬಿಡಿಪಿ 27 ಪರ್ಸೆಂಟ್‌ಗೆ ಹೋಗಿದ್ದೇವೆ. ಅಸೆಟ್ಸ್ ಮತ್ತು ಲಯಾಬಲಿಟಿಸ್‌ಗಳಲ್ಲಿ ಯಾವುದಾದರೂ ಒಂದು ಕಡೆಗಳಲ್ಲಿ ಹೊಂದಾಣಿಕೆ ಇರಬೇಕಲ್ಲಾ? ನಮಗೆ ಇರುವಂತಹ ಮಾಹಿತಿಯ ಪ್ರಕಾರ 1999ರಲ್ಲಿ 23 ಸಾವಿರ ಕೋಟಿ ರೂಗಳ ಅಸೆಟ್ಸ್ ಇತ್ತು, ಆದರೆ ಅದು ಇವತ್ತು 24 ಸಾವಿರ ಕೋಟಿ ರೂಪಾಯಿಗಳಿಗೆ ಹೋಗಿದೆ. ಅದೇ ರೀತಿಯಾಗಿ ಲಯಾಬಲಿಟಿಸ್ 34 ಸಾವಿರ ಕೋಟಿ ರೂಪಾಯಿಗಳು ಇದ್ದದ್ದು ಇವತ್ತು ಅದು 47 ಸಾವಿರ ಕೋಟಿ ರೂಪಾಯಿಗಳಿಗೆ ಹೋಗಿದೆ. ಅಂದರೆ ನಾವು ತಂದಂತಹ ಸಾಲವನ್ನು, ನಾವು ಬೇರೆ ಕಡೆಯಿಂದ ಸಂಗ್ರಹಿಸಿರುವಂತಹ ಹಣವನ್ನು ಸರಿಯಾಗಿ ಉಪಯೋಗಿಸಿಕೊಂಡು ಬಳಸಿಕೊಂಡಿಲ್ಲವೆಂದು ಇದರಿಂದಾಗಿ ಅರ್ಥವಾಗುತ್ತದೆ. ಲಯಾಬಿಲಿಟಿಸ್ ಕಡಿಮೆಯಾಗಬೇಕಾಗಿತ್ತು ಅಸೆಟ್ಸ್ ಜಾಸ್ತಿಯಾಗಬೇಕಾಗಿತ್ತು, ಆದರೆ ನಮ್ಮ ದುರ್ದೈವವೆಂದರೆ, ಯಾವ ಪ್ರಮಾಣದಲ್ಲಿ ಅಸೆಟ್ಸ್ ಹೆಚ್ಚಾಗಬೇಕೆಂದು ಬಯಸುತ್ತೇವೆಯೋ ಅದು ಆಗಲಿಲ್ಲ. ಲಯಬಿಲಿಟಿಸ್‌ಗಳು ಹೆಚ್ಚು ಆಗುತ್ತಿದೆ. ಅಂದರೆ ನಾವು ತೆಗೆದುಕೊಂಡಂತಹ ಸಾಲ ಆಗಲಿ, ಅದು ವಿಶ್ವಬ್ಯಾಂಕ್, ನಬಾರ್ಡ್, ಇನ್ನು ಎಲ್ಲೆಲ್ಲಿ ಸಿಗುತ್ತದೆಯೋ ಅಲ್ಲೆಲ್ಲಾ ಒಟ್ಟು ಮಾಡುತ್ತಿದ್ದಾರಲ್ಲಾ, ಇವರು ಕೇಂದ್ರ ಸರ್ಕಾರದ ಮೇಲೆ ಹೇಳುತ್ತಾರೆ, ಇವರು ಸಾಲ ತೀರಿಸುವುದಕ್ಕೆ ಸಾಧ್ಯವೇ ಇಲ್ಲ ಎಲ್ಲವನ್ನೂ ನಾವು ಅವರಿಗೆ ಗ್ಯಾರಂಟಿಯನ್ನು ಕೊಟ್ಟಾಗಿದೆ, ಇನ್ನು ಗ್ಯಾರಂಟಿ ಕೊಡುವುದಕ್ಕೆ ಏನು ಇಲ್ಲ. ಹಾಗಾಗಿ ಕೇಂದ್ರ ಸರ್ಕಾರ ಹೇಳುತ್ತದೆ, ಎಲ್ಲರೂ ಕೂಡ ಹೇಳುತ್ತಾರೆ. ನಿಮಗೆ ಮುಂದಿನ ದಿನಗಳಲ್ಲಿ ಸಾಲವನ್ನು ಕೊಡುವುದಿಲ್ಲ ಎಂದು ಹೇಳುವಂತಹ ಸ್ಥಿತಿಗೆ ಬಂದಿದೆ. ಹಾಗಾಗಿ ನಾವು ಅಸೆಟ್ಸ್ ಮತ್ತು ಲಯಾಬಿಲಿಟಿಸ್‌ಗಳನ್ನು ನೋಡಿದಾಗಲೂ ಸಹ ನಮಗೆ ಇವತ್ತು ಸಮಾಧಾನಕರವಾದ ಸಂಗತಿಗಳು ಏನೂ ಇಲ್ಲ. ನಾವು ತೆಗೆದುಕೊಂಡು ಬಂದಿರುವಂತಹ ಹಣ ಅದು ಅಸೆಟ್ಸ್ ಕ್ರಿಯೇಟ್ ಆಗುವುದಕ್ಕೆ ಅದು ಬಳಕೆಯಾಗುವುದಿಲ್ಲ. ಹಾಗಾಗಿ 47 ಸಾವಿರ ಕೋಟಿ ರೂಪಾಯಿಗಳು ತನಕ ಇದು ಹೋಗಿದೆ.

ಹಾಗಾಗಿ ಈ ಸರ್ಕಾರಕ್ಕೆ ಆರ್ಥಿಕ ಕ್ಷೇತ್ರದಲ್ಲಿ ಪ್ರಾಮಾಣಿಕವಾದಂತಹ, ನಾವು ಹೆಜ್ಜೆಯನ್ನು ಇಡಬೇಕೆಂಬ ಬಗ್ಗೆ ಸ್ಪಷ್ಟ ಇಲ್ಲ ಎನ್ನುವುದು ನನಗೆ ಮನವರಿಕೆಯಾಗುತ್ತದೆ. ಹಾಗಾಗಿ ಮಾನ್ಯ ವೀರಪ್ಪಮೊಯಿಲಿಯವರು ಕೊಟ್ಟಂತಹ ತೆರಿಗೆ ಸುಧಾರಣಾ ವರದಿಯನ್ನಾಗಲಿ, ಹಾರ್ನಹಳ್ಳಿ ರಾಮಸ್ವಾಮಿಯವರು ಕೊಟ್ಟಂತಹ ಆಡಳಿತ ಸುಧಾರಣಾ ವರದಿಯನ್ನಾಗಲಿ ಅದು ಕೇವಲ ಯಾರನ್ನೋ ತೃಪ್ತಿಪಡಿಸುವುದಕ್ಕೋಸ್ಕರ ಮಾಡಿರುವುದು ಅಂತ ಕಾಣುತ್ತದೆಯೇ ಹೊರತು, ಅದರ ಲಾಭವನ್ನು ಆಡಳಿತದಲ್ಲಿ ತರುವುದಕ್ಕೆ ಅದು ಸಾಧ್ಯವಾಗದಿರುವಂತಹ ದುಃಖಕರವಾದ ಸನ್ನಿವೇಶವನ್ನು ನಾವು ಕಾಣುತ್ತಿದ್ದೇವೆನ್ನುವಂತಹ ನಾನು ಆ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತಿದ್ದೇನೆ. ನಾನು ಈ ಸಂದರ್ಭದಲ್ಲಿ ಈ ಬಜೆಟ್‌ನಲ್ಲಿರುವಂತಹ ಅನೇಕ ಕೊರತೆಗಳು ಇವೆ, ಈ ಸರ್ಕಾರ ಆರ್ಥಿಕವಾಗಿ ಭದ್ರವಾಗಿದೆ ಎಂದು ಹೇಳಿದರೆ, ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಹೇಳುವಾಗ ಅಲ್ಲಿ ಯಾವ್ಯಾವ ರಾಜ್ಯಗಳು ದಿವಾಳಿಯಾಗಿ ಹೋಗಿದೆಯಲ್ಲಾ, ಆ ರಾಜ್ಯಗಳಿಗೆ ಹೋಲಿಸಿಕೊಂಡು ನಾವು ಚೆನ್ನಾಗಿ ಹೇಗಿದ್ದೇವೆ ಎಂದು ನಾಳೆ ದಿವಸ ಹೇಳುತ್ತಾರೆ. ಆದರೆ ನಮ್ಮ ಶಕ್ತಿಗೆ ಆಧಾರದ ಮೇಲೆ ನಾವು ಹೇಗೆ ಮುನ್ನಡೆಯಬಹುದು ಎಂದು ಅವರು ಹೇಳುವುದಿಲ್ಲ. ಅಲ್ಲಿ ದಿವಾಳಿ ಎದ್ದಿರುವಂತಹ ರಾಜ್ಯವನ್ನು ಹೋಲಿಸಿಕೊಂಡು ಇವರಿಗೆಲ್ಲಾ ನಾವು ಕಂಪೇರ್ ಮಾಡಿದಾಗ ನಾವು ಹೇಗಿದ್ದೇವೆ ನೋಡಿ ಎಂದು ಹೇಳುತ್ತಾರೆ. ಆದರೆ ನಮ್ಮ ಶಕ್ತಿಸಾಮರ್ಥ್ಯ ನಾವು ಹೇಗಾಗಬಹುದು ಎಂದು ಉಳಿದವರಿಗಾದರೂ ತೋರಿಸಬಹುದಾಗಿತ್ತಲ್ಲಾ? ಅದಕ್ಕೆ ಅನುಗುಣವಾಗಿರಬೇಕಲ್ಲಾ? ನಾವು ಕರ್ನಾಟಕದವರು ಇಷ್ಟು ತೆರಿಗೆಯನ್ನು ಹೆಚ್ಚಿಗೆ ಕೊಟ್ಟು ನಾವು ಒಳ್ಳೆಯ ರೀತಿಯ ಆರ್ಥಿಕ ಸ್ಥಿತಿಯನ್ನು ಸುಧಾರಣೆಯನ್ನು ಮಾಡಬಹುದಾಗಿತ್ತು. ಅದನ್ನು ಮಾಡುವುದಕ್ಕಾಗುತ್ತಿಲ್ಲವೆಂಬುದು ನನ್ನ ನೋವು. ಹಾಗಾಗಿ ಉಳಿದ ರಾಜ್ಯಗಳ ಕಂಪ್ಯಾರಿಸನ್ ವ್ಯತ್ಯಾಸಗಳೆಲ್ಲವೂ ಅದು ಕೇವಲ ಬೀಸುವ ದೊಣ್ಣೆಯಿಂದ ತಪ್ಪಿಸಿಕೊಳ್ಳುವುದಕ್ಕೆ ಹೊರತು ಪ್ರಾಮಾಣಿಕವಾಗಿ ಆರ್ಥಿಕ ಕ್ಷೇತ್ರದಲ್ಲಿ ಅಭಿವೃದ್ಧಿಗೆ ಚಿಂತನೆಯಲ್ಲ ಎಂದು ನಾನು ಭಾವಿಸಿಕೊಳ್ಳುತ್ತೇನೆ. ನಮ್ಮ ರಾಜ್ಯದಲ್ಲಿ ಅಷ್ಟು ಕಷ್ಟವನ್ನು ಅನುಭವಿಸುತ್ತಿದ್ದೇವೆಂದು ಹೇಳಿದ್ದೀರಿ, ಸಕ್ಕರೆ ಕಾರ್ಖಾನೆಯ ಸ್ಥಿತಿ, ಮಲೆನಾಡು ಅಭಿವೃದ್ಧಿ ಮಂಡಳಿ, ಬಯಲುಸೀಮೆ ಅಭಿವೃದ್ಧಿ ಮಂಡಳಿಯ ಸ್ಥಿತಿ ಎಲ್ಲ ಸ್ಥಿತಿಯನ್ನು ಹೇಳಿದ್ದೀರಿ, ಇದರ ಬಗ್ಗೆ ನಮಗೆಲ್ಲರಿಗೂ ಗೊತ್ತಿದೆ ಸಣ್ಣ ಕೈಗಾರಿಕೆಗಳಿಗೆ ಸಬ್ಸಿಡಿಯನ್ನು ಕೊಡುವಂತಹದ್ದು, 405 ಕೋಟಿ ರೂಪಾಯಿಗಳನ್ನು ಇನ್ನೂ ಕೊಡಲಿಲ್ಲ, ಅದರ ಬಗ್ಗೆ ಇನ್ನೂ ಸ್ಪಷ್ಟವಿಲ್ಲ. ಅದಕ್ಕಾಗಿ ಬಾಂಡ್‌ನ್ನು ಎತ್ತುತ್ತಾರೋ ಏನು ಮಾಡುತ್ತಾರೋ ಇನ್ನೂ ಗೊತ್ತಿಲ್ಲ, ಕಾಲೇಜು ಬಿಲ್ಡಿಂಗ್ ಕಟ್ಟುವುದಕ್ಕೆ ಇದರ ಬಗ್ಗೆ ಮಾನ್ಯ ಶಿಕ್ಷಣ ಸಚಿವರು ಯೂನಿವರ್ಸಿಟಿಯ ಬಗ್ಗೆ ಬೆಳಿಗ್ಗೆ ಹೇಳಿದರು. ಅಲ್ಲಿ ಕಾಲೇಜು ಬಿಲ್ಡಿಂಗ್ ಅರ್ಧಂಬರ್ಧವಾಗಿದೆ, ಆ ಕಾಲೇಜ್ ಬಿಲ್ಡಿಂಗ್ ಕಟ್ಟುವುದಕ್ಕೆ ಇನ್ನೂ ಸಾಲವನ್ನು ತೆಗೆದುಕೊಳ್ಳುವುದಕ್ಕೆ ಇವರಿಗೆ ಪೂರ್ಣ ಪ್ರಮಾಣದಲ್ಲಿ ಆಗಲಿಲ್ಲ. ಸಾಲವನ್ನು ತೆಗೆದುಕೊಳ್ಳಲಿಲ್ಲ, ಇವರಿಗೆ ಬಜೆಟ್‌ನಲ್ಲಿ ಹಣವೂ ಇಲ್ಲ, ಕಾಲೇಜು ಬಿಲ್ಡಿಂಗ್ ಅರ್ಧಂಬರ್ಧ ಕಟ್ಟಿಕೊಂಡು ನಿಂತಿರುವುದನ್ನು ನಾವು ಕಾಣುತ್ತಿದ್ದೇವೆ. ಅದು ಯಲ್ಲಾಪುರದಿಂದ ಹಿಡಿದು ರಾಜ್ಯದ ಉದ್ದಗಲದಲ್ಲಿರುವಂತಹದ್ದು ಅದಕ್ಕಾಗಿ 22 ಕೋಟಿ ರೂಪಾಯಿಗಳು ಬೇಕೆಂದು ಹೇಳಿದ್ದಾರೆ. ಅವರು 22 ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ಕಾಲೇಜು ಬಿಲ್ಡಿಂಗ್‌ನ್ನು ಕಂಪ್ಲೀಟ್ ಮಾಡುವುದಕ್ಕಾಗಲಿಲ್ಲ. ಇಷ್ಟೇ ಅಲ್ಲ, ಇನ್ನು ಬೆಳೆ ವಿಮೆ ಮತ್ತು ಬೇರೆ ಬೇರೆ ವಿಷಯಗಳು

ಪ್ರಸ್ತಾಪವಾಗಿದೆ, ಗುತ್ತಿಗೆದಾರರಿಗೆ ಕೋಟಿ ರೂಪಾಯಿಗಳು ಬಾಕಿ ಕೊಡುವುದಿದೆ, ಇದರ ಬಗ್ಗೆಯೂ ಕೂಡ ಪ್ರಸ್ತಾಪವಾಗಿದೆ. ಹಾಗಾಗಿ ಸರ್ಕಾರ ಇವತ್ತು ಆರ್ಥಿಕವಾಗಿ ಬಹಳ ದುರ್ಬಲವಾಗಿದೆ, ನಾನು ಹಿಂದೆ ಒಂದು ಸಂದರ್ಭದಲ್ಲಿ ಹೇಳಿದ್ದೆ, ಬೋನ್ ಕ್ಯಾನ್ಸರ್ ಆದ ಹಾಗಿ ಆಗಿದೆ ಎಂದು ಹೇಳಿದ್ದೆ, ಬೋನ್ ಕ್ಯಾನ್ಸರ್ ಬಗ್ಗೆ ಈ ಸದನದಲ್ಲಿ 203 ಬಾರಿ ಉಲ್ಲೇಖ ಮಾಡಿ ಹೇಳಿದ್ದೇನೆ. ಅದೇನೆಂದರೆ, ಮೇಲೆ ನೋಡುವುದಕ್ಕೆ ಚೆನ್ನಾಗಿ ಇರುತ್ತಾರೆ, ಅದರೆ ಒಳಗಡೆ ಎಲುಬು ಚೆನ್ನಾಗಿರುವುದಿಲ್ಲ. ಆದರೆ ಆರೋಗ್ಯ ಮಂತ್ರಿಗಳಿಗೆ ಇದರ ಬಗ್ಗೆ ಗೊತ್ತಿರಬಹುದು, ಆದರೆ ಒಳಗಡೆ ಎಲುಬು ಪುಡಿಪುಡಿಯಾಗಿರುತ್ತದೆ, ಬೋನ್ ಕ್ಯಾನ್ಸರ್. ನಮ್ಮ ಸ್ಥಿತಿಯೂ ಹಾಗೆಯೇ ಆಗಿದೆ. ಸರ್ಕಾರದ ಸ್ಥಿತಿಯೂ ಕೂಡ ಹಾಗೆಯೇ ಹಾಗಿದೆ. ಮೇಲೆ ನೋಡುವುದಕ್ಕೆ ಬಹಳ ಚೆನ್ನಾಗಿ ಅದರ ಒಳಗಡೆ ಮುಟ್ಟಿ ನೋಡಿದರೆ ಪೊಳ್ಳು, ಪೊಳ್ಳು ಆಗಿರುತ್ತದೆ. ಒಳಗಡೆ ಏನೂ ಇಲ್ಲ. ಆರ್ಥಿಕವಾಗಿ ಯಾವುದೇ ಭದ್ರತೆಯ ಸಂಗತಿಗಳು ಇಲ್ಲ, ನಮಗೆ ಈ ಎಲ್ಲಾ ಅಂಕಿಸಂಖ್ಯೆಗಳಿಂದ ನೋಡಿದಾಗ ಗೊತ್ತಾಗುತ್ತದೆ. ಮಾನ್ಯ ಅಧ್ಯಕ್ಷರೆ, ಕೊನೆಯದಾಗಿ ಹೇಳುವುದಾದರೆ ನನಗೆ ಮಾತನಾಡಲು ಬಹಳ ಕಡಿಮೆ ಸಮಯವನ್ನು ಕೊಟ್ಟಿದ್ದೀರಿ, ಹಾಗಾಗಿ ನಾನು ಹೆಚ್ಚಿಗೆ ಪ್ರಸ್ತಾಪ ಮಾಡುವುದಕ್ಕೆ ಬಯಸುವುದಿಲ್ಲ. ನನ್ನದು ಎರಡು ಪ್ರಮುಖವಾದ ವಿಷಯಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ತಮಗೆಲ್ಲರಿಗೂ ಗೊತ್ತಿರುವಂತೆ ಮಂಗಳೂರು ಹೆಂಚು ಬಗ್ಗೆ ಹೇಳುವುದಾದರೆ ಮಂಗಳೂರು ಹೆಂಚನ್ನು ಕರಾವಳಿಯಲ್ಲಿ ಎಲ್ಲಾ ಕಡೆಗಳಲ್ಲೂ ಬಳಸುತ್ತೇವೆ, ಬೇರೆ ಬೇರೆ ಕಡೆಗಳಲ್ಲಿ ಟೈಲ್ಸ್ ಎಲ್ಲಾ ಕಡೆಗಳಲ್ಲಿ ಬಳಸುತ್ತಿದ್ದೇವೆ. ಅದರಲ್ಲಿ 4 ಪ್ಲಸ್ 1 ಪರ್ಸೆಂಟ್ ಟ್ಯಾಕ್ಸ್ ಏನಿತ್ತು ಅದಕ್ಕೆ ನಾವು ಅದನ್ನು ತೆಗೆಯಬೇಕೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿ, ಮುಖ್ಯಮಂತ್ರಿಗಳು ಅದರ ಬಗ್ಗೆ ಅಧಿಕಾರಿಗಳಿಗೆ ಆದೇಶವನ್ನು ಕೊಟ್ಟು, ಅದನ್ನು ತೆಗೆಯಬೇಕೆಂದು ಆಗಿದೆ. ಆದರೆ ದುರ್ದೈವ ಎಂದರೆ, ಈಗ ಸರ್ಕಾರಕ್ಕೆ 15 ಪರ್ಸೆಂಟ್ ಟ್ಯಾಕ್ಸನ್ನು ಹಾಕಿದೆ. ನಾವು 4 ಪ್ಲಸ್ 1 ಪರ್ಸೆಂಟ್ ತೆಗೆಯಬೇಕು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿ ಅದರ ಬಗ್ಗೆ ಮುಖ್ಯಮಂತ್ರಿಗಳು ಒಪ್ಪಿ, ಅವರು ಆರ್ಥಿಕ ಇಲಾಖೆಗೆ ಮತ್ತು ಇತ್ಯಾದಿ ಇಲಾಖೆಗಳಿಗೆ ಹೇಳಿದ ಮೇಲೂ ಕೂಡ ಅದು ವಾಪಸ್ಸು ಹೋಯಿತೆಂದರೆ 15 ಪರ್ಸೆಂಟ್ ಟ್ಯಾಕ್ಸ್ ಏತಕ್ಕಾಗಿ ಕೊಟ್ಟಿದ್ದಾರೆ ಮಾನ್ಯ ಛೇರ್ಮನ್‌ರವರೆ? ಎಲ್ಲಿ ಉಳಿಯಬೇಕು ಆ ಹೆಂಚಿನ ಉದ್ಯಮ? ಮುಂದಿನ ದಿನಗಳಲ್ಲಿ ಹೆಂಚಿನ ಉದ್ಯಮ ಹೇಗೆ ಉಳಿಯುತ್ತದೆ, ಹೆಂಚನ್ನು ಯಾರು ತೆಗೆದುಕೊಳ್ಳದೆ ಇರುವಂತಹ ಸ್ಥಿತಿ ಬಂದಾಗ ಇವತ್ತು ಇಂತಹ ಒಂದು ಉದ್ಯಮವನ್ನು ನಾವು ಇವತ್ತಿನ ದಿವಸ ಕಷ್ಟದಲ್ಲಿರುವಂತಹದ್ದನ್ನು ನೋಡುತ್ತೇವೆ. ಹಾಗಾಗಿ 15 ಪರ್ಸೆಂಟ್ ಏನು ಟ್ಯಾಕ್ಸ್ ಹೆಚ್ಚಾಗಿದೆ ಇದನ್ನು ಸಂಪೂರ್ಣವಾಗಿ ಕೈಬಿಡಬೇಕು, 4 ಪ್ಲಸ್ 1 ಇರುವುದನ್ನು ಪರ್ಸೆಂಟ್ ಇರುವುದನ್ನೇ ಕೈಬಿಡಬೇಕೆಂದು ಹೇಳುತ್ತಾ ಈ ಸಂಗತಿಗಳ ಜೊತೆಯಲ್ಲಿ ಇವತ್ತು ಮೀನುಗಾರಿಕೆಗೆ ಕುರಿತಂತೆ ಮಾತನಾಡುವುದಾದರೆ ಇದರ ಬಗ್ಗೆ ಅನೇಕ ಸಂಗತಿಗಳು ಪ್ರಸ್ತಾಪವಾಗಿದೆ. ಇವತ್ತು ನಮ್ಮ ಬಜೆಟ್‌ನಲ್ಲಿ 10 ಕೋಟಿ ರೂಪಾಯಿಗಳ ವಿಶೇಷವಾದ ಅನುದಾನದ ಮಾರಾಟ ಇತ್ಯಾದಿ ವ್ಯವಸ್ಥೆಗಳ ಬಗ್ಗೆ ಹೇಳಿದ್ದಾರೆ. ಆದರೆ ಸಮಗ್ರವಾದಂತಹ ಮೀನುಗಾರಿಕೆಗೆ ಕುರಿತಂತೆ ಯೋಜನೆಗಳೇ ಸರ್ಕಾರದಲ್ಲಿಲ್ಲ ಎನ್ನುವುದು ಸ್ಪಷ್ಟವಿದೆ. ಮೀನುಗಾರರಿಗೆ 10 ಕೋಟಿ ರೂಪಾಯಿಗಳನ್ನು ಕೊಟ್ಟರೆ ಅವರ ಕಷ್ಟಗಳು ಸುಧಾರಿಸುತ್ತಾ ಈಗ ಚುನಾವಣೆ ಬಂದಿದೆ. 10 ಕೋಟಿ ರೂಪಾಯಿಗಳನ್ನು ಅವರಿಗೆ ಕೊಟ್ಟಿದ್ದೇವೆಂದು ಹೇಳಿಕೊಂಡು ಹೋಗಬಹುದು. ಆದರೆ ಸಮಗ್ರವಾಗಿ ಮೀನುಗಾರರ ಸಮಸ್ಯೆಗಳೇನು? ಆ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ತಮ್ಮ ನೀತಿ ಏನು? ಇದರ ಬಗ್ಗೆ

ಯೋಚನೆಯಾಗಬೇಕೇ ಹೊರತು ಬಜೆಟ್‌ನಲ್ಲಿ ಅದು ಪ್ರಕಟವಾಗಬೇಕಾಗಿದೆಯೇ ಹೊರತು ಇಲಾಖೆಯ ಯಾವುದೋ ಒಂದು ಕಾರ್ಯಕ್ರಮವನ್ನು ಇದರಲ್ಲಿ ಜೋಡಿಸಿಕೊಂಡು, ನಮ್ಮದು ಇದು ಎಂದು ಹೇಳಿಕೊಂಡು ಹೋಗುವುದು ಇದರಲ್ಲಿ ಏನು ಅರ್ಥವಿದೆ. ಇಲಾಖೆಯವರು ಅವರವರ ಕಾರ್ಯಕ್ರಮಗಳನ್ನು ಮಾಡಿಕೊಂಡು ಹೋಗುತ್ತಾರೆ. ಆ ಕಾರ್ಯಕ್ರಮಗಳ ಬಗ್ಗೆ ವಿಶೇಷವೇನೂ ಇಲ್ಲ, ಅದರ ಬಗ್ಗೆ ಸಮಗ್ರವಾದ ಒಂದು ನೀತಿ ರೂಪಿಸುವಂತಹ ಅಗತ್ಯತೆ ಇದೆ ಎನ್ನುವಂತಹದ್ದು ಹೇಳುತ್ತೇನೆ. ಈ ಬಜೆಟ್‌ನಲ್ಲಿ "ಕುವೆಂಪು ಶತಮಾನೋತ್ಸವದ ಮಾದರಿ ಕನ್ನಡ ಶಾಲೆ"ಗಳನ್ನು ಮಾಡುತ್ತೇವೆಂದು ಹೇಳಿದ್ದಾರೆ. ಈ ರೀತಿಯಾಗಿ ಸರ್ಕಾರ ಇದನ್ನು ಹೇಳದೆ ಇರುವುದು ಬಹಳ ಒಳ್ಳೆಯದು. ನನ್ನ ಹತ್ತಿರ ಆ್ಯಕ್ಷನ್ ಟೇಕನ್ ರಿಪೋರ್ಟ್ ಇಲ್ಲಿ ಇದೆ, ಇದನ್ನು ಪ್ರತಿ ವರ್ಷವೂ ಕೊಡುತ್ತಾರೆ, ಅವರು ಕಳೆದ ವರ್ಷ ಬಜೆಟ್‌ನಲ್ಲಿ ಏನು ಹೇಳಿದ್ದರೋ ಅದು ಏನಾಯಿತು ಎಂಬುದು ಗೊತ್ತಾಗುತ್ತದೆ. ಇದನ್ನು ನೋಡಿದರೆ ಗೊತ್ತಾಗುತ್ತದೆ, ಘೋಷಣೆಗಳು ಏನಾಗಿದೆ ಎಂಬುದು ತಿಳಿಯುತ್ತದೆ. "ಶಾಸಕರುಗಳ ಮಾದರಿ ಶಾಲೆಗಳು ಎಂದು ಇದೆ" ನಮ್ಮದು ಮತ್ತು ನಿಮ್ಮದು ಎಂದರೆ ಇದೆ, ಮಾನ್ಯ ಛೇರ್ಮನ್‌ರವರೆ ನಿಮ್ಮ ಹೆಸರಿನಲ್ಲೂ ಕೂಡ ಇದೆ, ನಮ್ಮೆಲ್ಲರ ಹೆಸರಿನಲ್ಲಿಯೂ ಕೂಡ ಶಾಸಕರ ಮಾದರಿ ಶಾಲೆ ಎಂದು ಇದೆ. ನಾನು ಅಲ್ಲಿ ಹೋಗುವಾಗ ಕೈಮುಗಿದು ಒಳಗಡೆ ಹೋಗುತ್ತೇನೆ. ಏಕೆಂದರೆ ಒಳಗಡೆ ಹೋಗಿ ಬಂದರೆ ಸಾಕು ಅಲ್ಲಿ ಏನೂ ವ್ಯವಸ್ಥೆಗಳಿರುವುದಿಲ್ಲದಿರುವಂತಹ ಸ್ಥಿತಿ ಇದೆ. ವ್ಯವಸ್ಥೆಗಳನ್ನು ಅಲ್ಲಿ ಕಲ್ಪಿಸದೆ ಇರುವುದಕ್ಕೆ ಆರ್ಥಿಕ ಸಹಾಯ ಇಲ್ಲದಿರುವಂತಹ ಸ್ಥಿತಿ ಇದೆ. "ಇವತ್ತು ಕುವೆಂಪು ಶತಮಾನೋತ್ಸವ ಶಾಲೆಗಳನ್ನು" ನಾವು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಮಾಡುವುದಕ್ಕೆ 10 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆಂದು ಹೇಳಿದ್ದಾರೆ. ಕುವೆಂಪು ಅವರ ಹೆಸರಿಗೂ ಅವಮಾನ ತರುವಂತಹ ಕೆಲಸ ಇದರಿಂದ ಆಗುತ್ತದೆಯೇನೋ ಎಂದು ಸಂಶಯವಿದೆ. ಏಕೆಂದರೆ ಶಾಸಕರಾಗಿ ನಾವು ಅವಮಾನ ಪಟ್ಟಿರುವುದು ಸಾಕು, ನಮ್ಮ ನಮ್ಮ ಶಾಸಕರ ಮಾದರಿ ಶಾಲೆ ಎಂದು ಹಾಕಿಕೊಂಡು ಅವಮಾನ ಪಟ್ಟಿರುವುದು ಸಾಕು. ನಮ್ಮನ್ನು ನಮ್ಮ ಊರಿನಲ್ಲಿ ಕೇಳುತ್ತಾರೆ, ನಿಮ್ಮ ಮಾದರಿ ಶಾಲೆ ಎಲ್ಲಿ? ಇಲ್ಲಿ ಒಂದು ಯೂರಿನಲ್ಸ್ ಇಲ್ಲ, ಇಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ, ಇಲ್ಲಿ ನಮಗೆ ರಂಗಮಂದಿರ ಬೇಕು ಅದು ಇಲ್ಲ. ಪ್ರಯೋಗಾಲಯ ಬೇಕೆಂದರೆ ಅದು ಇಲ್ಲ, ಒಟ್ಟಿನಲ್ಲಿ ಶಾಸಕರ ಮಾದರಿ ಶಾಲೆ ಎಂದು ಹೇಳಿದರೆ ಸಾಕೇ? ಈ ರೀತಿಯಾಗಿ ಕುವೆಂಪು ಮಾದರಿ ಶಾಲೆಯನ್ನು ಮಾಡಿ, ಬಹುಶಃ ಕುವೆಂಪುರವರ ಹೆಸರಿಗೂ ಕೂಡ ಕಳಂಕವನ್ನು ತರುತ್ತಾರೋ ಎನ್ನುವಂತಹ ಭಯ ನನ್ನಲ್ಲಿ ಇದೆ. ಹಾಗಾಗಿ ಈ ರೀತಿಯಾಗಿ ಘೋಷಣೆಯನ್ನು ಮಾಡುವುದು, ಅದಕ್ಕೆ ಆರ್ಥಿಕವಾಗಿ ಶಕ್ತಿ ಇದ್ದರೆ ಮಾಡಲಿ, ಅದು ಇಲ್ಲದಿದ್ದರೆ ಮಾಡದೆ ಇರುವುದು ಒಳ್ಳೆಯದು. ಈ ಮಹಿಳೆಯರ ಬಗ್ಗೆ ಇನ್ನಿಲ್ಲದ ಕಾಳಜಿ ಇಲ್ಲಿ ವ್ಯಕ್ತವಾಗಿದೆ, ಈ ಬಜೆಟ್‌ನಲ್ಲಿಯೂ ಆಗಿದೆ, ಇತ್ತೀಚೆಗೆ ಪ್ರಚಾರದಲ್ಲಿಯೂ ಕೂಡ ಹೆಚ್ಚು ಆಗಿರುವುದನ್ನು ನಾವು ನೋಡುತ್ತಿದ್ದೇವೆ. ಇದರ ಬಗ್ಗೆ ನಾನು ಕೇಳುವುದಕ್ಕೆ ಬಯಸುತ್ತೇನೆ, ಹಿಂದೆ ಸ್ತ್ರೀಶಕ್ತಿ ಗುಂಪು ಇತ್ತಾದಿಗಳು ಆಯಿತಲ್ಲಾ, ಅದಕ್ಕೆ ಸುತ್ತು ನಿಧಿಯನ್ನು ಎಷ್ಟು ಕೊಟ್ಟಿದ್ದೀರಿ? ಅದನ್ನು ಅಲ್ಲಿಯೇ ಒಡೆದು ಆ ನಿಧಿಯನ್ನು ಸ್ತ್ರೀಶಕ್ತಿ ಗುಂಪಿಗೆ ಕೊಡದೆ ಅರ್ಧಕ್ಕೆ ಅರ್ಧಸ್ತ್ರೀಶಕ್ತಿಗೆ ಸುತ್ತು ನಿಧಿಯನ್ನು ಕೊಡಲಿಲ್ಲ. ಅದಕ್ಕಾಗಿ 5 ಸಾವಿರ ರೂಪಾಯಿಗಳನ್ನು ಕೊಡಬೇಕಾಗಿತ್ತು. ಅದನ್ನು ಕೊಡಲಿಲ್ಲ. ಇನ್ನು ಅದನ್ನು ಹಾಗೇ ಮಾಡುತ್ತೇವೆ, ಹೀಗೆ ಮಾಡುತ್ತೇವೆ ಇತ್ಯಾದಿ ಎಂದು ಹೇಳುತ್ತಾರೆ. ಸ್ತ್ರೀಯರ ಬಗ್ಗೆ ಪ್ರಾಮಾಣಿಕವಾದಂತಹ ಕಳಕಳಿ ಇದ್ದರೆ, ಹಳ್ಳಿಹಳ್ಳಿಗಳಲ್ಲಿ ಶೌಚಾಲಯುಗಳನ್ನು ಮಾಡಲಿ, ರಸ್ತೆಯ ಪಕ್ಕದಲ್ಲಿ ಇವತ್ತು ನಾವು ಮಾನವನ್ನು ಮುಚ್ಚಿಕೊಳ್ಳುವುದಕ್ಕೋಸ್ಕರ ಎಷ್ಟು ಕಷ್ಟಪಟ್ಟು ಶೌಚಾಯಲಕ್ಕೆ ಹೋಗಿ ಬರುತ್ತಿದ್ದಾರೆ. ನಮ್ಮ

ಅಕ್ಕತಂಗಿಯರು, ತಾಯಂದಿರು ಅಲ್ಲಿಗೆ ಹೋಗಿ ಬರುತ್ತಿದ್ದಾರೆ. ಇವರಿಗೆ ಪ್ರಾಮಾಣಿಕವಾದಂತಹ ಕಾಳಜಿ ಇದ್ದರೆ ಪ್ರತಿ ಊರಿನಲ್ಲಿಯೂ ಕಡ್ಡಾಯವಾಗಿ ನಾವು ಮಹಿಳೆಯರಿಗೋಸ್ಕರ ಶೌಚಾಲಯಗಳನ್ನು ಮಾಡುತ್ತೇವೆಂದು ಹೇಳಬೇಕು. ಪ್ರಾಮಾಣಿಕತೆ ಇಲ್ಲ, ಕೇವಲ ಇದು ಚುನಾವಣೆಯ ಸ್ಟಂಟ್, ಪ್ರಚಾರಕ್ಕೆ ಮತ್ತು ಮತಗಳಿಕೆಗೆ ಬೇಕಾಗಿರುವಂತಹ ಒಂದು ಅಂಶ ಇದರೊಳಗಿದೆ ಎಂದು ಹೇಳುತ್ತೇನೆ. ಇದರಲ್ಲಿ ಯುವಕರ ಬಗ್ಗೆ ಮಾತನಾಡಿದ್ದಾರೆ; ನಾನು ಕೊನೆಯದಾಗಿ ಎರಡು ಅಂಶಗಳನ್ನು ಪ್ರಸ್ತಾಪಿಸುತ್ತೇನೆ. ಹೋದ ಸಾರಿ ಕೊಡಬೇಕಾದಂತಹ 10 ಸಾವಿರ ರೂಪಾಯಿಗಳ ಇನ್ನೂ ಕೊಡಲಿಲ್ಲ. ಮತ್ತೇ ಯುವಕರ ಬಗ್ಗೆ ಮತ್ತೆ ಮೊಸಳೆ ಕಣ್ಣೀರು? ಹೋದ ಸಲ ಪ್ರತಿ ಪಂಚಾಯಿತಿಗೆ ಒಂದು ರಾಜೀವ್‌ಗಾಂಧಿ ಯುವ ಪರಿಷತ್ ಮಾಡುತ್ತೇವೆ ಅದಕ್ಕಾಗಿ 10 ಸಾವಿರ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಿದರು. ಆದರೆ ಆ್ಯಕ್ಷನ್ ಟೇಕನ್ ರಿಪೋರ್ಟಿನಲ್ಲಿ ಆದೇಶ ಹೊರಡಿಸಲಾಗಿದೆ ಎಂದು ಇದೆ. ಏನು ಆದೇಶ ಹೊರಡಿಸಿದ್ದಾರೋ, ಒಂದು ಸುತ್ತೋಲೆಯನ್ನು ಕಳುಹಿಸಿದರೆ ಮುಖ್ಯಮಂತ್ರಿಗಳ ಕಛೇರಿಯಿಂದ ಮತ್ತು ಸಂಬಂಧಪಟ್ಟ ಮಂತ್ರಿಗಳ ಕಛೇರಿಯಿಂದ ಇಲಾಖೆಯ ಕಾರ್ಯದರ್ಶಿಯವರಿಗೆ ಪತ್ರವನ್ನು ಬರೆದುಬಿಟ್ಟರೆ ಇದು ಜಾರಿಗೆ ಬಂತು ಎಂದು ಅಂದುಕೊಂಡಿರಬಹುದು. ಅದಕ್ಕಾಗಿ 10 ಸಾವಿರ ರೂಪಾಯಿಗಳನ್ನು ಇದುವರೆವಿಗೂ ಕೊಟ್ಟಿರುವುದಿಲ್ಲ. ಇದರಲ್ಲಿ ಗ್ರಾಮೀಣ ಕರಕುಶಲಗಾರರ ಬಗ್ಗೆ ಬಹಳ ಕಾಳಜಿ ವ್ಯಕ್ತವಾಗಿದೆ. ನಾನು ಕೇಳಿದೆ ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ವಿಶ್ವಯೋಜನೆ ಬಂತಲ್ಲಾ ಅದರ ಕಥೆ ಏನಾಗಿದೆ ಸ್ವಲ್ಪ ನೋಡಿ ಎಂದು ಹೇಳಿದೆ. ನಾವು ಹೊಸ ಹೊಸ ಘೋಷಣೆಯನ್ನು ಮಾಡುತ್ತಾ ಹೋಗಿರುಬಹುದು, ಹಿಂದೆ ಮಾಡಿರುವಂತಹ ಘೋಷಣೆಗಳು ಅದು ಇನ್ನೂ ಎಲ್ಲಿ ಕಸದ ಬುಟ್ಟಿಯಲ್ಲಿ ಬಿದ್ದಿರಬಹುದು ಎಂದು ನಾವು ನೋಡುತ್ತಿದ್ದೇವೆ. ಬಂಗಾರಪ್ಪನವರು ಇದೇ ಕಾಳಜಿಯನ್ನು ಹೊತ್ತು ವಿಶ್ವಯೋಜನೆಯನ್ನು ಜಾರಿಗೆ ತಂದರು. ಆದರೆ ಆ ವಿಶ್ವಯೋಜನೆ ಏನಾಯಿತು ಎಂದು ನೋಡದೆ, ಅದರ ಬಗ್ಗೆ ಪರಿಶೀಲನೆಯನ್ನು ಮಾಡದೆ, ಅದರ ಬಗ್ಗೆ ಅವಲೋಕನ ಮಾಡದೆ ಮತ್ತೆ ಈಗ ಅದೇ ಮಾತು. ನಾನು ಇದರ ಬಗ್ಗೆ ಹೇಳುತ್ತಿದ್ದೇನೆ. ಅದರೊಳಗಡೆ ಅಗಸರು, ಕುಂಬಾರರು, ಬಡಿಗರು ಇತ್ಯಾದಿ ಎಲ್ಲರೂ ಇದ್ದಾರೆ, ಆದರೆ ನಮ್ಮ ಪರಿಸ್ಥಿತಿ ಹೇಗಿದೆ ಎಂದರೆ, ನಾನೇ ಈ ಸದನದಲ್ಲಿ ಪ್ರಸ್ತಾಪ ಮಾಡಿದಾಗ ಗಂಧದ ಕೆಲಸ ಮಾಡುವವರಿಗೆ ಗಂಧ ಕೊಡುವುದಕ್ಕಾಗುವುದಿಲ್ಲ. ಅರಣ್ಯ ಇಲಾಖೆಯಿಂದಾಗಲೇ ಅಥವಾ ನಮ್ಮಲ್ಲಿರುವಂತಹ ದಾಸ್ತಾನಿನಿಂದಾಗಲಿ ಆ ಗಂಧದ ಕರಕುಶಲಗಾರರಿಗೆ ಅವರಿಗೆ ಗಂಧ ಕೊಡುವುದಕ್ಕಾಗುವುದಿಲ್ಲ. ಇವರು ಅಗಸನ ಬಗ್ಗೆ ಕುಂಬಾರರ ಬಗ್ಗೆ, ಬಡಿಗೆಯವರ ಬಗ್ಗೆ ಎಲ್ಲರ ಬಗ್ಗೆಯೂ ಮಾತನಾಡುತ್ತಾರೆ. ಆದರೆ ನಾವು ಎಲ್ಲರ ಬಗ್ಗೆಯೂ ಮಾತನಾಡಿದ್ದೇವೆಂದು ಆಗಬೇಕು ಅಂತಾ? ಹೀಗೆ ಮಾಡುವುದರಿಂದ ನಿಶ್ಚಿತವಾಗಿ ರಾಜ್ಯದ ಘನತೆ ಗೌರವ ಹೆಚ್ಚುವುದಿಲ್ಲ. ರಾಜ್ಯದ ಜನತೆಯ ಅಭಿವೃದ್ಧಿಯ ಮುಂದಿನ ದಾರಿಗೆ ಹೋಗುವುದಕ್ಕಾಗುವುದಿಲ್ಲ. ಅವರ ಯಾಪ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗುವುದಿಲ್ಲ ಎನ್ನುವಂತಹ ಸ್ಪಷ್ಟ ಮಾತುಗಳನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಸರ್ಕಾರ ಈ ರೀತಿಯಾಗಿ ಮೇಲ್ನೋಟಕ್ಕೆ ಪ್ರಚಾರಗಳಿಸುವಂತಹ ಬಜೆಟ್‌ನ್ನು ಮಂಡಿಸದೆ ಪ್ರಾಮಾಣಿಕವಾಗಿ ಆರ್ಥಿಕ ಕ್ಷೇತ್ರದ

ಅಭಿವೃದ್ಧಿಗೆ ಚಿಂತನೆ ಮಾಡುವಂತಹ ಒಂದು ಬಜೆಟ್‌ನ್ನು ಮಂಡಿಸಬೇಕಾಗಿತ್ತು, ಆದರೆ ಮಂಡಿಸಲಿಲ್ಲ, ಅದು ದುರ್ದೈವ, ಇದರ ಪ್ರತಿಫಲವನ್ನು ರಾಜ್ಯದ ಜನತೆ ಬರುವ ದಿನಗಳಲ್ಲಿ ನೀಡುತ್ತಾರೆ ಎನ್ನುವಂತಹ ವಿಶ್ವಾಸವಿದೆ ಈ ಬಜೆಟ್‌ನ್ನು ನೋಡಿ ಇವತ್ತು ಜನರು ಹೇಳುತ್ತಿದ್ದಾರೆ. ಈ ಸರ್ಕಾರಕ್ಕೆ ಕೊನೆಯ ಕಾಲ ಬಂದಿತ್ತು, ಕೊನೆಗಾಲ ಬಂದಿದೆ ಆದರೆ ಈ ರೀತಿಯಾಗಿ ಬಜೆಟ್‌ನ್ನು ಮಂಡಿಸುವ ಮೂಲಕ ಅದರ ಮೇಲೆ ಮತ್ತೊಂದು, ಮೊಳೆಯನ್ನು ಹೊಡೆದುಕೊಂಡಿದ್ದಾರೆ ಈ ಸರ್ಕಾರದವರು ಎನ್ನುವಂತಹದ್ದು ಇವತ್ತು ಸ್ಪಷ್ಟವಿದೆ, ಹಾಗಾಗಿ ಸರ್ಕಾರಕ್ಕೆ ನಿಶ್ಚಿತವಾಗಿ ಜನತೆಗೆ ಪ್ರಾಮಾಣಿಕವಾದಂತಹ ಕಾಳಜಿ ಇಲ್ಲ ಬಜೆಟ್ ಮೂಲಕ ವ್ಯಕ್ತವಾಗಿರುವುದರಿಂದ ಇದಕ್ಕೆ ತಕ್ಕ ಉತ್ತರವನ್ನು ರಾಜ್ಯದ ಜನರು ಬರುವ ದಿನಗಳಲ್ಲಿ ಕೊಡುತ್ತಾರೆ ಎನ್ನುವಂತಹ ವಿಶ್ವಾಸ ಹಾಗಾಗಿ ಇದನ್ನು ಇದು ಜನಪರವಾಗಿಲ್ಲ ಎನ್ನುವಂತಹ ಮಾತನ್ನು ಮತ್ತೊಮ್ಮೆ ಹೇಳಿ ತಾವು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ, ನಮಸ್ಕಾರ.

ಛೇರ್ಮನ್: ಈಗ ಮಾನ್ಯ ಕೃಷ್ಣಬೈರೇಗೌಡರು ಮಾತನಾಡಬೇಕು. ಅದಕ್ಕಿಂತ ಮೊದಲು ಮಾನ್ಯ ವಿಶ್ವನಾಥ್‌ರವರು 2 ಮಸೂದೆಗಳನ್ನು ಮಂಡನೆ ಮಾಡಿಬಿಡಿ.

10. ಶಾಸನ ರಚನೆ

(i) ವಿಧೇಯಕಗಳ ಮಂಡನೆ

ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ 2004

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು): ಮಾನ್ಯ ಛೇರ್ಮನ್‌ರವರೆ, "2004ನೇ ಸಾಲಿನ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಛೇರ್ಮನ್: ಪ್ರಸ್ತಾವ ಏನೆಂದರೆ "2004ನೇ ಸಾಲಿನ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು): ಮಾನ್ಯ ಛೇರ್ಮನ್‌ರವರೆ, "2004ನೇ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ."

ಛೇರ್ಮನ್: ವಿಧೇಯಕವನ್ನು ಮಂಡಿಸಲಾಗಿದೆ. **ಅನುಬಂಧ** I

(ii) ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ ವಿಧೇಯಕ, 2004

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಹೆಚ್.ವಿಶ್ವನಾಥ್ (ಸಹಕಾರಿ ಸಚಿವರು): ಮಾನ್ಯ ಛೇರ್ಮನ್‌ರವರೆ, "2004ನೇ ಸಾಲಿನ ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ."

ಛೇರ್ಮನ್: ಪ್ರಸ್ತಾವ ಏನೆಂದರೆ, "2004ನೇ ಸಾಲಿನ ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"